ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಸೋಮವಾರ ೧೧ನೇ ಮಾರ್ಚ್ ೧೯೯೧, ಫಾಲ್ಗುಣ ೨೦, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಸಂಜೆ 4 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ವಿತ್ತೀಯ ಕಾರ್ಯಕಲಾಪಗಳು
1991-92ನೇ ಸಾಲಿನ ಆಯವ್ಯಯ ಮಂಡನೆ

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಅನ್ನು ಓದುವವರಿದ್ದಾರೆ..

ಅಧ್ಯಕ್ಷರು : ಇನ್ನೂ ಸಭೆಯನ್ನು ಶುರುಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಭೆ ಶುರುವಾಗುವುದು ಕ್ಯಾಮರಾದವರು ಈ ಕಡೆ ಬಂದಮೇಲೆ ಎಂದು ಕಾಣುತ್ತದೆ. ಅವರು ಮುಖ್ಯಮಂತ್ರಿಗಳಿಗೆ ಘೇರಾವ್ ಮಾಡಿದ್ದಾರೆ. ಅವರಿಗೆ ಸ್ವಲ್ಪ ರಕ್ಷಣೆ ಕೊಡಿ.

ಅಧ್ಯಕ್ಷರು : ಮಾರ್ಷಲ್ ಎಲ್ಲಿ ? Order, order, Clear the Photographers. please. ಈಗ ಮುಖ್ಯಮಂತ್ರಿಗಳು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಒಂದು ಸಂಪ್ರದಾಯ ಇವತ್ತು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಬಜೆಟ್‌ನ್ನು ಓದುತ್ತಾರೆ. ಅದೆಲ್ಲವೂ ಕೂಡ ಇವತ್ತಿನ ದಿವಸ ಬಹಿರಂಗವಾಗಿದೆ. ಇದು ಬಹಿರಂಗವಾಗಿ ಹಕ್ಕು ಚ್ಯುತಿಯಾಗಿದೆ. ಇವತ್ತು ಎಕ್ಸೈಸ್ ಬಾಬಿನಲ್ಲಿ ಒಂದು ಲೀಟರ್ ಲಿಕ್ಕರ್‌ಗೆ 20 ರೂಪಾಯಿ ಎಕ್ಸ್‌ಪೋರ್ಟ್ ಡ್ಯೂಟಿ ಇತ್ತು, ಅದನ್ನು 2 ರೂಪಾಯಿಗೆ ಇಳಿಸಿದ್ದಾರೆ. ಅದೇ ರೀತಿ ಸಿಲ್ಕ್ ಮೇಲೆ ಹಾಕಿದ್ದಂಥ ಮಾರಾಟ ತೆರಿಗೆಯನ್ನು ಸಹ ಇವತ್ತಿನ ದಿವಸ ಇಳಿಸಿದ್ದಾರೆ. ಇವತ್ತು ಬೀದಿಬೀದಿಗಳಲ್ಲಿ, ರಸ್ತೆಗಳಲ್ಲಿ ಜನ ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಏನು ಓದುತ್ತಿದ್ದಾರೆ ಅಥವಾ ಪ್ರಪೋಸಲ್ಸ್ ಇಡುತ್ತಿದ್ದಾರೆ.....

ಅಧ್ಯಕ್ಷರು : ಅದರ ಬಗ್ಗೆ ನೀವು ಬರೆದು ಕಳಿಸಿದ್ದೀರಾ?

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ..

ಅಧ್ಯಕ್ಷರು : ನೀವು ಬರೆದು ಕಳಿಸಿದ್ದೀರಾ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸದೆ ಅವರಿಗೆ ಅಗೌರವ ಉಂಟುಮಾಡಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಇನ್ನೂ ಗೌರವ ಸಲ್ಲಿಸಿಲ್ಲ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗ 1991-92ರ ಬಜೆಟ್ ಅಂದಾಜುಗಳನ್ನು ಮಂಡಿಸಲ್ಲಿದ್ದೇನೆ. ಕಳೆದ ವರ್ಷ, ಅನೇಕ ಸವಾಲುಗಳ ನಡುವೆಯೂ ರಾಜ್ಯದಲ್ಲಿ ನಾವು ಆರ್ಥಿಕ ಸುಭದ್ರತೆ ಮತ್ತು ಸ್ಥಿರತೆಯನ್ನು ಸಾಧಿಸಿದೆವು. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದ ಸಮಯದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯು ಬಹಳ ಹದಗೆಟ್ಟಿತ್ತು. ಆದಾಯವನ್ನು ಹೆಚ್ಚಿಸುವ ಸಲುವಾಗಿ ಮತ್ತು ಅನಗತ್ಯ ವೆಚ್ಚವನ್ನು ತಗ್ಗಿಸುವ ಸಲುವಾಗಿ 1990-91ನೇ ವರ್ಷದಲ್ಲಿ ಕಟ್ಟುನಿಟ್ಟಿನ ಪ್ರಯತ್ನಗಳನ್ನು ಮಾಡಿದ್ದರಿಂದ ಉತ್ತಮ ಫಲಿತಾಂಶ ದೊರೆತು, ಈ ವರ್ಷ, ಹಿಂದಿನ ಕೆಲವು ವರ್ಷಗಳಿಗಿಂತಲೂ ಹೆಚ್ಚು ಆತ್ಮ ವಿಶ್ವಾಸದಿಂದ ಅಭಿವೃದ್ಧಿ ಯೋಜನೆಯನ್ನು ಹಾಕಿಕೊಳ್ಳುವುದು ನಮಗೆ ಸಾಧ್ಯವಾಗಿದೆ.

2. 1990-91 ರಲ್ಲಿ ಹಲವಾರು ಗಮನಾರ್ಹ ಘಟನೆಗಳು ನಡೆದವು. ಕೋಮು ಸೌಹಾರ್ದತೆ ಮತ್ತು ಶಾಂತಿಯುತ ಸಹಬಾಳ್ವೆಗೆ ಹೆಸರುವಾಸಿಯಾದ ನಮ್ಮ ರಾಜ್ಯವು, ದೇಶದಲ್ಲಿ ತಲೆದೋರಿದ ಕೆಲವು ವಿವಾದಗ್ರಸ್ತ ಸಂಗತಿಗಳ ಸುಳಿಗೆ ಸಿಲುಕಿ ಹಲವಾರು ಜಿಲ್ಲೆಗಳಲ್ಲಿ ಗಲಭೆಗಳನ್ನು ಎದಿರಿಸಬೇಕಾಯಿತು. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆದ ಈ ಗಲಭೆಗಳಿಂದ ಜೀವಹಾನಿ ಆಸ್ತಿಪಾಸ್ತಿ ನಾಶ ಉಂಟಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ತಾತ್ಕಾಲಿಕ ತಡೆ ಉಂಟಾಯಿತು. ಇಂಥ ಘಟನೆಗಳು ನಡೆದದ್ದು ಶಾಂತಿಯುತ ರಾಜ್ಯವೆಂದು ಖ್ಯಾತಿಗಳಿಸಿದ್ದ ನಮ್ಮ ರಾಜ್ಯಕ್ಕೆ ಒಂದು ಕಳಂಕ. ಆದಾಗ್ಯೂ, ನಮ್ಮ ಆಡಳಿತವು ಸಂದರ್ಭಕ್ಕೆ ತಕ್ಕಂತೆ ಪ್ರತಿಸ್ಪಂದಿಸಿ, ಹಾನಿಗೀಡಾದವರಿಗೆ ತಕ್ಷಣ ಪರಿಹಾರ ಒದಗಿಸಿ ಶ್ಲಾಘನೀಯ ಕೆಲಸ ಮಾಡಿದೆ. ರಾಜ್ಯದಲ್ಲಿ ಶಾಂತಿ ಸ್ಥಾಪಿಸುವುದಕ್ಕೆ ಧೃಡ ಸಂಕಲ್ಪದಿಂದ ದುಡಿದ ಎಲ್ಲ ಅಧಿಕಾರಿಗಳಿಗೂ, ಸಾರ್ವಜನಿಕರಿಗೂ ನಾನು ಆಭಾರಿಯಾಗಿದ್ದೇನೆ. ನಾವು, ಜೀವ ಮತ್ತು ಆಸ್ತಿಪಾಸ್ತಿಗಳ ನಷ್ಟಕ್ಕೆ ಪರಿಹಾರ ನೀಡಿ, ಹಾನಿಗೀಡಾದ ಕುಟುಂಬಗಳಿಗೆ ನೆರವನ್ನು ಒದಗಿಸಿದ್ದರೂ, ನಾವು ಮಾಡಬೇಕಾದ್ದು ಇನ್ನೂ ಬಹಳಷ್ಟಿದೆ ಎಂದು ನಾನು ಭಾವಿಸುತ್ತೇನೆ. ಹಾನಿಗೀಡಾದ ಕುಟುಂಬಗಳಿಗೆ ಪರಿಹಾರ ಒದಗಿಸುವುದಕ್ಕೆ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ರಾಜ್ಯದಲ್ಲಿ ಕೋಮು ಸೌಹರ್ದತೆ ಹೆಚ್ಚಿಸುವ ಹಾಗೂ ಕಾನೂನು ಪಾಲನೆ ಮತ್ತು ಸುವ್ಯವಸ್ಥೆಯ ನಮ್ಮ ಈ ಪ್ರಯತ್ನಕ್ಕೆ ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ಸಹಕಾರ ನೀಡಬೇಕೆಂದು ನಾನು ಕೋರುತ್ತೇನೆ.

3. ಈ ಸಂಕಷ್ಟಗಳ ಜೊತೆಗೆ ಈ ವರ್ಷ ನಮ್ಮ ರಾಜ್ಯಕ್ಕೆ ಮಳೆರಾಯನ ಕೃಪೆಯೂ ಇಲ್ಲವಾಯಿತು. 100 ತಾಲೂಕುಗಳು ಬರಗಾಲಕ್ಕೆ ತುತ್ತಾಗಿವೆ ಮತ್ತು 4758 ಗ್ರಾಮಗಳು ಕುಡಿಯುವ ನೀರಿನ ಅಭಾವಕ್ಕೆ ಈಡಾಗಿವೆ. 70.80 ಲಕ್ಷ ಹೆಕ್ಟೇರುಗಳ ಒಟ್ಟು ಮುಂಗಾರು ಬಿತ್ತನೆ ಪ್ರದೇಶದ ಶೇಕಡಾ 99 ರಷ್ಟು ಭಾಗದಲ್ಲಿ ಅಂದರೆ 70.153 ಲಕ್ಷ ಹೆಕ್ಟೇರುಗಳಲ್ಲಿ ಮುಂಗಾರು ಬಿತ್ತನೆಯಾಗಿದ್ದರೂ, 25.66 ಲಕ್ಷ ಹೆಕ್ಟೇರುಗಳ ಪ್ರದೇಶವು ಅತಿವೃಷ್ಟಿಯಿಂದ ಹಾನಿಗೊಳಗಾಯತು. 1.39 ಲಕ್ಷ ಹೆಕ್ಟೇರುಗಳ ಪ್ರದೇಶವು ಅತಿವೃಷ್ಟಿಯಿಂದ ಹಾನಿಗೊಳಗಾಯಿತು. ಹಿಂಗಾರು ಅವಧಿಯಲ್ಲಿ ಬಿತ್ತುವ ಗುರಿಯಿಟ್ಟುಕೊಂಡಿದ್ದ ಶೇ. 102.3 ರಷ್ಟು ಭಾಗದಲ್ಲಿ ಅಂದರೆ 29.78 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆಯಾಗಿದೆ. ಮಳೆಯ ಅಭಾವದಿಂದ ಬೆಳೆಯ ಉತ್ಪಾದನೆಯ ಮೇಲೆ ಅದರಲ್ಲೂ ಧಾನ್ಯಗಳ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ. ಆಪತ್ಕಾಲ ಪರಿಹಾರ ನಿಧಿಯನ್ನು ಬಳಸಿಕೊಳ್ಳುವುದರ ಜೊತೆಗೆ, ಕುಡಿಯುವ ನೀರಿನ ಮತ್ತು ಉದ್ಯೋಗದ

ಕನಿಷ್ಠ ಅವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ ಅಭಾವಪೀಡಿತ ಪ್ರದೇಶಗಳಲ್ಲಿ ಯೋಜನಾ ನಿಧಿಯನ್ನು ಉಪಯೋಗಿಸಿಕೊಳ್ಳಲು ನಾವು ಕ್ರಮಗಳನ್ನು ಕೈಗೊಂಡಿದ್ದೇವೆ. ಅಭಾವಪೀಡಿತ ಪ್ರದೇಶಗಳಲ್ಲಿ ಜನರ ಕಷ್ಟಗಳನ್ನು ನಿವಾರಿಸಲು, ಕುಡಿಯುವ ನೀರಿಗಾಗಿ ಅಥವಾ ಉದ್ಯೋಗಕ್ಕಾಗಿ ಮುಂಬರುವ ತಿಂಗಳುಗಳಲ್ಲಿ ಎಷ್ಟೇ ಹಣದ ಅಗತ್ಯವಿದ್ದರೂ ಅದನ್ನು ಖರ್ಚು ಮಾಡಲು ಸರ್ಕಾರ ಹಿಂಜರಿಯುವುದಿಲ್ಲವೆಂದು ನಾನು ಈ ಸದನಕ್ಕೆ ಆಶ್ವಾಸನೆ ನೀಡುತ್ತೇನೆ. ತೊಂದರೆಗೀಡಾದ ತಾಲೂಕುಗಳಲ್ಲಿ ಜಾನುವಾರುಗಳಿಗೆ ಮೇವನ್ನು ಒದಗಿಸುವ ಒಂದು ಯೋಜನೆಯನ್ನು ಸಹ ಕಾರ್ಯಗತಗೊಳಿಸಲಾಗುತ್ತದೆ.

4. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರದ ಕೆಲವು ಪ್ರಮುಖ ಸಾಧನೆಗಳನ್ನು ಇಲ್ಲಿ ಮತ್ತೆ ಹೇಳಲಿಚ್ಛಿಸುತ್ತೇನೆ. ಎಂದರೆ :

(i) ಭೂ ಸುಧಾರಣಾ ಅಧಿನಿಯಮದ ಮೇರೆಗೆ 'ಡಿ' ದರ್ಜೆಯ 10 ಎಕರೆಗಳಿಗಿಂತ ಕಡಿಮೆ ಭೂಮಿಯ ಅಥವಾ ಅದಕ್ಕೆ ಸಮಾನವಾದ ಭೂಹಿಡುವಳಿ ಹೊಂದಿರುವ ಮಾಜಿ ಗೇಣಿದಾರರು ಸಂದಾಯ ಮಾಡಬೇಕಾದ ಕಂತನ್ನು ಮಾಫಿ ಮಾಡಲಾಗಿದೆ. ಇದರಿಂದ ಬೊಕ್ಕಸಕ್ಕೆ 1249.51 ಲಕ್ಷ ರೂಪಾಯಿಗಳ ವೆಚ್ಚವುಂಟಾಗುತ್ತದೆ.

(ii) ಸಣ್ಣ ಭೂ ಹಿಡುವಳಿದಾರರ ಅನುಕೂಲಕ್ಕಾಗಿ, ಹಿಡುವಳಿಗಳನ್ನು ತುಂಡು ಮಾಡುವುದನ್ನು ಮತ್ತು ಒಟ್ಟುಗೂಡಿಸುವುದನ್ನು ನಿಷೇಧಿಸುವ ಅಧಿನಿಯಮವನ್ನು ರದ್ದುಪಡಿಸಲಾಗಿದೆ.

(iii) ನಾವು ಈಗ ಕೃಷಿ ಪಾಸ್ ಪ್ರಸ್ತಕಗಳನ್ನು ನೀಡುತ್ತಿದ್ದೇವೆ. ಇದರಿಂದ ಗ್ರಾಮ ಲೆಕ್ಕಿಗರ ಪ್ರಸ್ತಕಗಳಲ್ಲಿ ಮಾಡಿದ ನಮೂದನೆಗಳನ್ನು ತಾಳೆ ನೋಡಲು ಸಾಧ್ಯವಾಗುತ್ತದೆ. ಈ ಪಾಸ್ ಪುಸ್ತಕಗಳಲ್ಲಿ ರೈತರಿಗೆ ತನ್ನ ಜಮೀನಿಗೆ ಸಂಬಂಧಿಸಿದ ಎಲ್ಲ ವಿವರಗಳು ದೊರೆಯುತ್ತವೆ.

(iv) ಕೆಲವು ಷರತ್ತುಗಳಿಗೊಳಪಟ್ಟ ಅನಧಿಕೃತ ವ್ಯವಸಾಯವನ್ನು ಸಕ್ರಮಗೊಳಿಸುವುದಕ್ಕಾಗಿ ಭೂ ಕಂದಾಯ ಅಧಿನಿಯಮದ 94 ಮತ್ತು 95 ನೇ ಪ್ರಕರಣಗಳನ್ನು ತಿದ್ದುಪಡಿ ಮಾಡಲಾಗಿದೆ ಮತ್ತು ಕೃಷಿಯೇತರ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತನೆ ಮಾಡುವುದಕ್ಕೆ ಸಂಬಂಧಿಸಿದಂತೆ ಕಾನೂನು ಉಪಬಂಧಗಳಲ್ಲಿ ಇದ್ದ ಲೋಪವನ್ನು ಸರಿಪಡಿಸಲಾಗಿದೆ.

(v) ಅನುವಂಶಿಕ ಶಾನುಭೋಗರ ಪಿಂಚಣಿ ಕುರಿತ ಬೇಡಿಕೆಗಳ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗದೆ ಆ ಬೇಡಿಕೆಯನ್ನು ಪರಿಗಣಿಸಲು ನಾವು ಒಪ್ಪಿಕೊಂಡಿದ್ದೇವೆ. ಇದರಿಂದಾಗಿ ರಾಜ್ಯಕ್ಕೆ 2.35 ಕೋಟಿ ರೂ.ಗಳ ವೆಚ್ಚವುಂಟಾಗುತ್ತದೆ.

(vi) ರಾಜ್ಯದ ಕೈಗಾರಿಕಾ ನೀತಿಯನ್ನು ಪ್ರಕಟಿಸಲಾಗಿದೆ.

(vii) ಗ್ರಾಮ ಸಹಾಯಕರ ಗೌರವಧನವನ್ನು ತಿಂಗಳಿಗೆ 300 ರೂಪಾಯಿಗಳಿಂದ 500 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

(viii) ಪಶ್ಚಿಮ ಕರಾವಳಿಯ ಜನರ ಅವಶ್ಯಕತೆಗಳನ್ನು ಪೂರೈಸುವ ಕೊಂಕಣ ರೈಲ್ವೆ ಬಂಡವಾಳದಲ್ಲಿ ನಮ್ಮ ಪಾಲನ್ನು ನೀಡಲು ಸಮ್ಮತಿಸಿದ್ದೇವೆ. ಈಗಾಗಲೇ ಮೊದಲ ಕಂತಾಗಿ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

(ix) ನೆನೆಗುದಿಯಲ್ಲಿ ಬಿದ್ದಿದ್ದ ವಿಜಯನಗರ ಉಕ್ಕು ಸ್ಥಾವರವನ್ನು ಜಂಟಿ ವಲಯದ ಅಡಿ ಪುನಶ್ಚೇತನಗೊಳಿಸಲಾಗಿದ್ದು, ಕೈಗಾರಿಕಾ ಲೈಸನ್ಸನ್ನು ನೀಡುವ ಸಲುವಾಗಿ ಈಗ ವಿಷಯವು ಭಾರತ ಸರ್ಕಾರದ ಮುಂದಿದೆ. ಈ ವರ್ಷವೇ ಕೆಲಸವನ್ನು ಪ್ರಾರಂಭಿಸುವ

ನಂಬಿಕೆ ನಮಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ಒಪ್ಪಂದ ಪತ್ರಕ್ಕೆ ಸಹಿ ಹಾಕಲಾಗಿದೆ.

(x) ನೀರಾವರಿ ಪಂಪ್ಪೂಸೆಟ್ಟುಗಳ ವಿದ್ಯುತ್ ಶುಲ್ಕವನ್ನು 5 ಅಶ್ವಶಕ್ತಿಯವರೆಗಿನ ಪಂಪುಸೆಟ್ಟುಗಳಿಗೆ ಪ್ರತಿ ವರ್ಷಕ್ಕೆ ಪ್ರತಿ ಅಶ್ವಶಕ್ತಿಗೆ 90 ರೂಪಾಯಿಗಳಿಂದ 50 ರೂಪಾಯಿಗಳಿಗೆ ಹಾಗೂ 5 ಅಶ್ವಶಕ್ತಿಗೂ ಹೆಚ್ಚಿನ, ಆದರೆ, 10 ಅಶ್ವಶಕ್ತಿಯವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಪ್ರತಿವರ್ಷಕ್ಕೆ ಪ್ರತಿ ಅಶ್ವಶಕ್ತಿಗೆ 130 ರೂಪಾಯಿಗಳಿಂದ 60 ರೂಪಾಯಿಗಳಿಗೆ ನಾವು ಇಳಿಸಿದ್ದೇವೆ. ಈ ಕ್ರಮದಿಂದ ಸರ್ಕಾರಿ ಬೊಕ್ಕಸಕ್ಕೆ ಪ್ರತಿ ವರ್ಷ 16 ಕೋಟಿ ರೂಪಾಯಿ ಹೊರೆ ಬೀಳುತ್ತದೆ. ಈ ಕ್ರಮದಿಂದ, ಬರಗಾಲಕ್ಕೆ ತುತ್ತಾಗಿರುವ ಪ್ರದೇಶಗಳಲ್ಲಿಯೂ ಕೂಡ ನಮ್ಮ ರೈತಬಾಂಧವರು ಧೈರ್ಯದಿಂದ ಆಹಾರ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲು ಸಾಧ್ಯವಾಗುತ್ತದೆಂಬ ಭರವಸೆ ನನಗಿದೆ

(xi) ಡಾ : ಅಂಬೇಡ್ಕರರ ಜನ್ಮ ಶತಾಬ್ದಿ ಆಚರಣೆಯ ಅಂಗವಾಗಿ ವಿವಿಧ ವಲಯಗಳಿಂದ ನಾವು 30 ಕೋಟಿ ರೂಪಾಯಿಗಳಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಸೌಲಭ್ಯಗಳನ್ನು ಒದಗಿಸಲು ಮಾತ್ರ ಇದನ್ನು ಉಪಯೋಗಿಸಲಾಗುವುದು.

(xii) ನಿಗಮಗಳು ಸಂಘಗಳ ವ್ಯಾಪ್ತಿಗೊಳಪಟ್ಟಿರುವ ನೇಕಾರರು ಮತ್ತು ಗ್ರಾಮೀಣ ಕುಶಲ ಕರ್ಮಿಗಳಿಗಾಗಿ ಒಂದು ಹೊಸ ವಿಮಾ ಯೋಜನೆಯನ್ನು ಪ್ರಾರಂಭಿಸಲಾಗಿದೆ.

(xiii) ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಗಾಯಗೊಳ್ಳುವ ಪೋಲೀಸು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗೆ ನೆರವು ನೀಡಲು ವಿಮಾ ಯೋಜನೆಯೊಂದನ್ನು ಜಾರಿಗೆ ತರಲಾಗಿದೆ.

(xiv) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಪಾಲ್ಗೊಳ್ಳಲು ಖಾಸಗಿ ವಲಯಕ್ಕೆ ಆಹ್ವಾನ ನೀಡುವ ಒಂದು ನಿರ್ಣಯವನ್ನು ತತ್ವಶಃ ಒಪ್ಪಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ.

(xv) ದಿನಗೂಲಿ ಮತ್ತು ಸ್ಟೈಪೆಂಡರಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಇತ್ತಿರುವ ತೀರ್ಪುಗಳನ್ನು ಜಾರಿಗೊಳಿಸಲಾಗುತ್ತಿದೆ.

ನಾವು ಕೈಗೊಂಡ ಕಾರ್ಯಗಳಲ್ಲಿ ಕೆಲವನ್ನು ಮಾತ್ರ ಮೇಲೆ ದೃಷ್ಟಾಂತವಾಗಿ ಕೊಡಲಾಗಿದೆ.

5. ರಾಜ್ಯವು ತನ್ನ ಹಣಕಾಸು ವ್ಯವಹಾರಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತದೆ ಮತ್ತು ಅಭಿವೃದ್ಧಿಯನ್ನು ತೀವ್ರಗೊಳಿಸುವ ಹಾಗೂ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸುವ ಸಲುವಾಗಿ ಹಣವನ್ನು ಬಳಸುತ್ತಿದೆ. ಆದರೂ, ಕೇಂದ್ರದ ನೆರವು, ನೀಡಿಕೆ ಮಾರುಕಟ್ಟೆ ಸಾಲಗಳ ಪಾಲು ಮತ್ತು ಒಪ್ಪಂದಗಳ ಮೂಲಕ ಎತ್ತಿದ ಸಾಲಗಳ ಹಂಚಿಕೆ-ಈ ವಿಷಯದಲ್ಲಿ ನಮಗೆ ತೀವ್ರ ಹೊಡೆತ ಬಿದ್ದಿದೆ. ಒಂಬತ್ತನೆ ಆರ್ಥಿಕ ಆಯೋಗವು ತನ್ನ ಎರಡನೆ ವರದಿಯಲ್ಲಿ ತಳೆದಿರುವ ತೀರ್ಮಾನದಿಂದಾಗಿ ನಮ್ಮ ರಾಜ್ಯವು ಸುಮಾರು 232 ಕೋಟಿ ರೂಪಾಯಿಗಳಷ್ಟನ್ನು ಕಳೆದುಕೊಂಡಿರುವುದರ ಬಗ್ಗೆ ಹಿಂದಿನ ಹಣಕಾಸು ಮಂತ್ರಿಗಳು ಈ ಸದನದಲ್ಲಿ ಈಗಾಗಲೇ ಒಂದು ಹೇಳಿಕೆಯನ್ನು ನೀಡಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎತ್ತುವ ಒಟ್ಟು ಮಾರುಕಟ್ಟೆ ಸಾಲಗಳಲ್ಲಿ ರಾಜ್ಯಗಳ ಪಾಲು, ಕ್ರಮೇಣ ಕಡಿಮೆಯಾಗುತ್ತಿದೆ (ಅನುಬಂಧ-1 ನೋಡಿ)

6.ಗಾಡ್ಗಿಲ್ ಸೂತ್ರಕ್ಕೆ ಸೂಚಿಸಿರುವ ಬದಲಾವಣೆಗಳು ನಮ್ಮ ರಾಜ್ಯದ ಹಿತಾಸಕ್ತಿಗಳಿಗೆ ಬಾಧಕ ಉಂಟುಮಾಡಬಹುದು. ಪರಿಷ್ಕೃತ ಗಾಡ್ಗಿಲ್ ಸೂತ್ರದಲ್ಲಿ ತೆರಿಗೆ ವಸೂಲಾತಿ

ಅಳತೆಗೋಲಿಗೆ ಬದಲಾಗಿ ವಿಶೇಷ ಸಮಸ್ಯೆ ಆಧಾರಿತ ಅಳತೆ ಗೋಲಿಗೆ ಹೆಚ್ಚಿನ ಒತ್ತು ನೀಡಿರುವುದು ಇದಕ್ಕೆ ಕಾರಣ. ಸಂಪನ್ಮೂಲ ಹಂಚಿಕೆಗೆ ಭೌಗೋಳಿಕ ಪ್ರದೇಶವನ್ನು ಒಂದು ಅಳತೆಗೋಲನ್ನಾಗಿ ಸೇರಿಸಬೇಕೆಂದು ಹಾಗೂ ಒಟ್ಟು ಹಂಚಿಕೆಯಲ್ಲಿ ಸಾಲ ಅನುದಾನದ ಪ್ರಮಾಣವನ್ನು ಎಂದರೆ ಈಗಿರುವ 70:30 ರ ಪ್ರಮಾಣವನ್ನು 50:50 ರ ಪ್ರಮಾಣಕ್ಕೆ ಬದಲಿಸಬೇಕೆಂದು ನಾವು ಸಲಹೆ ಮಾಡಿದ್ದೇವೆ. ವಿದೇಶಿ ನೆರವಿನ ಯೋಜನೆಗಳಿಗೆ ಬಿಡುಗಡೆ ಮಾಡುವ ಹಣವನ್ನು ನೂರಕ್ಕೆ ನೂರರಷ್ಟು ರಾಜ್ಯಗಳಿಗೆ ಬಿಡುಗಡೆ ಮಾಡಬೇಕೆಂದು ಹಾಗೂ ಆ ನೆರವು ನೀಡುವ ಏಜೆನ್ಸಿಗಳು ವಿಧಿಸಿದ ಬಡ್ಡಿ ದರವನ್ನೇ ನಮಗೂ ವಿಧಿಸಬೇಕೆಂದು ಸಹ ನಾವು ಕೇಂದ್ರ ಸರ್ಕಾರವನ್ನು ಕೋರಿದ್ದೇವೆ. ಅಂತರ ರಾಷ್ಟ್ರೀಯ ವಲಯದಲ್ಲಿ ಅನಿಶ್ಚಿತತೆ ಸನ್ನಿವೇಶಗಳು ಇರುವುದರಿಂದ, ಸಂದಾಯಗಳ ಶಿಲ್ಕು ಆರ್ಥಿಕ ಕೊರತೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರದ ಅರ್ಥವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಕೇಂದ್ರ ಸರ್ಕಾರವು ತಳೆದ ದೃಢ ಸಂಕಲ್ಪವನ್ನು ನಾವು ಶ್ಲಾಘಿಸುತ್ತೇವೆ. ಅದೇ ಸಮಯದಲ್ಲಿ ಕೇಂದ್ರ ಸರ್ಕಾರದ ನಿರ್ಧಾರಗಳಿಂದ ರಾಜ್ಯಗಳ ಆರ್ಥಿಕ ಸ್ಥಿತಿಯ ಮೇಲೆ ಆಗುವ ಪರಿಣಾಮಗಳನ್ನೂ ಪರಿಶೀಲಿಸಬೇಕೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಒಕ್ಕೂಟ ಆರ್ಥಿಕ ವ್ಯವಸ್ಥೆಯಲ್ಲಿ, ರಾಜ್ಯಗಳ ಹಿತಾಸಕ್ತಿಗಳನ್ನು ಕೇಂದ್ರ ಸರ್ಕಾರದ ಹಿತಾಸಕ್ತಿಗಳಿಂದ ಪ್ರತ್ಯೇಕಿಸಿ ನೋಡಬಾರದೆಂದು ಕೇಂದ್ರ ಸರ್ಕಾರಕ್ಕೆ ನಾನು ಈ ಸದನದ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಜವಾಹರ್ ರೋಜ್‌ಗಾರ್ ಯೋಜನೆಯಂಥ ಯೋಜನೆಯಲ್ಲೂ, ಭಾರತ ಸರ್ಕಾರವು ಪ್ರಸಕ್ತ ಸಾಲಿನಲ್ಲಿಯೇ ಈಗಾಗಲೇ ಶೇಕಡಾ 10 ರಷ್ಟು ಕಡಿತವನ್ನು ಮಾಡಿದೆಯೆಂಬುದನ್ನು ಸದನಕ್ಕೆ ತಿಳಿಸಲು ನನಗೆ ವಿಷಾದವೆನಿಸುತ್ತದೆ. ಈ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಂಡು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಯೋಜನಾ ಆಯೋಗದ ಉಪಾಧ್ಯಕ್ಷರನ್ನು ನಾನು ಕೋರಿದ್ದೇನೆ. ಈ ವಿಷಯವನ್ನು ತುರ್ತಾಗಿ ಪರಿಶೀಲಿಸಬೇಕೆಂದು ಕೇಂದ್ರ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಇದರ ಜೊತೆಗೆ, ಕೇಂದ್ರ ವಲಯದ ಉದ್ಯಮಗಳು ಬಾಂಡ್‌ಗಳ ಮೂಲಕ ಸಾಲ ಎತ್ತುತ್ತಿರುವಂತೆಯೇ, ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಗಾಗಿ ಬಾಂಡ್‌ಗಳ ಮೂಲಕ ರಾಜ್ಯಗಳೂ ಸಾಲ ಎತ್ತಲು ಅನುಮತಿ ನೀಡಬೇಕೆಂದು ನಾನು ಕೋರಿದ್ದೇನೆ. ಈ ವಿಷಯಗಳನ್ನು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನಲ್ಲಿ ಪ್ರಸ್ತಾಪಿಸಬಹುದೆಂದು ಸೂಚಿಸಲಾಯಿತು. ಆದರೆ, ಈ ಸಭೆಯು ಈವರೆಗೂ ನಡೆದಿಲ್ಲ.

7. ಎಂಟನೇ ಆರ್ಥಿಕ, ಆಯೋಗವು, ಒಟ್ಟು ಸಂಪನ್ಮೂಲ ಹಂಚಿಕೆಯಲ್ಲಿ ನಮ್ಮ ಪಾಲನ್ನು ಶೇಕಡಾ 4.38 ಎಂದು ನಿಗದಿಪಡಿಸಿದ್ದು ಒಂಬತ್ತನೇ ಆರ್ಥಿಕ ಆಯೋಗವು ಶೇಕಡಾ 3.83 ಕ್ಕೆ ಇಳಿಸಿದೆ. ಒಂಬತ್ತನೇ ಆರ್ಥಿಕ ಆಯೋಗವು, ಸಾಲದ ಮರುಪಾವತಿ ವ್ಯವಸ್ಥೆಯಲ್ಲಿ ಮಾಡಿರುವ ಬದಲಾವಣೆಯಿಂದ ರಾಜ್ಯಕ್ಕೆ ಉಂಟಾಗಿರುವ ಪ್ರಯೋಜನ ಕೇವಲ 26.27 ಕೋಟಿ ರೂಪಾಯಿಗೆ ಸೀಮಿತವಾಗಿದೆ. ಇದು ಏನೇನೂ ಸಾಲದು. ಕನ್‌ಸೈನ್‌ಮೆಂಟ್ ತೆರಿಗೆ ಸಂಬಂಧದಲ್ಲಿ ಭಾರತ ಸರ್ಕಾರವು ವಿಧೇಯಕವನ್ನು ಇನ್ನೂ ಮಂಡಿಸಿಲ್ಲ, ಇದು ಜಾರಿಗೆ ಬಂದಲ್ಲಿ ನಮ್ಮ ರಾಜ್ಯಕ್ಕೆ ವರ್ಷಕ್ಕೆ 100 ಕೋಟಿ ರೂಪಾಯಿಗಳ ಆದಾಯ ದೊರೆಯುತ್ತದೆ. 1975 ರಿಂದಲೂ ಕೇಂದ್ರ ಮಾರಾಟ ತೆರಿಗೆ ದರವು ಶೇಕಡಾ 4 ರಷ್ಟೇ ಇದೆ. ರಾಜ್ಯ ಯೋಜನೆಯಲ್ಲಿ ಸಾಲದ ಗಾತ್ರ 624.56 ಕೋಟಿ ರೂಪಾಯಿಗಳು. 1990-91 ನೇ ವರ್ಷದಲ್ಲಿ ಮರು ಸಂದಾಯ ಮಾಡಬೇಕಾದ ಮೊತ್ತ 596.56 ಕೋಟಿ ರೂಪಾಯಿಗಳು ಹಾಗೂ 1991-92 ನೇ ವರ್ಷದಲ್ಲಿ ಮರುಸಂದಾಯ ಮಾಡಬೇಕಾದ ಮೊತ್ತ 724.93 ಕೋಟಿ ರೂಪಾಯಿಗಳು. ಕೇಂದ್ರ ಯೋಜನಾ ನೆರವಿನಲ್ಲಿ ಶೇಕಡಾ 70 ರಷ್ಟು ಭಾಗ ಸಾಲದ ರೂಪದಲ್ಲಿ ಇರುತ್ತದೆ

ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಸಣ್ಣ ಉಳಿತಾಯ ಸಂಗ್ರಹಣೆಯ ಮೇಲೆ ಪಡೆದ ಸಾಲಗಳ ಮೇಲೆ ಶೇಕಡಾ 13 ರಷ್ಟು ಬಡ್ಡಿ ಕೊಡಬೇಕಾಗುತ್ತದೆ. ಒಪ್ಪಂದದ ಮೂಲಕ ಎತ್ತಿದ ಸಾಲಗಳನ್ನು, ವರ್ಷಕ್ಕೆ ಶೇಕಡಾ 10.5 ರಿಂದ ಶೇಕಡಾ 14ರ ವರೆಗಿನ ಬಡ್ಡಿ ಸಹಿತ ಮರುಸಂದಾಯ ಮಾಡಬೇಕಾಗಿದೆ. ನಬಾರ್ಡ್, ಹುಡ್ಕೋ, ಎನ್‌ಸಿಡಿಸಿ, ಐಡಿಬಿಐ, ಎಲ್‌ಐಸಿ, ಜಿಐಸಿ, ಯುಟಿಐಗಳಿಂದ ಪಡೆದ ಸಾಲಗಳೆಲ್ಲವನ್ನು ಪರಿಗಣಿಸಿದಾಗ ರಾಜ್ಯದ ಮೇಲಿನ ಸಾಲದ ಹೊರೆ ಹೆಚ್ಚುತ್ತಲಿದೆ. ಒಂಬತ್ತನೇ ಹಣಕಾಸು ಆಯೋಗದ ಶಿಫಾರಸುಗಳು ಏನೇ ಇರಲಿ, ರಾಜ್ಯಗಳು ತೆಗೆದುಕೊಳ್ಳುವ ಸಾಲಗಳನ್ನು ಕೇವಲ ಅಭಿವೃದ್ಧಿ ಕಾರ್ಯಗಳಿಗೇ ಬಳಸಿದಲ್ಲಿ ಮತ್ತು ಸರ್ಕಾರಕ್ಕೆ ನಗದು ರೂಪದ ಆದಾಯ ಇರದಿದ್ದಲ್ಲಿ, ರಾಷ್ಟ್ರೀಯ ಅಭಿವೃದ್ಧಿ ಮಂಡಿಲಿಯು ಆ ಸಾಲಗಳ ಮರುಸಂದಾಯದ ಅವಧಿ ಬಗ್ಗೆ ಅಥವಾ ಅವುಗಳನ್ನು ಮಾಫಿ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳುವುದು ಅನಿವಾರ್ಯ. ಹಾಗೆ ಮಾಡಿದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು.

8. ಸಹಕಾರ ವಲಯದಲ್ಲಿ 10,000 ರೂಪಾಯಿಗಳವರೆಗಿನ ಕೃಷಿ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ ಎಂಬುದನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಆದ್ದರಿಂದ, ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಿ, ರೈತ ಸಮುದಾಯಕ್ಕೆ ಇನ್ನಷ್ಟು ಸಾಲ ನೀಡಿ ಅವರಿಗೆ ನೆರವು ನೀಡುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮನ್ನಾ ಮಾಡಬೇಕಾದ ಮೊಬಲಗು 132 ಕೋಟಿ ರೂಪಾಯಿಗಳು. ಮನ್ನಾ ಮಾಡುವ ಮೊಬಲಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ. ಬಡ್ಡಿ ರಹಿತ ದೀರ್ಘಾವಧಿ ಸಾಲವನ್ನು ನೀಡಬೇಕೆಂದು ನಾವು ಭಾರತ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೆವು. ಶೇಕಡಾ 10 ರ ಬಡ್ಡಿಯ ಅಲ್ಪಾವಧಿ ಸಾಲವನ್ನು ನೀಡಲು ಮಾತ್ರ ಭಾರತ ಸರ್ಕಾರ ಒಪ್ಪಿಕೊಂಡಿದೆಯೆಂಬುದನ್ನು ತಿಳಿಸಲು ನನಗೆ ವಿಷಾದವಾಗುತ್ತದೆ. ಈವರೆಗೆ, ಕೇಂದ್ರದ ಪಾಲಿನ ರೂಪವಾಗಿ ಅಪೆಕ್ಸ್ ಬ್ಯಾಂಕು 27 ಕೋಟಿ ರೂಪಾಯಿಗಳನ್ನು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು 6.50 ಕೋಟಿ ರೂಪಾಯಿಗಳನ್ನು ಸ್ವೀಕರಿಸಿವೆ. ರಾಜ್ಯ ಸರ್ಕಾರದ ಪಾಲಿಗೆ ಪ್ರತಿಯಾಗಿ ಅಷ್ಟೇ ಮೊತ್ತವನ್ನು ಸಾಲವಾಗಿ ಪಡೆದಿವೆ. ಸಾಲವನ್ನು ಬಡ್ಡಿ ರಹಿತ ಸಾಲವಾಗಿ ನೀಡುವಂತೆ ಈಗಲೂ ನಾನು ಭಾರತ ಸರ್ಕಾರಕ್ಕೆ ಪುನಃ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಈ ವಿಚಾರವನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

9. ಸಂಪನ್ಮೂಲಗಳ ಸಂಗ್ರಹಣೆ ಕುರಿತಂತೆ ರಾಜ್ಯಕ್ಕಿರುವ ಮಾರ್ಗೋಪಾಯಗಳು ಸೀಮಿತ. ಅವು ಕೂಡಾ ಭಾರತ ಸರ್ಕಾರದ ಕಾರ್ಯ ನೀತಿಗಳಿಗೆ ಬಹಳಷ್ಟು ಒಳಪಡುತ್ತವೆ. ಇಷ್ಟು ನಿರ್ಬಂಧಗಳ ನಡುವೆಯೂ ನಾವು ನಮ್ಮ ವೆಚ್ಚದ ನೀತಿಯನ್ನು ಅತ್ಯಂತ ಕಡುಬಡವನಿಗೂ ಪ್ರಯೋಜನವಾಗುವಂತೆ ಮತ್ತು ಪ್ರಮುಖ ವಲಯಗಳಲ್ಲಿ ಅಭಿವೃದ್ಧಿಯ ಗತಿಯನ್ನು ಕಾಯ್ದುಕೊಂಡು ಬರುವಂತೆ ರೂಪಿಸಬೇಕಾಗಿದೆ. ಹೀಗೆ ಮಾಡುವಾಗ, ರಾಜ್ಯದ ನಿಯಂತ್ರಣ ಕಾರ್ಯಗಳಿಗಾಗಿ ಹಾಗೂ ಈಗಾಗಲೇ ಸೃಜಿಸಲಾದ ಬಂಡವಾಳ ಸ್ವತ್ತುಗಳ ನಿರ್ವಹಣೆಗಾಗಿ ಸಾಕಷ್ಟು ಏರ್ಪಾಡುಗಳನ್ನು ಸಹ ಮಾಡಬೇಕಾಗಿದೆ. ನ್ಯಾಯಾಲಯಗಳು, ರೆವಿನ್ಯೂ ಕಚೇರಿಗಳು, ಪೋಲೀಸ್, ಖಜಾನೆ ಮತ್ತು ತೆರಿಗೆ ಸಂಗ್ರಹಣಾ ಇಲಾಖೆಗಳು, ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಬೇಕಾದ ಮೂಲಭೂತವಾದ ಅವಶ್ಯಕತೆಗಳಿಲ್ಲದೆ ಬಹಳ ತೊಂದರೆ ಅನುಭವಿಸುತ್ತಿವೆ ಎಂಬುದು ನಮ್ಮೆಲ್ಲರಿಗೂ ತಿಳಿದೇ ಇದೆ. ರಸ್ತೆಗಳು ಹಾಗೂ ಕಟ್ಟಡಗಳ ನಿರ್ವಹಣೆಗಾಗಿ ಸಾಕಷ್ಟು ಏರ್ಪಾಡು ಮಾಡಿರದ ಕಾರಣ, ಅನೇಕ ವರ್ಷಗಳಿಂದ ಅವು ನಿರ್ಲಕ್ಷ್ಯಕ್ಕೊಳಗಾಗಿವೆ. ವಿವಿಧ

ಅಭಿವೃದ್ಧಿ ಚಟುವಟಿಕೆಗಳಿಗೆ ಸಾಕಷ್ಟು ಹಣ ಒದಗಿಸುವ ಒತ್ತಡ ಬಂದುದರಿಂದ ಮೇಲೆ ಹೇಳಿದ ಚಟುವಟಿಕೆಗಳಿಗೆ ಅವಶ್ಯಕವಾದ ಮೊಬಲಗನ್ನು ಪೂರ್ಣವಾಗಿ ಒದಗಿಸಲು ನಮಗೆ ಸಾಧ್ಯವಾಗಲಿಲ್ಲ. ಎಲ್ಲಾ ಯೋಜನೇತರ ವೆಚ್ಚಗಳು ಅನುಪಯುಕ್ತವೆಂದು ಭಾವಿಸುವುದು ತಪ್ಪಾಗುತ್ತದೆ. ನಿಯಂತ್ರಣ ಹಾಗೂ ನಿರ್ವಹಣಾ ಕರ್ತವ್ಯಗಳು ಅಭಿವೃದ್ಧಿ ಕಾರ್ಯಗಳಷ್ಟೇ ಮಹತ್ವದ್ದಾಗಿವೆ. 1985-86ರಿಂದಲೂ, ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷವೂ ಕೇವಲ 50 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತಿದೆ. ಈಗ ಸ್ವತ್ತುಗಳ ನಿರ್ವಹಣೆಗಾಗಿ ನಾನು ಹಿಂದಿನ ವರ್ಷಗಳಿಗಿಂತಲೂ ಹೆಚ್ಚು ಹಣ ಒದಗಿಸಲು ಪ್ರಯತ್ನಿಸಿದ್ದೇನೆ. ಕೆಳಕಂಡ ಕೋಷ್ಟಕವು. ಈಗ ಮಾಡಲಾದ ನಿರ್ವಹಣಾ ಏರ್ಪಾಡಿನಲ್ಲಿನ ಹೆಚ್ಚಳವನ್ನು ತೋರಿಸುತ್ತದೆ.

(ಲಕ್ಷ ರೂಪಾಯಿಗಳು)

ಕ್ರ. ಸಂ.	ರಸ್ತೆ	1987-88	1988-89	1989-90	1990-91	1991-92
1.	ರಾಜ್ಯ ಹೆದ್ದಾರಿಗಳು	1717.00	2758.18	2758.18	2868.51	3955.89
2.	ಜಿಲ್ಲಾ ರಸ್ತೆಗಳು	831.50	272.12	272.12	219.85	362.07
3.	ಗ್ರಾಮೀಣ ರಸ್ತೆಗಳು	1455.00	1479.43	1479.43	1602.69	2510.55
4.	ಆಯಕಟ್ಟು ರಸ್ತೆಗಳು	277.50	308.50	308.50	320.84	360.35
5.	ಸೇತುವೆಗಳು	192.00	181.77	181.77	188.11	221.14
6.	ಒಟ್ಟು ಮೊತ್ತದ ಏರ್ಪಾಡು	—	—	—	500.00	—
	ಒಟ್ಟು	**4473.00**	**5000.00**	**5000.00**	**5700.00**	**7410.00**

ಈ ಏರ್ಪಾಡುಗಳೂ ಸಾಲದು. ಪ್ರಸಕ್ತ ವರ್ಷದಲ್ಲಿ ಹಾಗೂ ಮುಂಬರುವ ವರ್ಷಗಳಲ್ಲಿ ಅವುಗಳಿಗೆ ಸಾಕಷ್ಟು ನಿಧಿಗಳನ್ನು ಒದಗಿಸಲು ಸಾಧ್ಯವಾಗುವಂತೆ ದೃಢ ಪ್ರಯತ್ನಗಳನ್ನು ಮಾಡಲಾಗುವುದು.

10. ಕೇಂದ್ರ ಸರ್ಕಾರವು ಮಂಡಿಸಿ ಲೇಖಾನುದಾನ ಬಜೆಟ್ಟಿನಲ್ಲಿ ರಾಜ್ಯಕ್ಕೆ ಹೆಚ್ಚುವರಿ ಸಂಪನ್ಮೂಲಗಳು ದೊರೆಯುವ ಬಗ್ಗೆ ಯಾವುದೇ ಭರವಸೆ ಇಲ್ಲ. ಭಾರತ್ ಬಚತ್ ಬ್ಯಾಂಕಿನ ಸ್ಥಾಪನೆ, ಆದಾಯ ತೆರಿಗೆ ಹಾಗೂ ಅಬ್ಕಾರಿ ಸುಂಕಗಳ ದರಗಳನ್ನು ಮೊದಲಿನಂತೆಯೇ ಮುಂದುವರಿಸುವುದು ಹಾಗೂ ಸಹಾಯ ಧನಗಳನ್ನು ಕಡಿಮೆ ಮಾಡುವುದು, ಮುಂತಾದ ಕ್ರಮಗಳಿಂದ ರಾಜ್ಯದ ಸಂಪನ್ಮೂಲಗಳ ಮೇಲೆ ಪ್ರತಿಕೂಲ ಪರಿಣಾಮಗಳು ಉಂಟಾಗಬಹುದು. ಬಜೆಟ್ ವಿವರಗಳು ಲಭ್ಯವಿರದ ಕಾರಣ ಆ ಬಗ್ಗೆ ಪೂರ್ಣ ವಿಶ್ಲೇಷಣೆ ಮಾಡದೇ ವಿಮರ್ಶೆ ಮಾಡಲು ನಾನು ಇಚ್ಛಿಸುವುದಿಲ್ಲ. ಆದಾಗ್ಯೂ ಸಂಪನ್ಮೂಲ ಹಂಚಿಕೆಗೆ ಸಂಬಂಧಪಡುವ ಅನೇಕ ವಿಷಯಗಳ ಬಗ್ಗೆ ಅನಿಶ್ಚಿತತೆ ಇರಬಹುದೆಂಬ ಅನುಮಾನ ನನಗಿದೆ ಎಂಬ ಅಂಶವನ್ನು ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಇದು ಸ್ಪಷ್ಟವಾದ ಮೇಲೆ ಹೊಸ ಯೋಜನೆಗಳಿಗೆ ಸೂಕ್ತ ನಿಧಿಗಳನ್ನು ಒದಗಿಸುವುದು ಸಾಧ್ಯವಾಗುತ್ತದೆ.

11. ಭಾರತ ಸರ್ಕಾರವು ಎಂಟನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಆದಾಗ್ಯೂ, ನಮ್ಮ ಎಂಟನೆಯ ಪಂಚವಾರ್ಷಿಕ ಯೋಜನೆಯ ಕರಡನ್ನು ನಾವು ಸಿದ್ಧಪಡಿಸಿದ್ದೇವೆ. ಈ ಬಗ್ಗೆ ಯೋಜನಾ ಆಯೋಗದೊಡನೆ ಇನ್ನೂ ಚರ್ಚಿಸಿಲ್ಲ. ನಮ್ಮ ಎಂಟನೇ ಯೋಜನೆಯ ಕರಡಿಗೆ ಅನುಸಾರವಾಗಿಯೇ 1991-92ನೇ ಸಾಲಿನ ನಮ್ಮ ವಾರ್ಷಿಕ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಲು ನಾವು ಪ್ರಯತ್ನಿಸಿದ್ದೇವೆ. ಪ್ರಸಕ್ತ ವರ್ಷದಲ್ಲಿ ಸಂಪನ್ಮೂಲಗಳನ್ನು ಸಂಗ್ರಹಿಸುವ ಬಗ್ಗೆ

ತಾವು ತಳೆದಿರುವ ದೃಢ ನಿರ್ಧಾರದಿಂದ 1991-92ನೇ ಸಾಲಿನ ಯೋಜನಾ ವೆಚ್ಚವನ್ನು 1990-91ನೇ ಸಾಲಿಗಿಂತಲೂ ಶೇಕಡಾ 31.88 ರಷ್ಟು ಗಣನೀಯವಾಗಿ ಹೆಚ್ಚಿಸುವ ಆತ್ಮವಿಶ್ವಾಸ ಮೂಡಿದೆ. 1991-92 ನೇ ಸಾಲಿಗಾಗಿ 1510 ಕೋಟಿ ರೂಪಾಯಿಗಳ ಉದ್ದೇಶಿತ ಯೋಜನಾ ವೆಚ್ಚದ ವಲಯವಾರು ಹಂಚಿಕೆಗಳು ಈ ಕೆಳಗಿನಂತಿವೆ :

	ವಲಯ	ಕೋಟಿ ರೂಪಾಯಿ ಗಳಲ್ಲಿ	ಒಟ್ಟು ಮೊತ್ತದ ಶೇಕಡಾ ಪ್ರಮಾಣ
ಎ.	**ಆರ್ಥಿಕ ಸೇವೆಗಳು:**		
	ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸೇವೆಗಳು	154.99	10.26
	ಗ್ರಾಮೀಣ ಅಭಿವೃದ್ಧಿ	110.91	7.35
	ವಿಶೇಷ ಪ್ರದೇಶ ಕಾರ್ಯಕ್ರಮ (ಹೈದರಾಬಾದ್ ಕರ್ನಾಟಕ ಮತ್ತು ಗಡಿ ಪ್ರದೇಶಾಭಿವೃದ್ಧಿ)	60.00	3.97
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	247.13	16.37
	ವಿದ್ಯುಚ್ಛಕ್ತಿ	372.12	24.64
	ಉದ್ಯಮ ಮತ್ತು ಖನಿಜಗಳು	96.67	6.40
	ಸಾರಿಗೆ	93.13	6.17
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	1.88	0.12
	ಸಾಮಾನ್ಯ ಆರ್ಥಿಕ ಸೇವೆಗಳು	12.86	0.85
ಬಿ.	**ಸಾಮಾಜಿಕ ಸೇವೆಗಳು**		
	ಶಿಕ್ಷಣ ,ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	78.41	5.20
	ಆರೋಗ್ಯ	47.00	3.11
	ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿ	142.28	9.43
	ವಾರ್ತಾ ಮತ್ತು ಪ್ರಚಾರ	2.47	0.16
	ಪರಿಶಿಷ್ಟ ಜಾತಿಗಳು ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	28.01	1.85
	ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ	9.45	0.63
	ಸಮಾಜ ಕಲ್ಯಾಣ ಮತ್ತು ಪೌಷ್ಠಿಕ ಆಹಾರ	33.09	2.19
	ಇತರೆ ಸಾಮಾಜಿಕ ಸೇವೆಗಳು	0.80	0.05
ಸಿ.	ಸಾಮಾನ್ಯ ಸೇವೆಗಳು	18.80	1.25
	ಒಟ್ಟು	**1510.00**	**100.00**

1990-91ರ ಹಾಗೂ 1991-92ರ ಯೋಜನಾ ಹಂಚಿಕೆಗಳ ತೌಲನಿಕ ಪಟ್ಟಿಯನ್ನು ಅನುಬಂಧ - IIರಲ್ಲಿ ಕೊಡಲಾಗಿದೆ.

12. ಯೋಜನಾ ವೆಚ್ಚವನ್ನು 1510 ಕೋಟಿ ರೂಪಾಯಿಗಳಿಗೆ ನಿಗದಿ ಪಡಿಸಿದ ನಂತರ ಹೆಚ್ಚಿನ ಕಾರ್ಯಕ್ರಮಗಳಿಗೆ ಇನ್ನೂ 48ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ನಿರ್ಧರಿಸಲಾಯಿತು. ಈ ಕುರಿತಂತೆ ಮುಂದಿನ ಪ್ಯಾರಾಗಳಲ್ಲಿ ವಿವರಿಸಲಾಗಿದೆ. ಇದರಿಂದಾಗಿ, ಆಯವ್ಯಯದಲ್ಲಿ ಏರ್ಪಾಟು ಮಾಡಿದ ಒಟ್ಟು ಯೋಜನಾ ವೆಚ್ಚವು 1558 ಕೋಟಿ ರೂಪಾಯಿಗಳಷ್ಟಾಗುತ್ತದೆ. 1510 ಕೋಟಿ ರೂಪಾಯಿ ವೆಚ್ಚದಲ್ಲಿ ಜಿಲ್ಲಾ

ಪರಿಷತ್ ವಲಯದ ವೆಚ್ಚವು 357.46 ಕೋಟಿ ರೂಪಾಯಿಗಳಾಗಲಿದೆ. 1990-91ರಲ್ಲಿ ಈ ವಲಯಕ್ಕೆ 300.29 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. 1990-91ರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ 85.11 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದ್ದರೆ, ಈಗ 107.07 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಕೃಷಿ ಮತ್ತು ಗ್ರಾಮೀಣ ವಲಯದ ಇತರ ಕಾರ್ಯಕ್ರಮಗಳಿಗೆ ಯೋಜನಾ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸುವುದನ್ನು ಖಚಿತಪಡಿಸಿಕೊಂಡು, 1991-92ರ ಅವಧಿಯಲ್ಲಿ, ಅರ್ಥ ವ್ಯವಸ್ಥೆಯಲ್ಲಿ ಶೇಕಡಾ 5.5 ರಷ್ಟು ಬೆಳವಣಿಗೆ ಗತಿಯನ್ನು ಸಾಧಿಸುವ ಸಲುವಾಗಿ ಮೇಲ್ಕಂಡಂತೆ ವೆಚ್ಚಗಳನ್ನು ಮಾಡಲು ಉದ್ದೇಶಿಸಲಾಗಿದೆ. 1991-92ರಲ್ಲಿ, ಗ್ರಾಮೀಣ ವಲಯದ ವೆಚ್ಚದ ವಿವರ ಪಟ್ಟಿಯನ್ನು ಅನುಬಂಧ IIIರಲ್ಲಿ ಕೊಡಲಾಗಿದೆ.

ಉದ್ಯೋಗಾವಕಾಶ ಸೃಷ್ಟಿ

13. ಉದ್ಯೋಗ ವಿನಿಮಯ ಕಚೇರಿಗಳಲ್ಲಿರುವ ದಾಖಲೆಗಳ ಪ್ರಕಾರ, 12.50 ಲಕ್ಷಕ್ಕೂ ಹೆಚ್ಚು ಜನರು ನಿರುದ್ಯೋಗ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ. ಗ್ರಾಮೀಣ ಪ್ರದೇಶದ ಹಲವಾರು ಜನರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೋಂದಾಯಿಸದಿವುದು ಮತ್ತು ಉದ್ಯೋಗದಲ್ಲಿ ಇಲ್ಲದೇ ಇರುವುದು ನಮಗೆಲ್ಲಾ ತಿಳಿದೇ ಇದೆ. ಉದ್ಯೋಗಾವಕಾಶ ಸೃಜನೆಗಾಗಿ ಹಲವಾರು ಕಾರ್ಯಕ್ರಮಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ನಾವು ಹಣ ತೊಡಗಿಸುತ್ತಿದ್ದೇವಾದರೂ ಅದು ಸಾಕಾಗುತ್ತಿಲ್ಲ. ಜವಾಹರ್ ರೋಜಗಾರ್ ಯೋಜನೆ, ನೆಹರು ರೋಜಗಾರ್ ಯೋಜನೆ, ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಕ್ರಮ, ಬರಪೀಡಿತ ಪ್ರದೇಶ ಕಾರ್ಯಕ್ರಮ, ಕೆರೆಗಳ ಹೊಳೆತ್ತುವ ಕಾರ್ಯಕ್ರಮ, ಭೂಸಾರ ಸಂರಕ್ಷಣೆ, ಜಲ ವಿಭಾಜಕ ಪ್ರದೇಶಗಳ ನಿರ್ವಹಣೆ, ವನನಿರ್ಮಾಣ, ಹೋಸ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ, ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಂಥ ಕಾರ್ಯಕ್ರಮಗಳ ಅನುಷ್ಠಾನದಿಂದ ಗ್ರಾಮೀಣ ಪ್ರದೇಶದ ಸದೃಢ ಜನರಿಗೆ ಕನಿಷ್ಠ 15.40 ಕೋಟಿ ದುಡಿಮೆ ದಿನಗಳ ಉದ್ಯೋಗ ದೊರೆಯುವ ಸಂಭವವಿದೆ, 1991-92ನೇ ಸಾಲಿನಲ್ಲಿ ಈ ಯೋಜನೆಗಳಿಗೆ ನಾನು ಒಟ್ಟು 239.83 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ. ಈ ಯೋಜನೆಗಳಿಂದ ಎಷ್ಟು ಉದ್ಯೋಗ ಸೃಷ್ಟಿಯಾಗುತ್ತಿದೆ ಎನ್ನುವ ಬಗ್ಗೆ ನಾವು ಈವರೆಗೂ ಸರಿಯಾದ ಮೇಲ್ವಿಚಾರಣೆ ಮಾಡುತ್ತಿಲ್ಲ. ಕಾರ್ಯಕ್ರಮಗಳು ನಿರೀಕ್ಷಿತ ದುಡಿಮೆ ದಿನಗಳ ಕೆಲಸವನ್ನು ಸೃಜಿಸುವುದನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಮಟ್ಟದ ಕೇಂದ್ರ ಸಂಸ್ಥೆಯೊಂದು ಈ ಕಾರ್ಯದ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ. ಪರಿಸ್ಥಿತಿಯನ್ನು ಪರಿಶೀಲಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೆ ಇನ್ನು ಮುಂದೆ ಹೆಚ್ಚು ಹಣವನ್ನು ಒದಗಿಸುತ್ತೇನೆ. ಜವಾಹರ್ ರೋಜಗಾರ್ ಯೋಜನೆಯನ್ನು ಯಾವುದೇ ಆರ್ಥಿಕ ಮಿತವ್ಯಯದ ಕ್ರಮಗಳಿಗೆ ಒಳಪಡಿಸಬಾರದೆಂದು ಭಾರತ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಹಾಗೆ ಒಳಪಡಿಸಿದ್ದೇ ಆದರೆ, ಸಮಾಜದ ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸುವ ನಮ್ಮ ಪ್ರಯತ್ನದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಕುಡಿಯುವ ನೀರು

14. 5ಕುಡಿಯುವ ನೀರು ಪೂರೈಕೆಗೆ ಸರ್ಕಾರವು ಅತ್ಯಂತ ಹೆಚ್ಚು ಆದ್ಯತೆ ನೀಡುತ್ತದೆ. ಗ್ರಾಮೀಣ ನೀರು ಪೂರೈಕೆ ಕುರಿತ ಟೆಕ್ನಾಲಜಿ ಮಿಷನ್ ಕಾರ್ಯಕ್ರಮವೊಂದನ್ನು ಗುಲ್ಬರ್ಗ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದ ವ್ಯಾಪ್ತಿಗೆ 922 ಗ್ರಾಮಗಳು ಒಳಪಟ್ಟಿವೆ. ಈ ಕಾರ್ಯಕ್ರಮದ ಮೇರೆಗೆ, ಈವರೆಗೂ 246 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗಿದೆ.

1990-91ನೇ ಸಾಲಿನಲ್ಲಿ, ನಿಯತ ಕಾರ್ಯಕ್ರಮದ ಅಡಿ 317 ಗ್ರಾಮಗಳನ್ನು ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಅಡಿ 63 ಗ್ರಾಮಗಳನ್ನು ತರಲು ಉದ್ದೇಶಿಸಲಾಗಿದೆ. ಇನ್ನುಳಿದ 296 ಗ್ರಾಮಗಳನ್ನು 1991-92 ನೇ ಸಾಲಿನಲ್ಲಿ ಈ ವ್ಯಾಪ್ತಿಗೆ ತರಲಾಗುವುದು. ರಾಜ್ಯದಲ್ಲಿ ಮುಂದಿನ ಎರಡು ವರ್ಷಗಳಲ್ಲಿ ಟೆಕ್ನಾಲಜಿ ಮಿಷನ್ ರೂಪಿಸಿದ ಈ ಕಾರ್ಯಕ್ರಮದ ವ್ಯಾಪ್ತಿಗೆ ಕೋಲಾರ, ತುಮಕೂರು, ಬಳ್ಳಾರಿ, ಶಿವಮೊಗ್ಗ, ಬೀದರ್, ಉತ್ತರಕನ್ನಡ ಮತ್ತು ಹಾಸನ ಜಿಲ್ಲೆಗಳನ್ನು ಒಳಪಡಿಸಲು ನಾನು ಉದ್ದೇಶಿಸಿದ್ದೇನೆ.

15. ವಿಶ್ವಬ್ಯಾಂಕು ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮ, ನೈರ್ಮಲ್ಯ ಹಾಗೂ ಆರೋಗ್ಯ-ಶಿಕ್ಷಣ ಕಾರ್ಯಕ್ರಮ ಇವುಗಳ ವ್ಯಾಪ್ತಿಗೆ 14.50 ಕೋಟಿ ರೂಪಾಯಿಗಳ ವೆಚ್ಚದಲ್ಲಿ, 10 ಜಿಲ್ಲೆಗಳನ್ನು ತರಲು ಉದ್ದೇಶಿಸಲಾಗಿದೆ. 7 ವರ್ಷಗಳ ಅವಧಿಯಲ್ಲಿ ಎರಡು ಹಂತಗಳಲ್ಲಿ 1,000 ಗ್ರಾಮಗಳನ್ನು ಈ ವ್ಯಾಪ್ತಿಗೆ ತರಲಾಗುವುದು. 280 ಗ್ರಾಮಗಳನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ತರುವ ಮೊದಲ ಹಂತವನ್ನು 1991-92ರಲ್ಲಿ ಕೈಗೆತ್ತಿಕೊಳ್ಳಲಾಗುವುದು. ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳ ವ್ಯಾಪ್ತಿಗೆ 1990-91ನೇ ಸಾಲಿನಲ್ಲಿ 4,500 ಗ್ರಾಮಗಳನ್ನು ತರಲಾಗುತ್ತಿದೆ. ಮತ್ತು 1991-92 ಸಾಲಿನಲ್ಲಿ 5,000 ಗ್ರಾಮಗಳನ್ನು ಈ ಕಾರ್ಯಕ್ರಮಗಳ ವ್ಯಾಪ್ತಿಗೆ ತರಲಾಗುವುದು.

16. 1990-91ನೇ ವರ್ಷದಲ್ಲಿ ನಗರ ಪ್ರದೇಶಗಳಿಗೆ ಕುಡಿಯುವ ನೀರ ಸರಬರಾಜಿಗೆ ಸಂಬಂಧಿಸಿದಂತೆ ಒದಗಿಸಿರುವ ಒಟ್ಟು ಹಣ 25.17 ಕೋಟಿ ರೂಪಾಯಿಗಳು. 1991-92ನೇ ಸಾಲಿಗೆ ನಾನು ಈ ಮೊತ್ತವನ್ನು 38.83 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದೇನೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಒಟ್ಟು 22 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಮಂಡಳಿಯು ನಿರ್ವಹಿಸುತ್ತಿರುವ ಹಲವಾರು ನೀರು ಸರಬರಾಜು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಒಟ್ಟು 23 ಕೋಟಿ ರೂಪಾಯಿ ಮೊತ್ತವನ್ನು ಮಂಡಳಿ ವಸೂಲು ಮಾಡಬೇಕಿದೆ. ನೀರು ಸರಬರಾಜು ಶುಲ್ಕ ಬಾಕಿಯನ್ನು ಸರಿಯಾಗಿ ವಸೂಲಿ ಮಾಡುವಂತೆ ನಾನು ಮಂಡಳಿಗೆ ನಿರ್ದೇಶನ ನೀಡಿದ್ದೇನೆ. ಚಾಲ್ತಿಯಲ್ಲಿರುವ ಹಿಂದಿನ ಯೋಜನೆಗಳನ್ನು ಪೂರ್ಣಗೊಳಿಸಿ ಅನಂತರ ಹೊಸ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಂತೆ ಮಂಡಳಿಗೆ ನೀತಿ ನಿರ್ದೇಶನವನ್ನು ಕೊಡಲಾಗಿದೆ. 1991-92ನೇ ಸಾಲಿನಲ್ಲಿ 21 ಕಾಮಗಾರಿಗಳನ್ನು ಪೂರ್ಣಗೊಳಿಸುವ ನಂಬಿಕೆ ನಮಗಿದೆ. (ಕಾಮಗಾರಿಗಳ ವಿವರಗಳನ್ನು ಅನುಬಂಧ IVರಲ್ಲಿ ಕೊಡಲಾಗಿದೆ).

17. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 1991-92ನೇ ಸಾಲಿಗಾಗಿ ಒದಗಿಸಿರುವ ಯೋಜನಾ ಹಣ 16.83 ಕೋಟಿ ರೂಪಾಯಿಗಳು. 1992ನೇ ಮಾರ್ಚ್ ವೇಳೆಗೆ ಕಾವೇರಿ ಮೂರನೇ ಹಂತವನ್ನು ಪೂರ್ಣಗೊಳಿಸುವ ವಿಶ್ವಾಸ ಮಂಡಳಿಗಿದೆ. ಕಾವೇರಿ ನಾಲ್ಕನೇ ಹಂತದ ಯೋಜನೆಗೆ ಹಣ ಒದಗಿಸುವ ಬಗ್ಗೆ ಕಾರ್ಯನೀತಿಯನ್ನು ನಿರ್ಧರಿಸಲಾಗುತ್ತಿದೆ. ಈ ಯೋಜನೆಯ ಮೊದಲ ಹಂತಕ್ಕೆ 490 ಕೋಟಿ ರೂಪಾಯಿ ವೆಚ್ಚ ತಗಲುತ್ತದೆ. ಮೂರನೇ ಮತ್ತು ನಾಲ್ಕನೇ ಹಂತಗಳನ್ನು ಪೂರ್ಣಗೊಳಿಸಿದ ಮೇಲೆ, ಮಂಡಳಿಯು ನಗರಕ್ಕೆ ಪ್ರತಿದಿನ 975 ದಶಲಕ್ಷ ಲೀಟರ್ ನೀರನ್ನು ಒದಗಿಸುವ ನಿರೀಕ್ಷೆ ಇದೆ. ಅದಾಗ್ಯೂ, ಯೋಜನೆ ವೆಚ್ಚ ಮತ್ತು ಬೆಂಗಳೂರು ನಗರಕ್ಕೆ ನೀರು ಸಾಗಿಸುವುದಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ಬಹುಪಾಲು ಗ್ರಾಹಕರೇ ಭರಿಸಬೇಕಾಗುತ್ತದೆ.

18. ಕಳೆದ ಕೆಲವಾರು ವರ್ಷಗಳಲ್ಲಿ ಸಾಕಷ್ಟು ಮಳೆಯಾಗಲಿಲ್ಲ. ಅಲ್ಪಸ್ವಲ್ಪ ಮಳೆಯಾದರೂ ಅದು ಸಕಾಲದಲ್ಲಿ ಮತ್ತು ಎಲ್ಲ ಕಡೆಗಳಲ್ಲಿ ಆಗಲಿಲ್ಲ. ಈ ಕಾರಣದಿಂದಾಗಿ ಕೆರೆ ಮತ್ತು ಕೊಳವೆ ಬಾವಿಗಳಲ್ಲಿ ನೀರಿನಮಟ್ಟ ತೀರಾ ಕೆಳಕ್ಕೆ ಇಳಿದಿದೆ. ಅವುಗಳಿಗೆ ಮತ್ತೆ ನೀರಿನ ಒರತೆ ತುಂಬಿ ಬಂದಿಲ್ಲ. ಈ ಪರಿಸ್ಥಿತಿ ಎಷ್ಟು ಗಂಭೀರವಾದುದು ಎಂಬುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈಗ ಬಹುತೇಕ ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಬೇಸಿಗೆಯಲ್ಲೇ ಕೊರತೆ ಜಾಸ್ತಿ. ಈ ತುರ್ತು ಅಗತ್ಯವನ್ನು ಪೂರೈಸಲು ರಾಜ್ಯ ಸರ್ಕಾರವು ಆಪತ್ಕಾಲ ಪರಿಹಾರ ನಿಧಿಯಿಂದ 6.52 ಕೋಟಿ ರೂಪಾಯಿಗಳನ್ನು ಮತ್ತು ಇತರ ಯೋಜನಾ ನಿಧಿಯಿಂದ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕೊಳವೆ ಬಾವಿಗಳನ್ನು ಕೊರೆಯುವುದೂ ಸೇರಿದಂತೆ, ಕುಡಿಯುವ ನೀರನ್ನು ಒದಗಿಸುವ ಅನೇಕ ಯೋಜನೆಗಳನ್ನು ರಾಜ್ಯದ ಹಲವಾರು ನಗರಗಳು ಮತ್ತು ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಬೆಂಗಳೂರು ನಗರವೊಂದರಲ್ಲೇ 300 ಮತ್ತು ಹುಬ್ಬಳ್ಳಿ -ಧಾರವಾಡ ನಗರದಲ್ಲಿ 200 ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

19. ಬೆಂಗಳೂರು ನಗರ ಅಭಿವೃದ್ಧಿ

ಏಷ್ಯಾದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಬೆಂಗಳೂರು ನಗರವೂ ಒಂದು. ಇಲ್ಲಿ ಹಿತಕರ ಹವಾಮಾನವಿದೆ. ಶಾಂತಿಪ್ರಿಯ ಮತ್ತು ಸೌಜನ್ಯ ಪೂರ್ಣ ಜನರಿದ್ದಾರೆ. ಹೀಗಾಗಿ ಭಾರತದ ಎಲ್ಲ ಭಾಗದ ಜನರು ಇಲ್ಲಿಗೆ ಬಂದು ನೆಲೆಸಲು ಇಚ್ಛಿಸುತ್ತಾರೆ. ಇದಕ್ಕೆ ಕೈಗಾರಿಕಾ ಬೆಳವಣಿಗೆಯೂ ಸ್ವಲ್ಪಮಟ್ಟಿಗೆ ಕಾರಣ. ನಗರವು ತ್ವರಿತವಾಗಿ ಬೆಳೆಯುತ್ತಿರುವುದರಿಂದಾಗಿ ಸಾರ್ವಜನಿಕ ಸೇವೆಗಳು ಅಸಮರ್ಪಕ ಎನಿಸಿವೆ. ದಟ್ಟವಾಹನ ಸಂಚಾರ, ಕುಡಿಯುವ ನೀರು ಸರಬರಾಜಿನಲ್ಲಿ ಅಸಮರ್ಪಕ ವ್ಯವಸ್ಥೆ, ಕೊಳಗೇರಿಗಳು ಹೆಚ್ಚುತ್ತಿರುವುದು ಮುಂತಾದವುಗಳಿಂದ ಜನ ತೊಂದರೆ ಅನುಭವಿಸುತ್ತಿದ್ದಾರೆ. ಇವುಗಳ ಸುಧಾರಣೆಗೆ ಸರ್ಕಾರ ಸಂಕಲ್ಪ ಮಾಡಿದೆ. ವಿಶ್ವಬ್ಯಾಂಕ್ ನೆರವಿನ 314.29 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಮಗ್ರ ಸಾರಿಗೆ ಅಭಿವೃದ್ಧಿ ಯೋಜನೆಯೊಂದನ್ನು ನಾವು ಹಮ್ಮಿಕೊಂಡಿದ್ದೇವೆ. ಈ ಯೋಜನೆಯಲ್ಲಿ ನಾಲ್ಕು ಸಬ್-ವೇಗಳು ಮತ್ತು ನಾಲ್ಕು ಫ್ಲೈ-ಓವರ್‌ಗಳ ನಿರ್ಮಾಣ ಮತ್ತು 109.86 ಕೋಟಿ ರೂಪಾಯಿ ವೆಚ್ಚದಲ್ಲಿ ಬೆಂಗಳೂರು ಸಾರಿಗೆ ಸೇವಾ ಸುಧಾರಣೆ ಕಾರ್ಯಕ್ರಮವೂ ಸೇರಿದೆ. ಈ ಯೋಜನೆಗೆ ಒಪ್ಪಿಗೆ ಸಿಕ್ಕುವುದಕ್ಕೂ ಮೊದಲೇ, ಬೆಂಗಳೂರು ಮಹಾನಗರಪಾಲಿಕೆಯು ತನ್ನ ಸ್ವಂತ ನಿಧಿಗಳಿಂದ 2 ಸಬ್-ವೇಗಳು ಮತ್ತು 3ಫ್ಲೈಓವರ್‌ಗಳನ್ನು ನಿರ್ಮಿಸಲು ತೀರ್ಮಾನಿಸಿದೆ. ಬೆಂಗಳೂರು ನಗರದ ಭವ್ಯತೆಯನ್ನು, ಮುಂದಿನ ಪೀಳಿಗೆ ದೃಷ್ಟಿಯಿಂದ ಸಂರಕ್ಷಿಸಬೇಕಾಗಿದೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ಆಶ್ರಯದಲ್ಲಿ 'ಮುಖ್ಯಮಂತ್ರಿಗಳ ಬೆಂಗಳೂರು ಅಭಿವೃದ್ಧಿ ನಿಧಿ"ಯನ್ನು ಸ್ಥಾಪಿಸಲು ನಾನು ನಿರ್ಧರಿಸಿದ್ದೇನೆ. ನಗರದ ತುರ್ತು ಅಗತ್ಯತೆಗಳನ್ನು ಗಮನಿಸಿ ಈ ಪ್ರಾಧಿಕಾರವು ಅನೇಕ ಯೋಜನೆಗಳನ್ನು ಸಿದ್ಧಪಡಿಸಲಿದೆ. ಬೆಂಗಳೂರಿಗೆ ಅನೇಕ ಸಂಖ್ಯೆಯಲ್ಲಿ ಕೈಗಾರಿಕಾ ಸಂಸ್ಥೆಗಳು ಬಂದಿವೆ ಮತ್ತು ಕೈಗಾರಿಕೋದ್ಯಮಿಗಳು ಬಂದಿದ್ದಾರೆ. ಒಬ್ಬರೇ ಅಥವಾ ಜಂಟಿಯಾಗಿ, ಒಂದು ಅಥವಾ ಹೆಚ್ಚು ಯೋಜನೆಗಳನ್ನು ಕೈಗೊಂಡು, ಬೆಂಗಳೂರು ಅಭಿವೃದ್ಧಿಗೆ ತಮ್ಮ ಸಹಾಯ ಮತ್ತು ಸೇವೆ ಸಲ್ಲಿಸುವುದು ಅವರ ಕರ್ತವ್ಯವಾಗಿದೆ. ಈ ಪ್ರಯತ್ನಕ್ಕೆ ಉದಾರವಾದ ಪ್ರತಿಕ್ರಿಯೆ ದೊರೆಯುವುದೆಂಬ ನಂಬಿಕೆ ನನಗಿದೆ. ಅಲ್ಲದೆ, ಉದ್ದೇಶಿತ ನಿಧಿಗೆ ಅಲ್ಪ ಕಾಲದಲ್ಲೇ ಕನಿಷ್ಠ 100 ಕೋಟಿ ರೂಪಾಯಿ ಸಂಗ್ರಹವಾಗುವ ಸಾಧ್ಯತೆಯಿದೆ.

20. ಮುನಿಸಿಪಲ್ ಹಣಕಾಸು ವ್ಯವಸ್ಥೆ

ಆಕ್ಟ್ರಾಯ್ ಸುಂಕ ರದ್ದಾಗಿರುವುದು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿಯನ್ನು ಕುಂಠಿತಗೊಳಿಸಿದೆ. ವೇತನ ಮತ್ತು ಸೇವಾ ವೆಚ್ಚದಲ್ಲಿ ಹೆಚ್ಚಳ ಉಂಟಾಗಿದ್ದರಿಂದ ಅವುಗಳ ಕಾರ್ಯಸಾಮರ್ಥ್ಯ ಕುಗ್ಗಿದೆ. ಮುನಿಸಿಪಾಲಿಟಿಗಳು ಸರ್ಕಾರವನ್ನು ಅಷ್ಟಾಗಿ ಅವಲಂಬಿಸದಂತೆ ಮಾಡುವ ಸಲುವಾಗಿ ಅವುಗಳ ಆಂತರಿಕ ಸಂಪನ್ಮೂಲಗಳ ಸುಧಾರಣೆಗೆ ನಾನು ಮಾರ್ಗೋಪಾಯಗಳನ್ನು ಯೋಚಿಸುತ್ತಿದ್ದೇನೆ. ಪ್ರವೇಶ ತೆರಿಗೆ ವ್ಯಾಪ್ತಿಯನ್ನು ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸುವುದು ಅಂಥ ಒಂದು ಕ್ರಮವಾಗಿದೆ. ಈ ಬಗ್ಗೆ ವಿವರಗಳನ್ನು ನಂತರ ಈ ಸದನದ ಮುಂದೆ ಮಂಡಿಸುತ್ತೇನೆ.

21. ಸಾಕ್ಷರತೆ

ಸಾಕ್ಷರತೆಯು, ಅನೇಕ ತರಹದ ಅಂಧಕಾರದಿಂದ ವಿಮೋಚನೆ ಮಾಡುವ ಶಕ್ತಿ. ಸಾಕ್ಷರತೆಯಿಂದ, ಬಡವರು ಮತ್ತು ಹಿಂದುಳಿದವರು ತಾವು ಹಿಂದುಳಿದಿರುವುದಕ್ಕೆ ಮತ್ತು ಸೌಲಭ್ಯಗಳಿಂದ ವಂಚಿತರಾಗಿರುವುದಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಂಡಿರುತ್ತಾರೆ. ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣ 1961 ರಲ್ಲಿ ಶೇಕಡಾ 25.4ರಷ್ಟಿತ್ತು. ಈ ಪ್ರಮಾಣವು 1981ರಲ್ಲಿ ಶೇಕಡಾ 38.4ಕ್ಕೆ ಏರಿದ್ದರೂ, ರಾಜ್ಯದಲ್ಲಿ ಒಟ್ಟಾರೆ ಅನಕ್ಷರಸ್ಥರ ಸಂಖ್ಯೆ ಕಡಿಮೆಯೇನಾಗಿಲ್ಲ. 1988ರಲ್ಲಿ 15ರಿಂದ 35 ವರ್ಷದ ವಯೋ ಗುಂಪಿನಲ್ಲಿ, 60 ಲಕ್ಷ ಅನಕ್ಷರಸ್ಥರಿದ್ದರೆಂದು ಅಂದಾಜು ಮಾಡಲಾಗಿದೆ. ಅಕ್ಷರ ಜ್ಞಾನವನ್ನು ಮೂಡಿಸಲು ರಾಜ್ಯದಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಅನ್ನು ಪ್ರಾರಂಭಿಸಲಾಗಿದೆ.

22. ಬಿಜಾಪುರದಲ್ಲಿ 5.39 ಲಕ್ಷ ಅನಕ್ಷರಸ್ಥರಿಗೆ ಮತ್ತು ದಕ್ಷಿಣ ಕನ್ನಡದಲ್ಲಿ 2.44 ಲಕ್ಷ ಅನಕ್ಷರಸ್ಥರಿಗೆ ಸಾಕ್ಷರತೆಯನ್ನು ನೀಡಲು, 1990-91 ರಲ್ಲಿ ಈ ಎರಡೂ ಜಿಲ್ಲೆಗಳಲ್ಲಿ ಸಮಗ್ರ ಸಾಕ್ಷರತಾ ಆಂದೋಲನವನ್ನು ಪ್ರಾರಂಭಿಸಲಾಯಿತು. ಈ ಜಿಲ್ಲೆಗಳಲ್ಲಿ 1991 ರ ಮಾರ್ಚ್ ತಿಂಗಳಲ್ಲಿ ಈ ಆಂದೋಲನಗಳು ಮುಗಿಯಲಿವೆ. ಈಗಾಗಲೇ ಕೈಗೊಂಡಿರುವ ಪ್ರಯತ್ನಗಳನ್ನು ಬಲಪಡಿಸುವ ಸಲುವಾಗಿ ಈ ಎರಡೂ ಜಿಲ್ಲೆಗಳಲ್ಲಿ ತೆರಪಿನ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ರಾಯಚೂರು ಜಿಲ್ಲೆಯಲ್ಲಿ 5.91 ಲಕ್ಷ ಜನರಿಗೆ ಮತ್ತು ಮಂಡ್ಯ ಜಿಲ್ಲೆಯಲ್ಲಿ 4 ಲಕ್ಷ ಜನರಿಗೆ ಸಾಕ್ಷರತೆ ನೀಡುವ ಉದ್ದೇಶದಿಂದ, 1991-92 ರಲ್ಲಿ ರಾಯಚೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಮಗ್ರ ಸಾಕ್ಷರತಾ ಆಂದೋಲನಾ ಕೈಗೊಳ್ಳಲು ನಾವು ಉದ್ದೇಶಿಸಲಾಗಿದೆ. 1991-92 ರಲ್ಲಿ, ಇನ್ನೂ ಐದು ಜಿಲ್ಲೆಗಳಲ್ಲಿ ಎಂದರೆ. ಬೀದರ್. ಗುಲ್ಬರ್ಗ, ಬಳ್ಳಾರಿ, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಮಗ್ರ ಸಾಕ್ಷರತಾ ಆಂದೋಲನ ಕೈಗೊಳ್ಳಲು ನಾವು ಉದ್ದೇಶಿಸಿದ್ದೇವೆ. ಅಲ್ಲದೆ, ಗ್ರಾಮೀಣ ಸಾಕ್ಷರತಾ ಕಾರ್ಯಕ್ರಮ. ರಾಜ್ಯ ವಯಸ್ಕರ ಶಿಕ್ಷಣ ಯೋಜನೆಗಳು. ಸಾಕ್ಷರತೆ ಕುರಿತ ಸಾಮೂಹಿಕ ಕಾರ್ಯಕ್ರಮಗಳು ಮುಂತಾದ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳನ್ನು ಸಹ 1991-92 ರಲ್ಲಿ ಮುಂದುವರಿಸಲಾಗುವುದು. ಈ ಕಾರ್ಯಕ್ರಮಗಳಿಗೆ 8 ಕೋಟಿ ರೂಪಾಯಿಯ ಬಜೆಟ್ ಏರ್ಪಾಡು ಮಾಡಿದ್ದು, ಸುಮಾರು 4 ಲಕ್ಷ ಅನಕ್ಷರಸ್ಥರಿಗೆ ಪ್ರಯೋಜನವಾಗಲಿದೆ. ಎಂದರೆ, 1991-92ರಲ್ಲಿ ಒಟ್ಟು 25 ಲಕ್ಷ ಅನಕ್ಷರಸ್ಥರು ಅಕ್ಷರಸ್ಥರಾಗಲಿದ್ದಾರೆ. ಎಂಟನೆಯ ಯೋಜನಾವಧಿಯಲ್ಲಿ ಎಲ್ಲ ಜಿಲ್ಲೆಗಳನ್ನು ಈ ವ್ಯಾಪ್ತಿಗೆ ತರಲು ನಾನು ಉದ್ದೇಶಿಸಿದ್ದೇನೆ. ಇದರಿಂದ, ರಾಜ್ಯದ ಸಮಗ್ರ ಅಭಿವೃದ್ಧಿಯಲ್ಲಿ ನಮ್ಮ ಪ್ರಜೆಗಳು ತಮ್ಮ ಹಕ್ಕನ್ನು ಸಾಧಿಸಲು ಮತ್ತು ತಮ್ಮ ಪಾಲನ್ನು ಕೇಳಿ ಪಡೆಯಲು ಸಾಧ್ಯವಾಗುತ್ತದೆ.

23. ಶಿಕ್ಷಣ

ಶಿಕ್ಷಣದಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಈಗ ಲಭ್ಯವಿರುವ ಶಿಕ್ಷಣ ಸೌಲಭ್ಯಗಳನ್ನು ಕ್ರೋಢೀಕರಿಸಲು ಮತ್ತು ಸರಳಗೊಳಿಸಲು ಸರ್ಕಾರ ಉದ್ದೇಶಿಸಿದೆ. ವಿದೇಶೀ ನೆರವಿನೊಂದಿಗೆ ತಾಂತ್ರಿಕ ಶಿಕ್ಷಣ ಯೋಜನೆಯನ್ನು ಬಲಪಡಿಸುವ ಕಾರ್ಯವನ್ನು ಜಾರಿಗೆ ತರಲಾಗುತ್ತಿದೆ. 1991-92 ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ, ತಾಂತ್ರಿಕ ಶಿಕ್ಷಣಕ್ಕೆ 8.14 ಕೋಟಿ ರೂಪಾಯಿಗಳನ್ನು ಮತ್ತು ಸಾಮಾನ್ಯ ಶಿಕ್ಷಣಕ್ಕೆ 62.36 ಕೋಟಿ ರೂಪಾಯಿಯನ್ನು ನಿಗದಿಪಡಿಸಲಾಗಿದೆ. ಶಿಕ್ಷಣಕ್ಕೆ ನೀಡುವ ಯೋಜನೇತರ ಹಣವು, 1990-91 ರಲ್ಲಿ 715.25 ಕೋಟಿ ರೂಪಾಯಿ ಇದ್ದದ್ದು, 1991-92ರಲ್ಲಿ 840.85 ಕೋಟಿ ರೂಪಾಯಿಗೆ ಹೆಚ್ಚಿದೆ. ಇನ್ನೂ ಹೆಚ್ಚಿನ ಶಾಲೆಗಳನ್ನು ಪ್ರಾರಂಭಿಸುವ ಸಲುವಾಗಿ, ಮುಖ್ಯವಾಗಿ ಕೊಳಗೇರಿ ವಾಸಿಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ದುರ್ಬಲ ವರ್ಗದವರ ಮಕ್ಕಳಿಗಾಗಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಶಾಲೆಗಳನ್ನು ಪ್ರಾರಂಭಿಸುವ ಸಲುವಾಗಿ ಸರ್ಕಾರವು ಸಹಾಯ ಅನುದಾನ ನೀತಿಯನ್ನು ಪುನರ್ ಪರಿಶೀಲಿಸಲು ಉದ್ದೇಶಿಸಿದೆ. ಬಹುಕಾಲದಿಂದ ನೆರವು ಪಡೆಯುತ್ತಿರುವ ಮತ್ತು ಹಣಕಾಸಿನ ಬಲಹೊಂದಿರುವ ಸಂಸ್ಥೆಗಳಿಗೆ ಒಂದು ಸಮಂಜಸ ಮಿತಿಯಲ್ಲಿ ಸಹಾಯ ಅನುದಾನ ನೀಡುವುದು, ಹೊಸ ಶಾಲೆಗಳಿಗೆ ಪ್ರೋತ್ಸಾಹ ನೀಡುವುದು ಸಾಧ್ಯವಾಗುವಂತೆ ಈ ಸಹಾಯನುದಾನ ನೀತಿಯನ್ನು ಪುನರ್ ಪರಿಶೀಲಿಸಲಾಗುವುದು.

24. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಹಾಜರಾತಿಯನ್ನು ಸುಧಾರಿಸಲು "ಅಕ್ಷಯ ಯೋಜನೆ"

ಮಕ್ಕಳು ಅದರಲ್ಲೂ ಬಡ ಕುಟುಂಬಗಳ ಮಕ್ಕಳು ಪ್ರಾಥಮಿಕ ಶಾಲಾ ಮಟ್ಟದಲ್ಲಿ ಅರ್ಧದಲ್ಲಿಯೇ ಶಾಲೆಗಳನ್ನು ಬಿಟ್ಟುಬಡುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದು ನಮಗೆಲ್ಲರಿಗೂ ತಿಳಿದೇ ಇದೆ. ಈ ಮಕ್ಕಳನ್ನು ಆಗಾಗ್ಗೆ ದುಡಿಮೆಗೆ ತೊಡಗಿಸಿ ಕುಟುಂಬ ಆದಾಯಗಳಿಸಲಾಗುತ್ತಿದೆ. ಹೀಗೆ ಮಕ್ಕಳನ್ನು ದುದಿಮೆಗೆ ತೊಡಗಿಸುವುದರಿಂದಾಗಿ ನಮ್ಮ ಅರ್ಥ ವ್ಯವಸ್ಥೆಯನ್ನು ಮಾರ್ಪಡಿಸಲು ಬಳಸಬಹುದಾಗಿದ್ದ ಮಾನವ ಸಂಪನ್ಮೂಲ ಕಡಿಮೆಯಾಗುತ್ತಿದೆ. ವಿದ್ಯಾವಂತರಾಗುವ ಸದವಕಾಶದಿಂದ ಅವರನ್ನು ವಂಚಿಸಿದಂತಾಗುತ್ತದೆ. ಈ ಮಕ್ಕಳು ಶಾಲೆಗೆ ಹಾಜರಾಗಲು ಉತ್ತೇಜನ ನೀಡುವುದಕ್ಕಾಗಿ ಹಾಗೂ ಅವರನ್ನು ದುಡಿಮೆಗೆ ತೊಡಗಿಸುವುದನ್ನು ತಪ್ಪಿಸುವುದಕ್ಕಾಗಿ ಮುಂದಿನ ಶಿಕ್ಷಣ ವರ್ಷದಿಂದ 1 ರಿಂದ 7 ನೇ ತರಗತಿಯವರೆಗಿನ ಮಕ್ಕಳಿಗೆ ಪೌಷ್ಟಿಕವಾದ ಮಧ್ಯಾಹ್ನದ ಊಟ ನೀಡುವ ಕಾರ್ಯಕ್ರಮವನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ. ಇದಕ್ಕಾಗಿ ಯೋಜನೆಯ ಅಡಿಯಲ್ಲಿ 20 ಕೋಟಿ ರೂಪಾಯಿಗಳ ಸಾಂಕೇತಿಕ ಏರ್ಪಾಟನ್ನು ಮಾಡಿದ್ದೇನೆ. ಯೋಜನಾ ಆಯೋಗದ ಔಪಚಾರಿಕ ಒಪ್ಪಿಗೆಯನ್ನು ಪಡೆದ ನಂತರ ಇನ್ನೂ ಹೆಚ್ಚಿನ ನಿಧಿಗಳನ್ನು ಇದಕ್ಕಾಗಿ ಹಂಚಿಕೆ ಮಾಡಿ ಮುಂಬರುವ ಶೈಕ್ಷಣಿಕ ವರ್ಷದಿಂದ ಈ ಕಾರ್ಯಕ್ರಮವನ್ನು ಪ್ರಾರಂಭಿಸುವುದು ನಮಗೆ ಸಾಧ್ಯವಾಗುತ್ತದೆ.

25. ಸೋಂಕಿನಿಂದ ರಕ್ಷಣೆ

ಮಕ್ಕಳೇ ನಾಡಿನ ಭವಿಷ್ಯ. 0-6 ವಯಸ್ಸಿನೊಳಗಿನ ಮಕ್ಕಳನ್ನು ಸಾಮಾನ್ಯವಾಗಿ ಕಾಡುವ ಎಲ್ಲಾ ರೋಗಗಳಿಂದ ಅವರನ್ನು ರಕ್ಷಿಸುವುದು ಅಗತ್ಯ. ಸೋಂಕಿನಿಂದ ರಕ್ಷಣೆ ಕ್ರಮವನ್ನು ಕಳೆದ ಕೆಲವು ವರ್ಷಗಳಿಂದ ಕೈಗೊಂಡಿದ್ದರೂ, ಅದು ಪೂರ್ಣವಾಗಿ ಇನ್ನೂ ಫಲ ನೀಡಿಲ್ಲ. ಟೆಕ್ನಾಲಜಿ ಮಿಷನನ್ನು ಪ್ರಾರಂಭಿಸಿದ ತರುವಾಯ, ಎಲ್ಲಾ 20 ಜಿಲ್ಲೆಗಳಲ್ಲಿ ಸಾರ್ವತ್ರಿಕ ಸೋಂಕು ರಕ್ಷಣಾ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.

ಈ ಯೋಜನೆಯ ಅಡಿ, ಗರ್ಭಿಣಿ ಮಹಿಳೆಯರಿಗೆ ಹಾಗೂ ಎಳೆ ಮಕ್ಕಳಿಗೆ ಸೋಂಕಿನಿಂದ ರಕ್ಷಣೆಯನ್ನು ನೀಡಲಾಗುವುದು. 1990-91ರಲ್ಲಿ ಗುರಿಯಿರಿಸಿಕೊಂಡಿದ್ದ ಸಮೂಹದ ಸುಮಾರು ಶೇ. 80 ರಷ್ಟು ಮಂದಿಗೆ ಧನುರ್ವಾಯು, ಡಿಫ್ತೀರಿಯಾ, ನಾಯಿಕೆಮ್ಮು, ಪೋಲಿಯೋ, ದಡಾರ ಇತ್ಯಾದಿ ರೋಗಗಳ ವಿರುದ್ಧ ಸೋಂಕು ರಕ್ಷಣೆ ನೀಡಲಾಗಿದೆ. 1991-92 ರಲ್ಲಿ ಎಲ್ಲ ಗರ್ಭಿಣಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸೋಂಕಿನಿಂದ ರಕ್ಷಣೆ ನೀಡಲು ನಾವು ಉದ್ದೇಶಿಸಿದ್ದೇವೆ ಮತ್ತು ಆ ತರುವಾಯವೂ ಅದೇ ಮಟ್ಟವನ್ನು ಕಾಯ್ದುಕೊಂಡು ಬರಲಾಗುವುದು. ಗುರಿಯಿರಿಸಿಕೊಂಡ ಸಮೂಹಕ್ಕೆ ಸೋಂಕಿನಿಂದ ರಕ್ಷಣೆ ನೀಡುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯವು ನಿರಂತರವಾಗಿ ಪ್ರಯತ್ನಿಸುವುದು. ಶಿಶು ಮರಣ ಪ್ರಮಾಣವನ್ನು ಕನಿಷ್ಠ ಮಟ್ಟಕ್ಕೆ ತರಲು ಸರ್ಕಾರವು ನಿರ್ಧರಿಸಿದೆ. ಕಳೆದ ದಶಕದಲ್ಲಿ ಆದ ಶಿಶು ಮರಣಗಳ ಪ್ರಮಾಣವನ್ನು ಅನುಬಂಧ V ರಲ್ಲಿ ಕೊಡಲಾಗಿದೆ.

26. ಶುಶ್ರೂಷೆ

ಕೊನೇ ಪಕ್ಷ ಆರು ತಿಂಗಳಿಗೆ ಒಂದು ಸಲವಾದರೂ ಎಲ್ಲ ವ್ಯಕ್ತಿಗಳ ವೈದ್ಯಕೀಯ ತಪಾಸಣೆ ಮಾಡುವ ಯೋಜನೆಯೊಂದನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿದೆ. ಈ ಯೋಜನೆಗೆ ಒಂದು ಕೋಟಿ ರೂಪಾಯಿಯ ಮೂಲ ನಿದಿಯನ್ನು ನಾನು ಒದಗಿಸಿದ್ದೇನೆ. ಈ ನಿಧಿಗೆ ಸ್ವಯಂ ಸೇವಾಸಂಸ್ಥೆಗಳಿಂದ, ಸ್ಥಳೀಯ ಸಂಸ್ಥೆಗಳಿಂದ ಮತ್ತು ದಾನಿಗಳಿಂದ ವಂತಿಗೆ ಸಂಗ್ರಹಿಸಲಾಗುವುದು.

27. ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳು :

ನಮ್ಮ ರಾಜ್ಯವು ದೇಶದಲ್ಲಿ ಎಣ್ಣೆ ಬೀಜಗಳನ್ನು ಅಧಿಕವಾಗಿ ಉತ್ಪಾದಿಸುವ ರಾಜ್ಯಗಳಲ್ಲಿ ಒಂದು. 20 ರಿಂದ 24 ಲಕ್ಷ ಹೆಕ್ಟೇರುಗಳ ಭೂಮಿಯಲ್ಲಿ ನಾವು, ವರ್ಷಕ್ಕೆ 15 ಲಕ್ಷ ಟನ್ನುಗಳಷ್ಟು ಎಣ್ಣೆ ಬೀಜಗಳನ್ನು ಉತ್ಪಾದಿಸುತ್ತೇವೆ. ಎಣ್ಣೆ ಬೀಜಗಳ ಟೆಕ್ನಾಲಜಿ ಮಿಷನ್‌ನ ಅಡಿಯಲ್ಲಿ ಬೆಳೆ ಉತ್ಪಾದನಾ ತಂತ್ರಜ್ಞಾನ, ಕಟಾವು ತರುವಾಯದ ತಂತ್ರಜ್ಞಾನ ಬೆಂಬಲ ವ್ಯವಸ್ಥೆ ಮತ್ತು ಕಟಾವು ತರುವಾಯದ ತಂತ್ರಜ್ಞಾನ ಸೌಲಭ್ಯ ಇವುಗಳನ್ನೊಳಗೊಂಡ ನಾಲ್ಕು ಮಿನಿ ಮಿಷನ್ನುಗಳನ್ನು ವರ್ಷಕ್ಕೆ 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜ್ಯವು ಕಾರ್ಯಗತಗೊಳಿಸುತ್ತಿದೆ. ಎಣ್ಣೆ ಬೀಜ ಬೆಳೆಯುವ ಪ್ರದೇಶವನ್ನು, 1986-87 ರಲ್ಲಿದ್ದ 21.74 ಲಕ್ಷ ಹೆಕ್ಟೇರುಗಳಿಂದ 1989-90 ರಲ್ಲಿ 23.06 ಲಕ್ಷ ಹೆಕ್ಟೇರುಗಳಿಗೆ ಹೆಚ್ಚಿಸಲು ಈ ಮಿಷನ್ನಿಗೆ ಸಾಧ್ಯವಾಗಿದೆ. ಅದೇ ಅವಧಿಯಲ್ಲಿ, [illegible] ಉತ್ಪಾದನೆ 12.54 ಲಕ್ಷ ಟನ್ನುಗಳಿಂದ 14.68 ಲಕ್ಷ ಟನ್ನುಗಳಿಗೆ ಏರಿದೆ. 1986-87 ರಲ್ಲಿ ಪ್ರತಿ ಹೆಕ್ಟೇರಿಗೆ 608 ಕಿ.ಗ್ರಾಂಗಳಷ್ಟು ಉತ್ಪಾದನೆಯಾಗುತ್ತಿದ್ದುದು. 1989-90 ರಲ್ಲಿ ಪ್ರತಿ ಹೆಕ್ಟೇರಿಗೆ 637 ಕಿ.ಗ್ರಾಂಗಳಿಗೆ ಹೆಚ್ಚಿದೆ. 1990-91 ನೇ ಸಾಲಿನಲ್ಲಿ ಪ್ರತಿ ಹೆಕ್ಟೇರಿಗೆ 719 ಕಿ.ಗ್ರಾಂ ಉತ್ಪಾದಿಸುವ ಗುರಿ ಇರಿಸಿಕೊಂಡಿದ್ದೇವೆ.

28. 705.48 ಲಕ್ಷ ರೂ.ಗಳ ವೆಚ್ಚದಲ್ಲಿ 1,000 ಹೆಕ್ಟೇರುಗಳಲ್ಲಿ ತಾಳೆಎಣ್ಣೆಯ ಕೃಷಿಯನ್ನು ಮಾಡುವ ಉದ್ದೇಶದಿಂದ ತಾಳೆಎಣ್ಣೆ ವ್ಯವಸಾಯ ಪ್ರಾತ್ಯಕ್ಷಿಕೆಯ ಒಂದು ಕೇಂದ್ರ ಪುರಸ್ಕೃತ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದರ ಶೇ. 50 ರಷ್ಟು ವೆಚ್ಚವನ್ನು ಭಾರತ ಸರ್ಕಾರ ಭರಿಸುವುದು. 1991-92 ರಲ್ಲಿ, 1,000 ಹೆಕ್ಟೇರ್ ಭೂಮಿಯಲ್ಲಿ, ತಾಳೆಎಣ್ಣೆ ಮರಗಳನ್ನು ಪೋಷಿಸಲು ಈ ಯೋಜನೆಗ 76 ಲಕ್ಷ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

29. ನಾವು 1990-91 ರಲ್ಲಿ ದ್ವಿದಳ ಧಾನ್ಯಗಳ ಟೆಕ್ನಾಲಜಿ ಮಿಷನನ್ನು ಪ್ರಾರಂಭಿಸಿದ್ದೇವೆ. ಉತ್ತರ ಕರ್ನಾಟಕ ಪ್ರದೇಶದ ಜಿಲ್ಲೆಗಳು ದ್ವಿದಳ ಧಾನ್ಯಗಳನ್ನು ಬೆಳೆಯಲು ಪ್ರಶಸ್ತವಾಗಿವೆ. ರಾಜ್ಯದೊಳಗೆ ಆಹಾರ ಧಾನ್ಯಗಳ ಪೂರೈಕೆ ಸಾಕಷ್ಟಿರುವಂತೆ

ಮತ್ತು ಈ ಉತ್ಪನ್ನಗಳಿಗೆ ಸಮಂಜಸವಾದ ಬೆಲೆ ಇರುವಂತೆ ನೋಡಿಕೊಳ್ಳುವುದಕ್ಕಾಗಿ ಉಳಿದ ಆಹಾರ ಧಾನ್ಯಗಳ ಜೊತೆಗೆ ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಗೆ ನಾವು ಹೆಚ್ಚು ಪ್ರಾಶಸ್ತ್ಯ ನೀಡುತ್ತೇವೆ.

30. ಕೃಷಿ

ಪ್ರತಿಕೂಲ ಕೃಷಿ ಹವಾಮಾನಗಳಿಂದಾಗಿ 1990-91 ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು, ಗುರುಯಿರಿಸಿಕೊಂಡಿದ್ದ 80 ಲಕ್ಷ ಟನ್ನುಗಳ ಬದಲಾಗಿ 63.67 ಲಕ್ಷ ಟನ್‌ಗಳಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. 1991-92 ರಲ್ಲಿ, ಉತ್ಪಾದನಾ ಗುರಿಯನ್ನು 83 ಲಕ್ಷ ಟನ್ನುಗಳಿಗೆ ಹೆಚ್ಚಿಸಲಾಗಿದೆ. ನೀರಾವರಿ ಪ್ರದೇಶಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಲಭ್ಯವಿರುವ ಹೊಸ ತಂತ್ರಜ್ಞಾನಗಳೊಂದಿಗೆ, ಖುಷ್ಕಿ ಭೂಮಿ ಅಭಿವೃದ್ಧಿ ಮತ್ತು ಜಲವಿಭಾಜಕ ಪ್ರದೇಶ ನಿರ್ವಹಣೆಯ ವಿವಿಧ ತಂತ್ರಜ್ಞಾನಗಳನ್ನು ಬಳಸಿಕೊಂಡು ಈ ಗುರಿಯನ್ನು ಸಾಧಿಸಲು ಉದ್ದೇಶಿಸಲಾಗಿದೆ.

31. ಬೆಳೆ ಇಳುವರಿಯು ಬಹುಮಟ್ಟಿಗೆ ಮಣ್ಣಿನ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಕಳೆದ ಹಲವು ವರ್ಷಗಳಿಂದ ಅಪಾಯಕರ ಪ್ರಮಾಣದಲ್ಲಿ ಭೂಸಾರವು ಕ್ಷೀಣಿಸುತ್ತಿದೆ. ಹೀಗೆ ಕ್ಷೀಣಿಸುವುದನ್ನು ತಡೆಗಟ್ಟಲು ಹಾಗೂ ಪರಿಸರ ಸಮತೋಲನವನ್ನು ಕಾಯ್ದುಕೊಂಡು ಬರಲು ಸಮಗ್ರ ಭೂ ಬಳಕೆ ನಿರ್ವಹಣೆ ಕಾರ್ಯಕ್ರಮವನ್ನು (ಕ್ಲಂಪ್) ನಾವು ಜಪಾನಿನ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯ ನೆರವಿನೊಂದಿಗೆ ಕೈಗೊಳ್ಳುತ್ತಿದ್ದೇವೆ. 1991-92 ರ ಸಾಲಿಗೆ ಈ ಕಾರ್ಯಕ್ರಮಕ್ಕಾಗಿ 32.39 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ.

32. 1990-91 ರಲ್ಲಿ ನಾವು, ಬಿಜಾಪುರ ಮತ್ತು ಶಿವಮೊಗ್ಗಗಳಲ್ಲಿ ಎರಡು ಕೃಷಿ ಕಾಲೇಜುಗಳನ್ನು ಪ್ರಾರಂಭಿಸಿದ್ದೇವೆ. 1991-92ರಲ್ಲಿ ಮೂಡಿಗೆರೆಯಲ್ಲಿ ಒಂದು ತೋಟಗಾರಿಕೆ ಕಾಲೇಜನ್ನು ಹಾಗೂ ಮಂಡ್ಯದಲ್ಲಿ ಒಂದು ಕೃಷಿ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

33. ಹಾಲು ಉತ್ಪಾದನೆ

ರಾಜ್ಯದಲ್ಲಿ 9.82 ಲಕ್ಷ ರೈತರಿಂದ, ದಿನಕ್ಕೆ 11.78 ಲಕ್ಷ ಕಿ.ಗ್ರಾಂ ಗಳಷ್ಟು ಹಾಲನ್ನು ಸಂಗ್ರಹಿಸುವ ಒಟ್ಟು 5.034 ಡೈರಿ ಸಹಕಾರಿ ಸಂಘಗಳು ಇವೆ. ಕ್ಷೀರಧಾರೆ III ಈ ಕಾರ್ಯಕ್ರಮದ ಅಡಿ, ಸುಮಾರು 12.11 ಲಕ್ಷ ರೈತರಿಂದ ದಿನಕ್ಕೆ ಅಂದಾಜು 25.25 ಲಕ್ಷ ಕಿ.ಗ್ರಾಂ ಗಳಷ್ಟು ಹಾಲು ಸಂಗ್ರಹಿಸುವ 7,000 ಹಾಲು ಉತ್ಪಾದಕರ ಸಂಘಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. 1991-92 ರ ವೇಳೆಗೆ, ಸುಮಾರು 1.51 ಲಕ್ಷ ಜಾನುವಾರುಗಳಿಗೆ ಗರ್ಭಧಾರಣೆ ಮಾಡುವಂತಹ ಸುಮಾರು 3.920 ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಹೊಂದಲು ಪ್ರಸ್ತಾವಿಸಲಾಗಿದೆ. ಹೈನು ಅಭಿವೃದ್ಧಿಯ ಟೆಕ್ನಾಲಜಿ ಮಿಷನ್. ಈ ವಲಯದ ಗುಣಾತ್ಮಕ ಅಭಿವೃದ್ಧಿಗೆ ಗಮನ ನೀಡುತ್ತದೆ. ಕ್ರಿ.ಶ. 2000 ದ ಹೊತ್ತಿಗೆ ಮಿಶ್ರತಳಿ ಜಾನುವಾರು ಸಂಖ್ಯೆಯು, ಈಗಿರುವ 9.23 ಲಕ್ಷದಿಂದ 32.70 ಲಕ್ಷಕ್ಕೆ ಹೆಚ್ಚುವಂತೆ ಹಾಗೂ ಹಾಲಿನ ಉತ್ಪಾದನೆಯು ಈಗಿರುವ ದಿನಕ್ಕೆ 63.61 ಲಕ್ಷ ಲೀಟರುಗಳಿಂದ 122.46 ಲಕ್ಷ ಲೀಟರುಗಳಿಗೆ ಹೆಚ್ಚುವಂತೆ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ತೀವ್ರಗೊಳಿಸಲು ಉದ್ದೇಶಿಸಲಾಗಿದೆ. 1991-92ನೇ ಸಾಲಿನಲ್ಲಿ ಕರ್ನಾಟಕ ಕ್ಷೀರ ಮಹಾಮಂಡಲಿಯು ಒಂದು ಲಕ್ಷ ರೈತರನ್ನು ಒಳಗೊಳ್ಳುವಂತೆ ಮತ್ತು ಹಾಲು ಸಂಗ್ರಹಣೆಯು ದಿನವೊಂದಕ್ಕೆ 13.161 ಲಕ್ಷ ಲೀಟರುಗಳಿಗೆ ಹೆಚ್ಚುವಂತೆ ಮಾಡಲು 500 ಹಾಲು ಉತ್ಪಾದಕರ ಸಂಘಗಳನ್ನು ಸಂಘಟಿಸುವ ಗುರಿಯಿಟ್ಟು ಕೊಳ್ಳಲಾಗಿದೆ. ಕ್ರಿ.ಶ. 2000ದ ಹೊತ್ತಿಗೆ ಸಾಧಿಸಬೇಕೆಂದು ಉದ್ದೇಶಿಸಿರುವುದನ್ನು ಎಂಟನೇ ಯೋಜನೆಯ ಅಂತ್ಯದೊಳಗೇ ರಾಷ್ಟ್ರೀಯ ಕ್ಷೀರ ಅಭಿವೃದ್ಧಿ ಮಂಡಳಿಯ (ಎನ್.ಡಿ.ಡಿ.ಬಿ) ನೆರವಿನಿಂದ

ಸಾಧಿಸಲು ಈ ಯೋಜನೆಗಳನ್ನು ತ್ವರಿತಗೊಳಿಸುವ ನೀತಿ ನಿರ್ಣಯವೊಂದನ್ನು ರಾಜ್ಯ ಸರ್ಕಾರವು ಕೈಗೊಂಡಿದೆ.

34. ಪಶು ಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯದ ಪಶು ಸಂಪತ್ತು ಗ್ರಾಮೀಣ ಅರ್ಥ ವ್ಯವಸ್ಥೆಗೆ ನೀಡುವ ಕೊಡುಗೆ ಅಮೂಲ್ಯವಾದುದು. ಆದುದರಿಂದ ಅವುಗಳನ್ನು ವಿವಿಧ ಕಾಯಿಲೆಗಳಿಂದ ರಕ್ಷಿಸುವುದು ಅಗತ್ಯ. ಈಗ ದೊರೆಯುತ್ತಿರುವ ಪಶು ವೈದ್ಯ ಸೇವೆಗಳನ್ನು ಇನ್ನೂ ಉತ್ತಮಪಡಿಸಲು ಸರ್ಕಾರವು 186 ಗ್ರಾಮೀಣ ಪಶು ಔಷಧಾಲಯಗಳನ್ನು ಮಂಜೂರು ಮಾಡಿದೆ ಮತ್ತು 61 ಗ್ರಾಮೀಣ ಪಶು ಔಷಧಾಲಯಗಳನ್ನು ಪಶು ಔಷಧಾಲಯಗಳಾಗಿ ಮೇಲ್ದರ್ಜೆಗೇರಿಸಿದೆ. 1990-91 ರಲ್ಲಿ ಪಶು ಸಂಗೋಪನೆಗೆ 9.85 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. 1991-92 ರ ಯೋಜನೆಯಡಿ ಪಶು ಸಂಗೋಪನೆಗೆ ಒಟ್ಟು 11.68 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ. ಮೀನುಗಾರಿಕೆ ಅಭಿವೃದ್ಧಿಗೆ ಅತ್ಯಂತ ಸೂಕ್ತವಾದ ಉದ್ದನೆಯ ಕರಾವಳಿ ತೀರ ನಮ್ಮಲ್ಲಿದೆ. ಆಳ ಸಮುದ್ರದಲ್ಲಿ ಮೀನು ಹಿಡಿಯುವ ತಂತ್ರ ಜ್ಞಾನದಲ್ಲಿ ಸುಧಾರಣೆ ತರಲು, ಲೋಡಿಂಗ್ ಮತ್ತು ದಾಸ್ತಾನು ಸೌಲಭ್ಯಗಳನ್ನು ಹೆಚ್ಚಿಸಲು ಮತ್ತು ರಫ್ತು ಭವನಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು ಮೀನುಗಾರಿಕೆ ಅಭಿವೃದ್ಧಿಗಾಗಿ 1990-91 ರಲ್ಲಿ ಒದಗಿಸಿದ್ದ 4.70 ಕೋಟಿ ರೂಪಾಯಿಗೆ ಪ್ರತಿಯಾಗಿ ನಾನು 1991-92 ರಲ್ಲಿ 6.29 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ನೆರವಿನಿಂದ ಈ ಮೊತ್ತವನ್ನು ಇನ್ನೂ ಹೆಚ್ಚಿಸಲಾಗುವುದು.

35. ಕೈಗಾರಿಕೆಗಳು

ರಾಜ್ಯದ 61 ಸಾರ್ವಜನಿಕ ವಲಯದ ಉದ್ಯಮಗಳಲ್ಲಿ, ಷೇರು ಬಂಡವಾಳ ಮತ್ತು ಸಾಲದ ರೂಪದಲ್ಲಿ 1990 ರ ಮಾರ್ಚಿ ಕೊನೆಯ ಹೊತ್ತಿಗೆ ರಾಜ್ಯ ಸರ್ಕಾರವು ಒಟ್ಟು 2173 ಕೋಟಿ ರೂಪಾಯಿಗಳನ್ನು ಹೂಡಿತ್ತು. ಇದರಲ್ಲಿ ಷೇರು ಬಂಡವಾಳ 460 ಕೋಟಿ ರೂಪಾಯಿಗಳು ಹಾಗೂ ಸಾಲ 1713 ಕೋಟಿ ರೂಪಾಯಿಗಳು. ರಾಜ್ಯ ಸರ್ಕಾರವು, ಹಣಕಾಸು ಸಂಸ್ಥೆಗಳಿಗೆ ಸುಮಾರು 1182 ಕೋಟಿ ರೂಪಾಯಿ ಮೊತ್ತಕ್ಕೆ ಖಾತರಿ ನೀಡಿದೆ. ಒಂಬತ್ತನೇ ಆರ್ಥಿಕ ಆಯೋಗದ ಪ್ರಮಾಣಕ ಅಂದಾಜುಗಳ ಪ್ರಕಾರ, ರಾಜ್ಯ ಸರ್ಕಾರಿ ವಲಯದ ಉದ್ಯಮಗಳಿಂದ ಪ್ರತಿ ವರ್ಷವೂ 13.73 ಕೋಟಿ ರೂಪಾಯಿಗಳಷ್ಟು ಲಾಭಾಂಶ ದೊರೆಯಬೇಕಿತ್ತು. ಆದರೆ, 1988-89 ಕೇವಲ 34.11 ಲಕ್ಷ ರೂಪಾಯಿ, 1989-90 ರಲ್ಲಿ ಕೇವಲ 43.59 ಲಕ್ಷ ರೂಪಾಯಿ ಲಾಭಾಂಶ ಬಂದಿದೆ.

36. ಕಳೆದ ಹತ್ತು ವರ್ಷಗಳಿಂದ 16 ಸರ್ಕಾರಿ ವಲಯದ ಉದ್ಯಮಗಳು ಸತತವಾಗಿ ನಷ್ಟ ಅನುಭವಿಸುತ್ತಿವೆ. ಮತ್ತೆ ಚೇತರಿಸಿಕೊಳ್ಳಲು ಅವು ತಮ್ಮ ಯೋಜನೆಗಳಿಗೆ ಆರ್ಥಿಕ ಸಂಸ್ಥೆಗಳ ನೆರವನ್ನು ಕೋರುತ್ತಿವೆ. ಇದಕ್ಕಾಗಿ ರಾಜ್ಯ ಸರ್ಕಾರ ಹೆಚ್ಚಿನ ಬಂಡವಾಳ ತೊಡಗಿಸಬೇಕಾಗುತ್ತದೆ ಹಾಗೂ ತೆರಿಗೆ ಮತ್ತು ಇತರ ರಿಯಾಯಿತಿಗಳನ್ನು ನೀಡಬೇಕಾಗುತ್ತದೆ. ಪ್ರಾರಂಭಿಕ ಹಂತಗಳಲ್ಲಿ, ರಾಜ್ಯವು ಉದ್ಯೋಗ ಒದಗಿಸಲು ಮತ್ತು ಔದ್ಯಮೀಕರಣವನ್ನು ಪ್ರೋತ್ಸಾಹಿಸಲು ತನ್ನದೇ ಆದ ಕೈಗಾರಿಕೆಗಳನ್ನು ಪ್ರಾರಂಭಿಸಿತು. ಕಳೆದ ಹಲವು ದಶಕಗಳಲ್ಲಿ, ಖಾಸಗಿ ವಲಯದಲ್ಲಿ ತಮ್ಮ ಕೈಗಾರಿಕೆಗಳಿಗೆ ಸ್ಪರ್ಧೆ ಒಡ್ಡುತ್ತಿರುವ ಹಲವಾರು ಕೈಗಾರಿಕೆಗಳು ಹುಟ್ಟಿಕೊಂಡಿವೆ. ಈ ಕ್ಷೇತ್ರಕ್ಕೆ ಇತರ ಹಲವಾರು ಕೈಗಾರಿಕೆಗಳನ್ನು ತರುವ ಮೂಲಕ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ರಾಜ್ಯದ ಉದ್ದೇಶ ಈಡೇರಿದೆ. ಖಾಸಗಿಯವರು ಕೈಗಾರಿಕೆಗಳನ್ನು ಪ್ರಾರಂಭಿಸಿರುವಂತಹ ಕೆಲವು ಪ್ರದೇಶಗಳಲ್ಲಿ, ರಾಜ್ಯದ ಉದ್ಯಮಗಳ ಇರುವಿಕೆ ಅಗತ್ಯವಿದೆಯೇ ಎಂಬುದನ್ನು ಈಗ ನಿರ್ಧರಿಸಬೇಕಾಗಿದೆ. ಮೂಲಭೂತ ವಲಯಗಳ ಹೊರತು, ಎಲ್ಲಾ ಕೈಗಾರಿಕಾ

ವಲಯಗಳಲ್ಲಿ ರಾಜ್ಯವು ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ಪ್ರಸಕ್ತ ನೀತಿಯನ್ನು ಕೈಬಿಡಬೇಕಾಗಿದೆ. ರಾಜ್ಯಕ್ಕೆ ಹೊರೆಯಾಗಿರುವ ಈ ಕೆಲವು ಕೈಗಾರಿಕೆಗಳ ಬಗ್ಗೆ ಮತ್ತು ಖಾಸಗಿಯವರು ಈ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದರಿಂದ ಪ್ರಾಮುಖ್ಯತೆ ಕಳೆದುಕೊಂಡ ಕೆಲವು ಕೈಗಾರಿಕೆಗಳ ಬಗ್ಗೆ ಮರು ಪರಿಶೀಲನೆ ಮಾಡಬೇಕಾಗಿದೆ. ಕಾರ್ಮಿಕರ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಸರ್ಕಾರವು ತನ್ನ ಬಂಡವಾಳ ಹೂಡಿಕೆಯನ್ನು ಕಡಿಮೆ ಮಟ್ಟಕ್ಕೆ ಮಿತಗೊಳಿಸಬೇಕಾಗಿದೆ. ನಾನು ತುಂಬಾ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸಾರ್ವಜನಿಕ ವಲಯಕ್ಕೆ ನಾನು ಬದ್ಧನಾಗಿದ್ದೇನೆ. ಆದರೆ ಸಾರ್ವಜನಿಕರ ಮತ್ತು ತೆರಿಗೆದಾರರ ಹಿತಾಸಕ್ತಿಯಿಂದಾಗಿ ಈ ಕ್ರಮ ತೆಗೆದುಕೊಳ್ಳುವುದು ನನಗೆ ಅನಿವಾರ್ಯವಾಗಿದೆ.

37. 61 ರಾಜ್ಯ ಸಾರ್ವಜನಿಕ ಉದ್ಯಮಗಳ ಪೈಕಿ, ಉತ್ಪಾದನೆ ಕಾರ್ಯದಲ್ಲಿ ನಿರತವಾಗಿರುವ ಹಲವಾರು ಉದ್ಯಮಗಳು ಮತ್ತು ಇತರ ಕೆಲವು ಕಂಪನಿಗಳಿದ್ದು, ಅವುಗಳು ನಿರ್ವಹಿಸುತ್ತಿರುವ ಕಾರ್ಯಗಳು ರಾಜ್ಯವು ಅವುಗಳನ್ನು ತನ್ನ ನಿಯಂತ್ರಣದಲ್ಲೇ ಉಳಿಸಿಕೊಳ್ಳಬೇಕೆನ್ನುವಷ್ಟು ಪ್ರಮುಖವಾದಂಥ ಕಾರ್ಯಗಳಾಗಿಲ್ಲ. ಸರ್ಕಾರವು ಅಂತಹ 21 ಕಂಪನಿಗಳನ್ನು ಗುರುತಿಸಿದ್ದು ಅವುಗಳ ಪೈಕಿ 12 ಕಂಪನಿಗಳಲ್ಲಿ ನಿವ್ವಳ ಮೌಲ್ಯ ಸಂಪೂರ್ಣವಾಗಿ ಸವೆದಿದೆ. ಈ ಕಂಪನಿಗಳಲ್ಲಿನ ರಾಜ್ಯದ ಪಾಲು, ಷೇರು ಬಂಡವಾಳ ರೂಪದಲ್ಲಿ 40.23 ಕೋಟಿಗಳು ಮತ್ತು ಸಾಲಗಳ ರೂಪದಲ್ಲಿ 50.75 ಕೋಟಿ ರೂಪಾಯಿಗಳು ಇದ್ದು, ಒಟ್ಟು 90.98 ಕೋಟಿ ರೂಪಾಯಿಗಳಷ್ಟಾಗುತ್ತದೆ. ನಿವ್ವಳ ಮೌಲ್ಯವು ಲಾಭದಾಯಕವಾಗಿರುವ ಉಳಿದ 9 ಕಂಪನಿಗಳಲ್ಲಿ ಸರ್ಕಾರದ ಹಣ ಹೂಡಿಕೆಯ ಪ್ರಮಾಣ, ದಿನಾಂಕ 31-3-90 ಕ್ಕೆ ಷೇರು ಬಂಡವಾಳ ರೂಪದಲ್ಲಿ 9.14 ಕೋಟಿ ರೂ.ಗಳು ಮತ್ತು ಸಾಲಗಳ ರೂಪದಲ್ಲಿ 2.51 ಕೋಟಿ ರೂ.ಗಳಷ್ಟಿತ್ತು. ಈ ಕಂಪನಿಗಳ ಲಾಭಗಳಿಕೆ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು, ಸರ್ಕಾರವು, ತಾನು ನೀಡಿರುವ ಸಾಲವನ್ನು ಸಂಪೂರ್ಣವಾಗಿ ವಸೂಲಿ ಮಾಡಬೇಕು ಮತ್ತು ಷೇರು ಬಂಡವಾಳ ಮೊತ್ತದಿಂದ ಸಾಕಷ್ಟು ಮೊತ್ತವನ್ನು ಪಡೆಯಬೇಕು. ಹೀಗೆ ಮಾಡಿದರೆ, ಈ ಸಾರ್ವಜನಿಕ ವಲಯ ಉದ್ಯಮಗಳಿಂದ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಈ ಸಂಪನ್ಮೂಲಗಳನ್ನು ಅತ್ಯವಶ್ಯಕವಾದ ನೀರು ಸರಬರಾಜು, ವಸತಿ ಸೌಲಭ್ಯಗಳು, ದುರ್ಬಲ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು. ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಒದಗಿಸುವುದು ಮತ್ತು ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಇವುಗಳಿಗೆ ಮಾತ್ರವೇ ಉಪಯೋಗಿಸಲಾಗುವುದು.

38. ಹೊಸ ಕೈಗಾರಿಕಾ ನೀತಿಯನ್ನು ಕಳೆದ ವರ್ಷ ಪ್ರಕಟಿಸಲಾಯಿತೆಂಬ ವಿಚಾರವು ಸದಸ್ಯರಿಗೆ ತಿಳಿದಿದೆ. ಈ ನೀತಿಯಿಂದ, ಹೊಸ ಕೈಗಾರಿಕೆಗಳಿಗೆ ಭಾರೀ ಪ್ರಮಾಣದ ಪರಿಹಾರ ಒದಗುತ್ತದೆ. ಇದೇ ಸಮಯದಲ್ಲಿ ಖಾಸಗಿ ವಲಯಗಳಲ್ಲಿನ ರೋಗಗ್ರಸ್ತ ಘಟಕಗಳ ಬಗ್ಗೆ ಸಹಾ ಮಾತನಾಡಲು ನಾನು ಇಚ್ಛಿಸುತ್ತೇನೆ. ವಿದ್ಯುತ್ ಪೂರೈಕೆಯಲ್ಲಿನ ಕೊರತೆ, ಆ ಕೈಗಾರಿಕೆಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿದ್ದರೂ ಅವು ರೋಗಗ್ರಸ್ತವಾಗುವುದಕ್ಕೆ ಇತರ ಕೆಲವು ಅಂಶಗಳು ಕಾರಣವಾಗಿವೆ. ಖಾಸಗಿ ವಲಯಗಳಲ್ಲೂ ಇರುವಂಥ ರೋಗಗ್ರಸ್ತ ಘಟಕಗಳ ನಿರಂತರ ಮೇಲ್ವಿಚಾರಣೆಗಾಗಿ ಒಂದು ತಜ್ಞರ ಸಮಿತಿಯನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ. ಇದರಿಂದ, ನಮ್ಮ ಹಣಕಾಸು ಸಂಸ್ಥೆಗಳು ತೊಡಗಿಸಿದ ಹಣಕ್ಕೆ ತೊಂದರೆಯಾಗುವುದಿಲ್ಲ. 1990-91 ನೇ ಸಾಲಿನಲ್ಲಿ ಕೈಗಾರಿಕಾ ವಲಯಕ್ಕೆ ಒದಗಿಸಿದ್ದ ಯೋಜನಾ ವೆಚ್ಚ 76.44 ಕೋಟಿ ರೂಪಾಯಿ. ಇದನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿ 1991-92 ನೇ ಸಾಲಿನಲ್ಲಿ 96.67 ಕೋಟಿ ರೂಪಾಯಿಗೆ ಏರಿಸಿರುವುದು ಹೆಮ್ಮೆಯ ವಿಷಯವೆಂದು ಭಾವಿಸುತ್ತೇನೆ.

39. 1989-90ರ ಅವಧಿಯಲ್ಲಿ ನಮ್ಮ ಸಾರ್ವಜನಿಕ ವಲಯ ಉದ್ಯಮಗಳು ಪಡೆದುಕೊಂಡ ಸಾಂಸ್ಥಿಕ ನಿಧಿಗಳ ಪ್ರಮಾಣ 96.72 ಕೋಟಿ ರೂಪಾಯಿಗಳು. ಸಂಸ್ಥೆಗಳಿಂದ ರಾಜ್ಯಕ್ಕೆ ಬರುತ್ತಿರುವ ನಿಧಿಗಳನ್ನು ಕುರಿತ ತೌಲನಿಕ ಅಧ್ಯಯನದಿಂದ ಆ ನಿಧಿಯ ಪ್ರಮಾಣ ಕಡಿಮೆಯಿರುವುದು ಕಂಡು ಬರುತ್ತದೆ. ಅಖಿಲ ಭಾರತ ಹಣಕಾಸು ಸಂಸ್ಥೆಗಳು ಮಂಜೂರು ಮಾಡಿದ ಹಣಕಾಸು ನೆರವಿನಲ್ಲಿ ಕರ್ನಾಟಕದ ಸ್ಥಾನವು 1984-85 ರಲ್ಲಿ ಆರನೇ ಸ್ಥಾನದಲ್ಲಿದ್ದದ್ದು 1988-89 ರಲ್ಲಿ ಎಂಟನೇ ಸ್ಥಾನಕ್ಕೆ ಇಳಿದಿದೆ. ಇನ್ನು ಮುಂದೆ ಈ ಪ್ರವೃತ್ತಿಯನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

40. "ವಿಶ್ವ" ಗ್ರಾಮೀಣ ಮತ್ತು ಗುಡಿ ಕೈಗಾರಿಕೆ ಯೋಜನೆ

ನಿರುದ್ಯೋಗದ ಪ್ರಮಾಣ ಮತ್ತು ಆ ಬಗ್ಗೆ ಯುವಜನತೆಯೂ ಸೇರಿದಂತೆ ಗ್ರಾಮಾಂತರ ಜನತೆಯಲ್ಲಿರುವ ಅಸಂತೃಪ್ತಿ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿದೆ.

ಜನತೆಯ ಕೌಶಲ್ಯಗಳನ್ನು ಬಳಸಿಕೊಳ್ಳಲು ಮತ್ತು ಉದ್ಯೋಗ ಒದಗಿಸಲು ವಿದ್ಯುತ್ ಆಧಾರಿತ ಉದ್ಯಮಗಳ ಜೊತೆಗೆ ರಾಜ್ಯಾದ್ಯಂತ ಗುಡಿಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು ಎಂಬುದು ಸರ್.ಎಂ. ವಿಶ್ವೇಶ್ವರಯ್ಯನವರ ಕನಸಾಗಿತ್ತು. ನಿರಂತರ ಹಾಗೂ ಉತ್ಪಾದಕ ಉದ್ಯೋಗ ಉತ್ತಮ ಮಾರುಕಟ್ಟೆ ಬೆಂಬಲ, ತರಬೇತಿ ಮತ್ತು ಇತರ ಚಟುವಟಿಕೆಗಳಿಗೆ ಸಾಂಸ್ಥಿಕ ಬೆಂಬಲವನ್ನು ಸುನಿಶ್ಚಿತಪಡಿಸಿ ರಾಜ್ಯದ ಲಾಭದಾಯಕ ಮತ್ತು ಮಾರಾಟ ಸಾಧ್ಯ ಸಂಪನ್ಮೂಲಗಳನ್ನು ಸಹ ಚೆನ್ನಾಗಿ ಬಳಸಿಕೊಳ್ಳುವ ಯೋಜನೆಯೊಂದನ್ನು ಪ್ರಾರಂಭಿಸಲು ಸರ್ಕಾರವು ನಿರ್ಧರಿಸಿದೆ. ಗ್ರಾಮೀಣ ಉದ್ಯೋಗಾಧಾರಿತ ಆರ್ಥಿಕ ಅಭಿವೃದ್ಧಿಗೆ ಇದೊಂದು ದಿಟ್ಟ ಹೆಜ್ಜೆಯೆಂದು ನಾನು ಭಾವಿಸಿದ್ದೇನೆ. ಈ ಕಾರ್ಯಕ್ರಮದ ಯಶಸ್ಸಿಗೆ ನಾನು ಜನತೆಯ ಸಹಕಾರ ಮತ್ತು ಬೆಂಬಲವನ್ನು ಕೋರುತ್ತೇನೆ. ಈ ಯೋಜನೆಯನ್ನು ಪ್ರಾರಂಭಿಸಲು 10ಕೋಟಿ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಇದಕ್ಕೆ ಹೆಚ್ಚುವರಿ ಸಾಂಸ್ಥಿಕ ಹಣಕಾಸು ನೀಡಿಕೆಯ ಮೂಲಕ ಒದಗಿಸಲಾಗುವುದು.

41. ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿಯ ಪೂರೈಕೆ ಹಾಗೂ ಬೇಡಿಕೆಗಳ ನಡುವ ಇರುವ ಅಂತರ ಕ್ರಮೇಣವಾಗಿ ಹೆಚ್ಚುತ್ತಿದೆ. 1990-91ನೇ ವರ್ಷದ ಪ್ರಾರಂಭದಲ್ಲಿ, ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳ ಒಟ್ಟು ಉತ್ಪಾದನಾ ಸಾಮರ್ಥ್ಯವು 2645 ಮೆಗಾವ್ಯಾಟ್‌ಗಳಷ್ಟಿತ್ತು. 1990-91ನೇ ಸಾಲಿನಲ್ಲಿ 115 ಮೆಗಾವ್ಯಾಟ್ಸ್ ಸಾಮರ್ಥ್ಯದ ವಾರಾಹಿ ಜಲ ವಿದ್ಯುತ್ ಯೋಜನೆಯ ಎರಡನೇ ಘಟಕವು ಕಾರ್ಯಾರಂಭ ಮಾಡಿದುದರಿಂದ ಒಟ್ಟು ಉತ್ಪಾದನಾ ಸಾಮರ್ಥ್ಯವು 2760 ಮೆಗಾವ್ಯಾಟ್‌ಗಳಿಗೇರಿದೆ. ಹಿಂದಿನ ವರ್ಷಗಳಲ್ಲಿದ್ದುದಕ್ಕಿಂತಲೂ 1991-92ರಲ್ಲಿ, ಪ್ರಮುಖ ಜಲಾಶಯಗಳಲ್ಲಿ ಹೆಚ್ಚು ನೀರು ಸಂಗ್ರಹವಾಗುವುದೆಂದು ನಿರೀಕ್ಷಿಸಿ, ಕರಾರು ಪ್ರಕಾರ 5001 ಕಿಲೊವೋಲಟ್ಸ್ ಆಂಪಿಯರ್ಸ್ ಹಾಗೂ ಅದಕ್ಕಿಂತ ಹೆಚ್ಚಿಗೆ ವಿದ್ಯುಚ್ಛಕ್ತಿಯ ಬೇಡಿಕೆಯನ್ನು ಪೂರೈಸುತ್ತಿರುವ ಹೈಟೆನ್‌ಷನ್ ಸ್ಥಾಪನೆಗೆ ಹೊರತು, ಉಳಿದ ಎಲ್ಲ ವರ್ಗಗಳ ಬಳಕೆದಾರರಿಗೆ ವಿದ್ಯುಚ್ಛಕ್ತಿ ಕಡಿತವನ್ನು, 1-8-1990 ರಿಂದ ಜಾರಿಗೆ ಬರುವಂತೆ ಸಡಿಲಗೊಳಿಸಲಾಗಿತ್ತು. ನಮ್ಮ ವಾಸ್ತವಿಕ ವಿದ್ಯುಚ್ಛಕ್ತಿ ಅಗತ್ಯತೆ 20,400 ದಶಲಕ್ಷ ಯೂನಿಟ್‌ಗಳು ಆದರೆ, 1990-91ನೇ ಸಾಲಿನಲ್ಲಿ ಮಾಡಿಕೊಂಡ ಆಮದು (730 ದಶಲಕ್ಷ ಯೂನಿಟ್‌ಗಳು) ಸೇರಿ 15540 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ದೊರೆಯುವುದೆಂದು ಇತ್ತೀಚೆಗೆ ಅಂದಾಜು ಮಾಡಲಾಗಿದೆ. ವಿದ್ಯುಚ್ಛಕ್ತಿಯ ಅಗತ್ಯತೆ ಹಾಗೂ ಲಭ್ಯತೆಯ ನಡುವೆ ಇರುವ ಅಂತರಕ್ಕೆ ಕಾರಣಗಳು ಹೀಗಿದೆ:

ಎ) 1989-90 ರಲ್ಲಿ 6,63,490 ರಷ್ಟಿದ್ದ ವಿದ್ಯುತ್‌ಚಾಲಿತ ಪಂಪುಸೆಟ್ಟುಗಳ ಸಂಖ್ಯೆಯು 1990-91 ರಲ್ಲಿ 7,23,490ಕ್ಕೇರಿದುದರಿಂದಾಗಿ ನೀರಾವರಿ ಪಂಪುಸೆಟ್ಟುಗಳ ಬಳಕೆದಾರರ ಬೇಡಿಕೆ ನಿರಂತರವಾಗಿ ಹೆಚ್ಚುತ್ತಿದೆ.

ಬಿ) ಬಳಕೆದಾರರ ಸಂಖ್ಯೆಯಲ್ಲಿ ಹೆಚ್ಚಳ.

42. 1990-91 ನೇ ವರ್ಷದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ, ಪ್ರಾರಂಭದಲ್ಲಿ 40,000 ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸುವ ಗುರಿಯನ್ನು ವಹಿಸಲಾಗಿತ್ತು. ವರ್ಷದ ಅವಧಿಯಲ್ಲಿ, ಬೇಡಿಕೆಯಲ್ಲಿ ಬಹುಪಾಲು ಈಡೇರಿದೆ ಉಳಿದುದರಿಂದ ಹಾಗೂ ರಾಜ್ಯದ ಅನೇಕ ತಾಲೂಕುಗಳಲ್ಲಿ ಉಂಟಾಗಿದ್ದ ಬರಗಾಲ ಪರಿಸ್ಥಿತಿಗಳಿಂದಾಗಿ, 60,000 ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ನಿರ್ದಿಷ್ಟಪಡಿಸಿ. ಆ ಗುರಿಯನ್ನು ಹೆಚ್ಚಿಸಿದ್ದೇವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು, ಈಗಾಗಲೇ ಹೆಚ್ಚಿನ ಸಂಖ್ಯೆಯ ಪಂಪುಸೆಟ್ಟುಗಳನ್ನು ವಿದ್ಯುಚ್ಛಕ್ತಿಯನ್ನು ಒದಗಿಸಿದೆಯೆಂಬ ಮತ್ತು ಈ ವರ್ಷ ಈ ಪರಿಷ್ಕೃತ ಗುರಿಯನ್ನು ಮಂಡಲಿಯು ಸಾಧಿಸುವುದೆಂಬ ಸಂಗತಿಯನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ.

43. ಯೋಜನಾ ಕಾರ್ಯಕ್ರಮದ ಅಡಿಯಲ್ಲಿ ಮಂಡಳಿಯು 1990-91 ರಲ್ಲಿ 97.10 ಕೋಟಿ ರೂಪಾಯಿ ಒದಗಿಸಿದ್ದರೆ 1991-92 ನೇ ಆರ್ಥಿಕ ವರ್ಷಕ್ಕಾಗಿ 135.75 ಕೋಟಿ ರೂಪಾಯಿಗಳ ಬಂಡವಾಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. 1991-92ನೇ ಸಾಲಿನ ವಿದ್ಯುದೀಕರಣ ಕಾರ್ಯಕ್ರಮ ಹೀಗಿದೆ :

ಎ) ಸಣ್ಣ ಹಳ್ಳಿಗಳು	400
ಬಿ) ಹರಿಜನ ಬಸ್ತಿಗಳು	600
ಸಿ) ಭಾಗ್ಯಜ್ಯೋತಿ ಕುಟೀರ ಜ್ಯೋತಿ	20,000
ಡಿ) ಬುಡಕಟ್ಟು ಕಾಲೋನಿಗಳು	527
ಇ) ಸರ್ವಿಸ್ ಕನೆಕ್ಷನ್ಸ್	30,000
ಎಫ್) ನೀರಾವರಿ ಪಂಪುಸೆಟ್ಟುಗಳು	60,000

ಇದಲ್ಲದೆ, ಆರ್‌ಇಸಿ ನೆರವಿನೊಂದಿಗೆ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮವನ್ನು, ಈ ಮೊದಲು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡದ ಎಲ್ಲ ಗ್ರಾಮಗಳಿಗೆ, ಸಣ್ಣಹಳ್ಳಿಗಳಿಗೆ ಮತ್ತು ತಾಂಡಾಗಳಿಗೆ ವಿಸ್ತರಿಸಲಾಗುವುದು 44. ಕರ್ನಾಟಕ ವಿದ್ಯುಚ್ಛಕ್ತಿ ನಿಗಮವು ಚಾಲ್ತಿಯಲ್ಲಿರುವ ಯೋಜನೆಗಳಿಗಾಗಿ, 1990-91 ರಲ್ಲಿ, 169.30 ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಿದೆ. ಯೋಜನೆಗಳ ಕೆಲಸ ಕಾರ್ಯಗಳಿಗಾಗಿ 1991-92 ನೇ ಸಾಲಿಗೆ 235.85 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಆ ಯೋಜನೆಗಳಲ್ಲಿ ಪ್ರಮುಖವಾದುವು ಹೀಗಿದೆ :

ಎ) ಕಾಳಿ ಜಲ ವಿದ್ಯುತ್ ಯೋಜನೆ ಹಂತ II

ಬಿ) ಶರಾವತಿ ಟೇಲ್ ರೇಸ್ ಯೋಜನೆ

ಸಿ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ III ಹಾಗೂ IV ನೇ ಘಟಕಗಳು

ಡಿ) ಒ.ಇ.ಸಿ.ಎಫ್. ನೆರವಿನ ಸರ್ಪಾಡಿ ಒಡ್ಡು ನಿರ್ಮಾಣ ಯೋಜನೆ ಮಂಗಳೂರಿನಲ್ಲಿರುವ ಎನ್‌ಟಿಪಿಸಿ ಸೂಪರ್ ಥರ್ಮಲ್ ಯೋಜನೆಗೆ ಬಹುತೇಕ ಒಪ್ಪಿಗೆ ದೊರೆತಿದ್ದು ಅದರ ಕೆಲಸ ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ.

45. ಈ ಮುಂದಿನ ಯೋಜನೆಗಳಿಗೆ ಭಾರತ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದೆ :

ಎ) ಸರ್ಪಾಡಿ ಒಡ್ಡು ನಿರ್ಮಾಣ

ಬಿ) ಕಟ್ಲಾ ಹಾಗೂ ಪಾಳ್ನಾ ಮಾರ್ಗಾಂತರ ಯೋಜನೆ

ಸಿ) ಶಿವಸಮುದ್ರ ಸೀಜನಲ್ ಸ್ಕೀಂ

ಡಿ) ಆಲಮಟ್ಟಿ ಅಣೆಕಟ್ಟು-ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ

ಇ) ಕಬಿನಿ ಅಣೆಕಟ್ಟು ವಿದ್ಯುತ್ ಉತ್ಪಾದನಾ ಕೇಂದ್ರ

46. ವಿದ್ಯುತ್ ವಲಯಕ್ಕಾಗಿ 1990-91 ರಲ್ಲಿ ಒಟ್ಟು 274.90 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದ್ದು, 1991-92 ರಲ್ಲಿ 371-60 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಒಟ್ಟು ವಿದ್ಯುತ್ ಉತ್ಪಾದನೆಯು, 1990-91 ರಲ್ಲಿನ 11.753 ದಶಲಕ್ಷ ಯೂನಿಟ್‌ಗಳಷ್ಟಾಗಿದ್ದು 1991-92 ರಲ್ಲಿ 13,010 ದಶಲಕ್ಷ ಯೂನಿಟ್‌ಗಳಿಗೆ ಹೆಚ್ಚಲಿದೆ. ಇಷ್ಟಾದರೂ, ಸರಬರಾಜು ಮತ್ತು ಬೇಡಿಕೆ ನಡುವೆ ಹೆಚ್ಚಿನ ಅಂತರ ಇದ್ದೇ ಇರುತ್ತದೆ. ವ್ಯಾಜ್ಯದ ಕಾರಣದಿಂದಾಗಿ ಶರಾವತಿ ಟೇಲ್ ರೇಸ್ ಯೋಜನೆಯು ಸ್ಥಗಿತಗೊಂಡಿದೆ. ಕೈಗಾ ಅಣು ವಿದ್ಯುತ್ ಸ್ಥಾವರದಿಂದ ಎಂಟನೆ ಯೋಜನಾ ಅವಧಿಯಲ್ಲಿ ಯಾವುದೇ ವಿದ್ಯುತ್ ದೊರೆಯುವ ಸಾಧ್ಯತೆ ಇಲ್ಲ. ಕಲ್ಲಿದ್ದಲಿನ ಕೊರತೆ ಹಾಗೂ ಸಾರಿಗೆ ಅಡಚಣೆಗಳು ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಯನ್ನು ಕುಂಠಿತ ಗೊಳಿಸವೆ. ಈ ಕಾರಣಗಳಿಂದಾಗಿ, ಸರ್ಕಾರವು, ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸಲು ಖಾಸಗಿ ವಲಯಗಳಿಗೂ ಅವಕಾಶ ನೀಡಲು ಈಗಾಗಲೇ ನಿರ್ಣಯಿಸಿದೆ. ಆದಷ್ಟು ಬೇಗ ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಿಸಲು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

47. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ಶರಾವತಿ ಯೋಜನೆಯಲ್ಲಿ ಪೂರಕ ಜಲಾಶಯವಾಗಿ ಕಾರ್ಯನಿರ್ವಹಿಸುತ್ತಿರುವ ತಲಕಳಲೆ ಅಣೆಕಟ್ಟು ಭಾರಿ ಪ್ರಮಾಣದಲ್ಲಿ ನೀರು ಸೋರಿಕೆಯಿಂದ ಮತ್ತು ತೂಬುಗಳು ಇಲ್ಲದೇ ಇರುವ ಕಾರಣದಿಂದ ಶಿಥಿಲಗೊಂಡಿದೆ. ಈಗಿರುವ ಅಣೆಕಟ್ಟನ್ನು ದುರಸ್ತಿಗೊಳಿಸುವುದು ತಾಂತ್ರಿಕವಾಗಿ ಕಾರ್ಯಸಾಧ್ಯವಲ್ಲದ ಕಾರಣ ಈಗ ಇರುವ ಅಣೆಕಟ್ಟಿನ ಕೆಳಗಡೆ 65 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಕಾಂಕ್ರೀಟ್ ಅಣೆಕಟ್ಟನ್ನು ಕಟ್ಟಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯನ್ನು 1991 ರ ಏಪ್ರಿಲ್‌ನಿಂದ ಪ್ರಾರಂಭಿಸಿ ಐದು ವರ್ಷಗಳೊಳಗಾಗಿ ಪೂರ್ಣಗೊಳಿಸಲಾಗುವುದು

48. ನೀರಾವರಿ

ರಾಜ್ಯದ ನೀರಾವರಿ ಸಾಮರ್ಥ್ಯ ಸುಮಾರು 55 ಲಕ್ಷ ಹೆಕ್ಟೇರುಗಳು, 1990ರ ಮಾರ್ಚ್ ಅಂತ್ಯದ ಹೊತ್ತಿಗೆ ಒಟ್ಟು 29.78 ಲಕ್ಷ ಹೆಕ್ಟೇರುಗಳಷ್ಟು ಸಾಮರ್ಥ್ಯವನ್ನು ಕಲ್ಪಿಸಲಾಗಿದೆ. 1990-91 ರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗಳಿಗೆ 160.00 ಕೋಟಿ ರೂಪಾಯಿಗಳನ್ನು ಮತ್ತು ಸಣ್ಣ ನೀರಾವರಿಗೆ 31.59 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದರೆ, 1991-92 ರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗೆ 190 ಕೋಟಿ ರೂಪಾಯಿಗಳನ್ನು ಹಾಗೂ ಸಣ್ಣ ನೀರಾವರಿಗೆ 35.19 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. 1990-91 ರಲ್ಲಿ ಕಾವೇರಿ ಕಣಿವೆ ಯೋಜನೆಗಳಿಗೆ, ಯೋಜನಾವೆಚ್ಚದ ಹೊರಗೆ 110 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದರೆ, ಈಗ ತಾತ್ಕಾಲಿಕವಾಗಿ 130 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಹೀಗಾಗಿ, ಭಾರಿ ಹಾಗೂ ಮಧ್ಯಮ

ಯೋಜನೆಗಳ ಅಡಿಯಲ್ಲಿ 25.744 ಹೆಕ್ಟೇರುಗಳಷ್ಟು, ಕಾವೇರಿ ಕಣಿವೆ ಯೋಜನೆಗಳ ಅಡಿಯಲ್ಲಿ 11,846 ಹೆಕ್ಟೇರುಗಳಷ್ಟು, ಸಣ್ಣ ನೀರಾವರಿ ಯೋಜನೆ ಅಡಿಯಲ್ಲಿ 10,000 ಹೆಕ್ಟೇರುಗಳಷ್ಟು ಹೆಚ್ಚಿನ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

49. ನಾವು ಕಾವೇರಿ ಕಣಿವೆ ಯೋಜನೆಗಳಿಗೆ ಯೋಜನೇತರ ಶೀರ್ಷಿಕೆಯಲ್ಲಿ ಹಣವನ್ನು ಒದಗಿಸುತ್ತಿದ್ದೇವೆ. ಇವೆಲ್ಲಾ ಬಂಡವಾಳ ಕಾಮಗಾರಿಗಳೇ. ರಾಜ್ಯಗಳ ನಡುವೆ ನೀರಿನ ಹಂಚಿಕೆ ಪ್ರಮಾಣದ ಬಗ್ಗೆ ವಿವಾದವಿದೆಯೆಂಬ ಒಂದೇ ಕಾರಣಕ್ಕಾಗಿ, ಯೋಜನೆಯ ಅಡಿಯಲ್ಲಿ ಅವುಗಳನ್ನು ಕೈಗೊಳ್ಳಲು ನಮಗೆ ಅನುಮತಿ ದೊರೆತಿಲ್ಲ. ಒಂದು ನಿರ್ದಿಷ್ಟ ಪ್ರಮಾಣದ ನೀರಿನ ಬಳಕೆ ಕುರಿತಂತೆ ನೆರೆ ರಾಜ್ಯಗಳ ನಡುವೆ ವಿವಾದ ಇರುವುದಿಲ್ಲ. ಈ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಸಲುವಾಗಿ ವಿದೇಶಿ ಆರ್ಥಿಕ ಸಹಾಯ ಪಡೆಯಲು ನಮಗೆ ಸಾಧ್ಯವಾಗುವಂತೆ ಈ ವಿವಾದಗ್ರಸ್ತವಲ್ಲದ ನೀರಿನ ಪ್ರಮಾಣಕ್ಕೆ ಸಂಬಂಧಿಸಿದ ಯೋಜನೆಗಳನ್ನು ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಅನುಮತಿ ನೀಡಬೇಕೆಂದು ನಾನು ಯೋಜನಾ ಆಯೋಗದ ಉಪಾಧ್ಯಕ್ಷರನ್ನು ಕೋರಿದ್ದೇನೆ. ಯೋಜನಾ ಆಯೋಗದ ಉಪಾಧ್ಯಕ್ಷರಿಂದ ಈ ಬಗ್ಗೆ ಆಶಾದಾಯಕ ಪ್ರತಿಕ್ರಿಯೆ ದೊರೆತಿದೆ ಎಂದು ಸದನಕ್ಕೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಅವರು, ಈ ಕುರಿತು ಮತ್ತಷ್ಟು ಪರಿಶೀಲನೆ ಮಾಡಿ ಈ ಯೋಜನೆಗಳಲ್ಲಿ ಕೆಲವನ್ನು ಯೋಜನೇತರ ಬಾಬಿನಿಂದ ಯೋಜನಾ ಬಾಬಿಗೆ ವರ್ಗಾಯಿಸಲು ನಮಗೆ ಅನುಮತಿ ನೀಡುವರೆಂದು ನಾನು ಆಶಿಸುತ್ತೇನೆ. 1980-81 ರಿಂದ ಕೃಷ್ಣಾ ಮತ್ತು ಕಾವೇರಿ ಕಣಿವೆ ಯೋಜನೆಗಳಿಗೆ ಮಾಡಿರುವ ವೆಚ್ಚಗಳ ಬಗ್ಗೆ ಹಾಗೂ ಅವುಗಳನ್ನು ಪೂರ್ಣಗೊಳಿಸಲು ಅಗತ್ಯವಾದಂತಹ ಹಣದ ಮೊತ್ತದ ಬಗ್ಗೆ ತಿಳಿದುಕೊಳ್ಳಲು ಈ ಸದನವು ಇಚ್ಛಿಸಬಹುದು. ಇವುಗಳನ್ನು ಅನುಬಂಧ VI ರಲ್ಲಿ ಕೊಡಲಾಗಿದೆ. 1990-91 ರಲ್ಲಿ, ಕೃಷ್ಣಾ ಕಣಿವೆ ಯೋಜನೆಗೆ 145.10 ಕೋಟಿ ರೂಪಾಯಿಗಳು ಮತ್ತು ಕಾವೇರಿ ಕಣಿವೆ ಯೋಜನೆಗೆ 113.75 ಕೋಟಿ ರೂಪಾಯಿಗಳ ಏರ್ಪಾಟು ಮಾಡಲಾಗಿದ್ದು. 1991.92 ರಲ್ಲಿ ಕೃಷ್ಣಾ ಕಣಿವೆ ಯೋಜನೆಗಳಿಗೆ 171 ಕೋಟಿ ರೂಪಾಯಿಗಳನ್ನು ಹಾಗೂ ಕಾವೇರಿ ಕಣಿವೆ ಯೋಜನೆಗಳಿಗೆ 138 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ. ಕೇಂದ್ರ ನಿರ್ದಿಷ್ಟ ಹಂಚಿಕೆ ತಿಳಿದ ನಂತರ ಕಾವೇರಿ ಕಣಿವೆ ಯೋಜನೆಗಳಿಗೆ ಹೆಚ್ಚಿನ ಹಣ ನೀಡಲಾಗುವುದು.

50. ಸಹಕಾರಿ ಕ್ಷೇತ್ರದಲ್ಲಿ ಕೈಗೊಳ್ಳುವ ಏತ ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತು ನೀಡಲು ನಾನು ಬಯಸುತ್ತೇನೆ. ಏತ ನೀರಾವರಿ ಯೋಜನೆಗಳನ್ನು ನಿರ್ವಹಿಸಲು ರೈತರಿಗೆ ಉತ್ತೇಜನ ನೀಡಲಾಗುವುದು. ಈ ದಿಸೆಯಲ್ಲಿ ಮಾಡಿರುವ ಪ್ರಯತ್ನಗಳು ಏನೇನೂ ಸಾಲದು. ಈಗ ರಾಜ್ಯದಲ್ಲಿ 429 ಏತ ನೀರಾವರಿ ಯೋಜನೆಗಳಿದ್ದು, ಮುಂದಿನ ವರ್ಷ ಇನ್ನೂ ಹೆಚ್ಚಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಏತ ನೀರಾವರಿ ಸಹಕಾರಿ ಸಂಘಗಳನ್ನು ಸಂಘಟಿಸಲು, ನಡೆಸಲು ಮತ್ತು ನಿರ್ವಹಿಸಲು ನಾನು ರೈತರ ಸಹಕಾರವನ್ನು ಕೋರುತ್ತೇನೆ.

51. ರಾಯಚೂರು ಜಿಲ್ಲೆಯ ಹಿರೇಹಳ್ಳ ಮತ್ತು ಮಾಸ್ಕಿನ ಹಳ್ಳ ಯೋಜನೆಗಳು, ಬಿಜಾಪುರ ಜಿಲ್ಲೆಯ ಹಿಪ್ಪರಗಿ ಒಡ್ಡು ಮತ್ತು ಮುಳಗಾಡ ಏತ ನೀರಾವರಿ ಯೋಜನೆ, ಮಹಾದಾಯ ಹಾಗೂ ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರನ್ನು ಒದಗಿಸುವ ಮಲಪ್ರಭಾ ಮಾರ್ಗಾಂತರ ಯೋಜನೆ-ಇವುಗಳ ಯೋಜನೆಯ ಅಡಿ ಸಾಕಷ್ಟು ಹಣ ಒದಗಿಸಿಲ್ಲ ಎಂಬ ಅರಿವು ನನಗಿದೆ. ಪ್ರಸಕ್ತ ವರ್ಷದಲ್ಲಿ ಅಗತ್ಯವಾಗಬಹುದಾದಷ್ಟು ಹಣವನ್ನು ಮುಂದೆ ಒದಗಿಸಲಾಗುವುದು.

52. "ಆಶ್ರಯ " ವಸತಿ ಯೋಜನೆ

ಇನ್ನು ಮುಂದೆ ಗೃಹ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು, ಇವುತ್ತು ಎಷ್ಟು ಜನರಿಗೆ ನಿವೇಶನಗಳಿಲ್ಲ ಎಂಬುದನ್ನು ಹೊಸದಾಗಿ ಗುರುತಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಸಮಾಜದ ದುರ್ಬಲ ವರ್ಗದವರಿಗೆ ಉಚಿತವಾಗಿ ನಿರ್ವೇಶಗಳನ್ನು ನೀಡಲು ಸರ್ಕಾರವು ನಿರ್ಣಯಿಸಿದೆ. ಈ ಉದ್ದೇಶಕ್ಕಾಗಿ ನಾನು 1.73 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ. ಈ ಸಂಬಂಧದಲ್ಲಿ, ದುರ್ಬಲ ವರ್ಗದವರಿಗೆ ಉಚಿತವಾಗಿ ನಿವೇಶನಗಳನ್ನು ನೀಡಲು ಸಾಧ್ಯವಾಗುವಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲಾಗಿದೆ. 1991-92ರಲ್ಲಿ ಸುಮಾರು ಒಂದು ಲಕ್ಷ ಮನೆ ನಿವೇಶನಗಳನ್ನು ಹಂಚಲು ಉದ್ದೇಶಿಸಲಾಗಿದೆ. ಸಾರ್ವಜನಿಕರಲ್ಲಿ, ಭೂಮಿಯನ್ನು ದಾನ ಮಾಡಬಲ್ಲಂಥವರು ಮುಂದೆ ಬಂದು, ಪ್ರತಿಯೊಂದು ಗ್ರಾಮದಲ್ಲಿಯೂ ನಿವೇಶನಗಳನ್ನು ರಚಿಸಲು ಸಹಾಯ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ತರಕಾರಿ ಮಾರುವವರು 'ಡಿ' ಗುಂಪಿನ ನೌಕರರು, ಕೂಲಿಗಳು, ಆಟೋರಿಕ್ಷಾ ಚಾಲಕರು, ರೈಲ್ವೇ ಪೋರ್ಟರುಗಳು, ಬಸ್ ಚಾಲಕರು, ಕಂಡಕ್ಟರುಗಳು ಮುಂತಾದ ಸಮಾಜದ ದುರ್ಬಲ ವರ್ಗದವರಿಗೆ ನಗರ ಪ್ರದೇಶಗಳಲ್ಲಿ ನಿವೇಶಗಳನ್ನು ಮೀಸಲಿಡುವಂತೆ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗುವುದು. ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಕೊಳ್ಳಲು 16 ಲಕ್ಷ ರೂಪಾಯಿ ನೆರವು ನೀಡಲಾಗುವುದು.

53. ಈವರೆಗೆ, ಗೃಹ ನಿರ್ಮಾಣ ಯೋಜನೆ ಮೇರೆಗೆ, 4,25,000ಕ್ಕಿಂತಲೂ ಹೆಚ್ಚು ಮನೆಗಳನ್ನು ನಿರ್ಮಿಸಲಾಗಿದೆ. ಮನೆಗಾಗಿ ಅಲೆಮಾರಿ ಹಾಗೂ ಅರೆಅಲೆಮಾರಿ ಜನರು ಪಡುತ್ತಿರುವ ಪಾಡು ಕರುಣಾಜನಕವಾಗಿದೆ. ಗೃಹನಿರ್ಮಾಣ ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳಲ್ಲಿ ಶೇಕಡಾ 10 ರಷ್ಟನ್ನು ಈ ಜನರಿಗೆ ಮೀಸಲಿಡಲು ನಾನು ತೀರ್ಮಾನಿಸಿದ್ದೇನೆ. 1991-92 ರಿಂದ ಭಾರಿ ಗೃಹನಿರ್ಮಾಣ ಯೋಜನೆಯೊಂದನ್ನು ಕೈಗೊಳ್ಳುವುದಾಗಿ ನಾನು ಈಗಾಗಲೇ ಘೋಷಿಸಿದ್ದೇನೆ. ದುರ್ಬಲವರ್ಗದವರಿಗೆ ಒದಗಿಸಲಾಗುವ ಮನೆಗಳಿಗೆ ಒಂದು ಹೆಚ್ಚುವರಿ ಕೊಠಡಿಯನ್ನು ಮತ್ತು ಗ್ರಾಮಗಳಲ್ಲಿ ನೈರ್ಮಲ್ಯ ಸೌಕರ್ಯಗಳನ್ನು ಸುಧಾರಿಸುವುದಕ್ಕಾಗಿ ಒಂದು ಪ್ರಿಫ್ಯಾಬ್ರಿಕೇಟೆಡ್ ಶೌಚಾಲಯವನ್ನು ಸೇರಿಸಲಾಗುವುದು.

54. ಸಮಾಜ ಕಲ್ಯಾಣ ಕಾರ್ಯಕ್ರಮಗಳು

ಡಾ ಬಿ.ಆರ್. ಅಂಬೇಡ್ಕರ್ ಅವರು ಒಮ್ಮೆ ಸಂಸತ್ತಿನಲ್ಲಿ ಹೀಗೆಂದಿದ್ದರು : "ನಮ್ಮಲ್ಲಿ ರಾಜಕೀಯ ಸಮಾನತೆ ಇದೆ, ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಉಳಿದಿದೆ. ನಾವು ಆದಷ್ಟು ಬೇಗನೆ ಈ ವೈಪರೀತ್ಯವನ್ನು ತೊಡೆದುಹಾಕಬೇಕು. ಇಲ್ಲವಾದರೆ, ಅಸಮಾನತೆಯಿಂದ ತೊಂದರೆಗೊಳಗಾದವರು ಈ ಸದನ ಇಷ್ಟೊಂದು ಶ್ರಮದಿಂದ ಕಟ್ಟಿದ ರಾಜಕೀಯ ಪ್ರಜಾ ತಂತ್ರ ಸೌಧವನ್ನೇ ನುಚ್ಚುನೂರು ಮಾಡುತ್ತಾರೆ. " ಈ ಎಚ್ಚರಿಕೆಯ ಮಾತುಗಳು ಇಂದಿಗೂ ಪ್ರಸ್ತುತವಾಗಿದೆ. ದುರ್ಬಲ ವರ್ಗದವರ ಕಲ್ಯಾಣ ಕಾರ್ಯವು ನಮ್ಮ ಸಾಮಾಜಿಕ ಆರ್ಥಿಕ ನೀತಿಯ ಬೆನ್ನೆಲುಬಾಗಿದೆ. ತೃಪ್ತಿಕರ ಜೀವನ ನಡೆಸುವಂಥ ಅವಕಾಶಗಳನ್ನು ಈ ಹಿಂದೆ ಈ ವರ್ಗಗಳಿಗೆ ನಿರಾಕರಿಸಲಾಗಿತ್ತು. ಈ ಹಿಂದುಳಿದ ವರ್ಗಗಳ ಉನ್ನತಿಗೆ ಮತ್ತು ಶೀಘ್ರ ಅಭಿವೃದ್ಧಿಗೆ ಈ ಸರ್ಕಾರ ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಪ್ರಯೋಜನಕ್ಕಾಗಿ, ವಿವಿಧ ಪ್ರಯೋಜನ ಆಧಾರಿತ ಯೋಜನೆಗಳಲ್ಲಿ ಶೇಕಡಾ 18 ರಷ್ಟನ್ನು ವೆಚ್ಚ ಮಾಡುವ ನೀತಿಯನ್ನು ನಾವು ಈಗಾಗಲೇ ಕಾರ್ಯಗತಗೊಳಿಸುತ್ತಿದ್ದೇವೆ. ಇದೇ ರೀತಿ, ಸರ್ಕಾರವು ಈ

ಕಾರ್ಯಕ್ರಮಗಳ ಅಡಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ವೆಚ್ಚ ಮಾಡಲು ಶೇಕಡಾ 32 ರಷ್ಟನ್ನು ಮೀಸಲಿಡಲು ನಿರ್ಧರಿಸಿದೆ.

55. ಆರಾಧನ

ಹರಿಜನ ಕೇರಿಗಳು, ಲಂಬಾಣಿ ತಾಂಡಾಗಳು, ಒಡ್ಡರ ಕೇರಿಗಳು ಮತ್ತು ಅದೇ ರೀತಿಯ ಸ್ಥಳಗಳಲ್ಲಿನ ದೇವಸ್ಥಾನಗಳು ಮತ್ತು ಇತರ ಪೂಜಾ ಮಂದಿರಗಳು ಬಹಳ ದುಸ್ಥಿತಿಯಲ್ಲಿರುವುದು ಮಾನ್ಯ ಸದಸ್ಯರಿಗೆ ತಿಳಿದ ಸಂಗತಿಯಾಗಿದೆ. ಅವರು ಆಯ್ಕೆ ಮಾಡುವ ಪೂಜಾ ಮಂದಿರಗಳನ್ನು ಪುನರ್‌ನಿರ್ಮಿಸಲು ಮತ್ತು ಜೀರ್ಣೋದ್ಧಾರ ಮಾಡಲು ಸರ್ಕಾರ ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ ನಾನು ಒಂದು ಕೋಟಿ ರೂಪಾಯಿಗಳ ಮೊತ್ತವನ್ನು ಮೀಸಲಿಟ್ಟಿದ್ದೇನೆ. ವಕ್ಫ್ ಸಂಸ್ಥೆಗಳ ನಿರ್ವಹಣೆಗಾಗಿ ಕೂಡ ಸರ್ಕಾರ 90 ಲಕ್ಷ ರೂಪಾಯಿಗಳನ್ನು ಒದಗಿಸುತ್ತದೆ.

56. ನೇರ ಆರ್ಥಿಕ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ, ದುರ್ಬಲ ವರ್ಗದವರಿಗೆ ವಿದ್ಯಾರ್ಥಿನಿಲಯಗಳೂ ಸೇರಿದಂತೆ, ಶೈಕ್ಷಣಿಕ ಸೌಕರ್ಯಗಳ ಸುಧಾರಣೆಗೆ ಒತ್ತು ನೀಡಲಾಗುವುದು. ಈಗ ಸಹಾಯಾನುದಾನ ಪಡೆಯುತ್ತಿರುವ 270 ವಿದ್ಯಾರ್ಥಿನಿಲಯಗಳಲ್ಲದೆ, ಸರ್ಕಾರ ನಡೆಸುತ್ತಿರುವ 753 ವಿದ್ಯಾರ್ಥನಿಲಯಗಳಿದ್ದು, ಅವುಗಳಲ್ಲಿ ಒಟ್ಟು 61,000ಕ್ಕಿಂತಲೂ ಹೆಚ್ಚು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿದ್ದಾರೆ. 36,000 ಹಿಂದುಳಿದ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಗಳಿರುವ 748 ವಿದ್ಯಾರ್ಥಿ ನಿಲಯಗಳಿವೆ. 1991-92 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಇನ್ನೂ 57 ವಿದ್ಯಾರ್ಥಿನಿಲಯಗಳನ್ನು ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ಇನ್ನೂ 65 ವಿದ್ಯಾರ್ಥಿನಿಲಯಗಳನ್ನು ಒದಗಿಸಲು ನಾವು ಉದ್ದೇಶಿಸಿದ್ದೇವೆ. ಹತ್ತು ಆಶ್ರಮ ಶಾಲೆಗಳನ್ನು ಮತ್ತು ಎರಡು ನಿವಾಸಿ ಶಾಲೆಗಳನ್ನು ನಿರ್ಮಿಸಲು ಕೂಡ ಉದ್ದೇಶಿಸಲಾಗಿದೆ.

57. ಪ್ರಸಕ್ತ ವರ್ಷದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮವು 53.95 ಕೋಟಿ ರೂಪಾಯಿಗಳ ಕಾರ್ಯಕ್ರಮ ವೆಚ್ಚದಲ್ಲಿ 30,868 ಫಲಾನುಭವಿಗಳಿಗೆ ನೆರವು ನೀಡುವ ಗುರಿ ಇಟ್ಟುಕೊಂಡಿತ್ತು. 1991-92 ರಲ್ಲಿ ಈ ಯೋಜನಾ ವೆಚ್ಚವನ್ನು 130 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದ್ದು, 44,800 ಫಲಾನುಭವಿಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.

58. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು, 1990-91 ರಲ್ಲಿ 117.24 ಲಕ್ಷ ರೂ.ಗಳ ಕಾರ್ಯಕ್ರಮ ವೆಚ್ಚದಲ್ಲಿ 1503 ಫಲಾನುಭವಿಗಳಿಗೆ ನೆರವು ನೀಡಿದೆ. 1991-92 ನೇ ಸಾಲಿನಲ್ಲಿ ಈ ನಿಗಮವು 400 ಲಕ್ಷ ರೂಪಾಯಿಗಳು ಕಾರ್ಯಕ್ರಮ ವೆಚ್ಚದಲ್ಲಿ 3600 ಫಲಾನುಭವಿಗಳಿಗೆ ನೆರವು ನೀಡುತ್ತದೆ.

59. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮವು, 1991-92 ನೇ ಸಾಲಿಗೆ ತನ್ನ ವಿವಿಧ ಯೋಜನೆಗಳಿಗಾಗಿ 240 ಲಕ್ಷ ರೂ.ಗಳ ಕಾರ್ಯಕ್ರಮ ವೆಚ್ಚ ಹೊಂದಿದ್ದು, ಇದರಿಂದ 2300 ಫಲಾನುಭವಿಗಳ ನೆರವು ದೊರೆಯಲಿದೆ. 1990-91ರಲ್ಲಿ, ನೆರವು ಪಡೆದ ಫಲಾನುಭವಿಗಳ ಸಂಖ್ಯೆ 833 ಮತ್ತು ಕಾರ್ಯಕ್ರಮ ವೆಚ್ಚ 100 ಲಕ್ಷ ರೂಪಾಯಿಗಳಾಗಿತ್ತು. ಸರ್ಕಾರವು, ರಾಜ್ಯದ ಅಲ್ಪ ಸಂಖ್ಯಾತ ವರ್ಗದವರ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡುತ್ತದೆ.

60. ಶೇಕಡ 30 ರಷ್ಟು ಉದ್ಯೋಗಗಳನ್ನು ಮಹಿಳೆಯರಿಗೆ ಮೀಸಲಿಡುವ ತನ್ನ ಕಾರ್ಯ ನೀತಿಯನ್ನು ಸರ್ಕಾರ ಈಗಾಗಲೇ ಪ್ರಕಟಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. ಸ್ವಂತ ಉದ್ಯೋಗದಲ್ಲಿ ತೊಡಗುವ ಮಹಿಳೆಯರಿಗೆ ನೆರವಾಗಲು ಕರ್ನಾಟಕ

ಮಹಿಳಾ ಅಭಿವೃದ್ಧಿ ನಿಗಮದ ಚಟುವಟಿಕೆಗಳಿಗೆ ನಾನು ಹೆಚ್ಚು ಬೆಂಬಲ ನೀಡಬಯಸಿದ್ದೇನೆ. ಈ ನಿಗಮದ 1990-91 ರ ಕಾರ್ಯಕ್ರಮ ವೆಚ್ಚ 80 ಲಕ್ಷ ರೂಪಾಯಿಗಳಾಗಿತ್ತು. 1991-92 ನೇ ಸಾಲಿನಲ್ಲಿ 574 ಲಕ್ಷ ರೂಪಾಯಿಗಳ ಕಾರ್ಯಕ್ರಮ ವೆಚ್ಚಕ್ಕೆ ಉದ್ದೇಶಿಸಲಾಗಿದೆ.

61. 1990-91 ರಲ್ಲಿ ಡಾ ಅಂಬೇಡ್ಕರ್ ಶತಮಾನೋತ್ಸವ ಆಚರಣೆಗಳ ಅಂಗವಾಗಿ ನಾವು ಈ ಮುಂದಿನ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುವುದಕ್ಕಾಗಿ ಸುಮಾರು 30 ಕೋಟಿ ರೂಪಾಯಿಗಳ ವಿಶೇಷ ಘಟಕ ಕಾರ್ಯಕ್ರಮ ನಿಧಿಯನ್ನು ಕ್ರೋಢೀಕರಿಸಿದ್ದೇವೆ.

	ಕೋಟಿ ರೂಪಾಯಿಗಳಲ್ಲಿ
1. ಪರಿಶಿಷ್ಟ ಜಾತಿಯವರಿಗೆ ಮನೆಗಳ ನಿರ್ಮಾಣ	15.00
2. ಪರಿಶಿಷ್ಟ ವಿದ್ಯಾರ್ಥಿನಿಲಯ ಕಟ್ಟಡಗಳ ನವೀಕರಣ	3.00
3. ಹೊಸ ವಿದ್ಯಾರ್ಥಿನಿಲಯಗಳ ನಿರ್ಮಾಣ	3.86
4. ದೇವದಾಸಿಯರ ಪುನರುದ್ಧಾರಕ್ಕೆ ಹೊಸ ವ್ಯವಸ್ಥೆ	2.00
5. ವಿಶೇಷ ನೀರಾವರಿ ಯೋಜನೆ	3.00
6. ಪರಿಶಿಷ್ಟ ಜಾತಿಗಳವರ ಜಮೀನಿನ ಕೊಳವೆಬಾವಿಗಳಿಗೆ ವಿದ್ಯುತ್ ಸೌಕರ್ಯ	1.00
7. ಕುಶಲತೆ ಅಭಿವೃದ್ಧಿ ಯೋಜನೆ	1.30
8. ಪರಿಶಿಷ್ಟ ಜಾತಿಗಳಿಗೆ ಹಂಚಲು ಭೂಮಿಯ ಖರೀದಿ	1.00
ಒಟ್ಟು	30.16

1991-92ರ ಅವಧಿಯಲ್ಲಿ ಸರ್ಕಾರವು ಅಂಬೇಡ್ಕರ್ ಭವನದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುತ್ತದೆ. ಈ ಉದ್ದೇಶಕ್ಕಾಗಿ ನಾನು 20 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ್ದೇನೆ. ಈ ನಿಧಿಯನ್ನು ದಾನಿಗಳಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ, ಬೆಂಗಳೂರು ನಗರ ಪಾಲಿಕೆಯಿಂದ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಂದ ವಂತಿಗೆಗಳನ್ನು ಪಡೆದು ವೃದ್ಧಿಗೊಳಿಸಲಾಗುವುದು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ 1990-91 ರಲ್ಲಿ 85.11 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದು, 1991-92 ನೇ ಸಾಲಿಗೆ 107.07 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

62. ವೃದ್ಧಾಪ್ಯ ವೇತನವನ್ನು, ದಿನಾಂಕ 1-4-1991 ರಿಂದ ಜಾರಿಗೆ ಬರುವಂತೆ, ಈಗಿರುವ ಮಾಸಿಕ 50 ರೂಪಾಯಿಗಳಿಂದ 75 ರೂಪಾಯಿಗಳಿಗೆ ಹೆಚ್ಚಿಸಲು ನಾನು ನಿರ್ಧರಿಸಿದ್ದೇನೆ. ಇದರಿಂದ , ರಾಜ್ಯದ ಬೊಕ್ಕಸಕ್ಕೆ ವರ್ಷಕ್ಕೆ 16ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ವೆಚ್ಚ ಉಂಟಾಗುತ್ತದೆ.

63. ಸಹಕಾರ

ಸಹಕಾರ ಸಂಘಗಳು ಆರ್ಥಿಕವಾಗಿ ಸಮರ್ಥವಾಗುವಂತೆ ಮತ್ತು ಉತ್ಪಾದಕ ಘಟಕಗಳಾಗಿ ಕಾರ್ಯನಿರ್ವಹಿಸುವಂತೆ ಮಾಡುವ ದೃಷ್ಟಿಯಿಂದ ಅವುಗಳನ್ನು ಪುನಶ್ಚೇತನಗೊಳಿಸುವ ಅಗತ್ಯವಿದೆ. ಈ ಸಂಬಂಧದಲ್ಲಿ, ಸಹಕಾರಿಗಳು ವಹಿಸುವ ಪಾತ್ರವು ಮತ್ತು ಅವರ ಈಕ್ವಿಟಿ ಪಾಲಿನ ಪ್ರಮಾಣವು ಅತ್ಯಂತ ಪ್ರಮುಖವಾದುದಾಗಿರುತ್ತದೆ. ಸಾಲ ನೀಡಿಕೆ, ಮಾರಾಟ ಮತ್ತು ತಯಾರಿಕಾ ಸಹಕಾರಿ ಸಂಘಗಳು, ವೃತ್ತಿಪರ ಸಂಸ್ಥೆಗಳಂತೆ ಕಾರ್ಯ ನಿರ್ವಹಿಸದಿದ್ದರೆ, ಸಹಕಾರಿ ಚಳುವಳಿಯ ನೈಜ ಉದ್ದೇಶಗಳು

ಈಡೇರುವುದಿಲ್ಲ. ಈ ಕುರಿತು ಸರ್ಕಾರವು ಸಹಕಾರ ಸಂಘಗಳ ಅಧಿನಿಯಮವನ್ನು ತಿದ್ದುಪಡಿ ಮಾಡಿ ಹಲವಾರು ಕ್ರಮಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಅಲ್ಲದೆ, ವಿವಿಧ ಸಂಸ್ಥೆಗಳಿಂದ ಪಡೆದುಕೊಂಡಿರುವ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡುವಂತೆ ಎಲ್ಲ ಸಹಕಾರಿ ಸಂಸ್ಥೆಗಳಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಖರೀದಿ ತೆರಿಗೆ ರಿಯಾಯಿತಿ ನೀಡಲಾಗಿದೆ. ಬಾಕಿಯಿರುವ ಹಣದ ಪೈಕಿ ಕನಿಷ್ಠ ಪಕ್ಷ ಶೇಕಡಾ 50 ರಷ್ಟನ್ನು ವಸೂಲಿ ಮಾಡಿ ಆ ಹಣವನ್ನು ಇತರ ಹೊಸ ಘಟಕಗಳಲ್ಲಿ ತೊಡಗಿಸಲಾಗುವುದು. ನೀರಾವರಿ ಸೌಲಭ್ಯಗಳು ಹೆಚ್ಚಾಗಿರುವುದರಿಂದ ಅನೇಕ ರೈತರು ಕಬ್ಬನ್ನು ಬೆಳೆಯಲು ಉತ್ಸುಕರಾಗಿದ್ದಾರೆ. ಸಹಕಾರ ವಲಯದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಸೂಕ್ತ ಷೇರು ಬಂಡವಾಳ ತೊಡಗಿಸಲು ಅವರು ಮುಂದೆ ಬಂದಿದ್ದಾರೆ. ರೈತರ ಆದಾಯವನ್ನು ಹೆಚ್ಚಿಸುವ ದೃಷ್ಟಿಯಿಂದ, ಹೆಚ್ಚು ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಲು ಸರ್ಕಾರವು ನಿರ್ಧರಿಸಿದೆ.

64. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲಭ್ಯವಿರುವ ಹೆಚ್ಚುವರಿ ಹಣವನ್ನು ಕ್ರೋಢೀಕರಿಸಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಂಗಳಕ್ಕೆ ಉತ್ಪನ್ನವನ್ನು ತರಲು ರೈತರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಉಪಯೋಗಿಸಬೇಕೆಂದು ಸಹಾ ನಿರ್ಧರಿಸಲಾಗಿದೆ.

65. ವಿದೇಶೀ ನೆರವಿನ ಯೋಜನೆಗಳು

ರಾಜ್ಯದಲ್ಲಿ ವಿದೇಶೀ ನೆರವಿನ 18 ಯೋಜನೆಗಳು ಚಾಲ್ತಿಯಲ್ಲಿದ್ದು ಅವುಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. 1991-92ರ ಅವಧಿಯಲ್ಲಿ ಕೈಗೊಳ್ಳಬೇಕೆಂದು ಉದ್ದೇಶಿಸಿರುವ ಕೆಲವು ಹೊಸ ಯೋಜನೆಗಳೆಂದರೆ ಒ.ಡಿ.ಎ. ನೆರವಿನ ಪಶ್ಚಿಮ ಘಟ್ಟಗಳ ಅರಣ್ಯ ಯೋಜನೆ ಮತ್ತು ಒ.ಇ.ಸಿ.ಎಫ್. ನೆರವಿನ ಸಮಗ್ರ ಭೂ ಬಳಕೆ ನಿರ್ವಹಣಾ ಯೋಜನೆ (ಕ್ಲಂಪ್)

66. ವಿಶೇಷ ಪ್ರದೇಶ ಕಾರ್ಯಕ್ರಮಗಳು

ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಮತ್ತು ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇನ್ನು ಮುಂದೆಯೂ ಪ್ರಾಶಸ್ತ್ಯ ನೀಡಲಾಗುವುದು. ಈ ಕಾರ್ಯಕ್ರಮಗಳಿಗೆ 1991-92 ನೇ ಸಾಲಿಗೆ ಅನುಕ್ರಮವಾಗಿ 50 ಕೋಟಿ ರೂಪಾಯಿಗಳು ಮತ್ತು 10 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ, ಈ ಕಾರ್ಯಕ್ರಮದ ಅಡಿಯಲ್ಲಿ ಕೆಲಸ ಕಾರ್ಯಗಳು ಪ್ರಾರಂಭವಾಗಿವೆ ಮತ್ತು 1991-92 ರ ಅವಧಿಯಲ್ಲಿ ಗಣನೀಯ ಪ್ರಗತಿಯನ್ನು ನಿರೀಕ್ಷಿಸಲಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶವು ಒಂದು ಹಿಂದುಳಿದ ಪ್ರದೇಶವಾಗಿರುವ ಕಾರಣದಿಂದಾಗಿ, ಅದಕ್ಕೆ ಹೆಚ್ಚು ಹಣ ಒದಗಿಸಲು ಯೋಜನಾ ಆಯೋಗವು ಒಪ್ಪಿದೆ. ಈ ಕಾರ್ಯಕ್ರಮಕ್ಕೆ ಭಾರತ ಸರ್ಕಾರವು ವಿಶೇಷ ಕೇಂದ್ರ ನೆರವನ್ನು ಕೊಡುತ್ತದೆಂದು ನಾವು ನಂಬಿದ್ದೇವೆ. ಈ ಮೊತ್ತವನ್ನು ಬಿಡುಗಡೆ ಮಾಡುವಂತೆ ನಾನು ಯೋಜನಾ ಆಯೋಗವನ್ನು ಕೋರಿದ್ದೇನೆ.

67. ಮಲ್ನಾಡು ಪ್ರದೇಶದ ಬಹಳಷ್ಟು ಭಾಗಗಳು ಅಭಿವೃದ್ಧಿಯಾಗಿಲ್ಲ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದಿಂದಲೂ ಈ ಪ್ರದೇಶಕ್ಕೆ ಸಾಕಷ್ಟು ಮೂಲಭೂತ ಸೌಕರ್ಯ ಒದಗಿಲ್ಲ. ಇಂಥ ಪರಿಸ್ಥಿತಿಯನ್ನು ಇನ್ನೂ ಮುಂದುವರಿಯಲು ಬಿಡಬಾರದು. ಆದುದರಿಂದ ನಾನು ಮಲ್ನಾಡು ಅಭಿವೃದ್ಧಿ ಮಂಡಲಿಯೊಂದನ್ನು ರಚಿಸಲು ನಿರ್ಧರಿಸಿದ್ದೇನೆ. 1991-92ನೇ ವರ್ಷಕ್ಕೆ ನಾನು 10 ಕೋಟಿ ರೂಪಾಯಿಗಳ ಒಂದು ಸಾಂಕೇತಿಕ ಮೊಬಲಗನ್ನು ಒದಗಿಸಿದ್ದೇನೆ. ಇನ್ನು ಅಭಿವೃದ್ಧಿಯಾಗಿರದ ಪ್ರದೇಶ ಎಂದು

ಪರಿಗಣಿಸಬೇಕೆಂದು ಮತ್ತು ಈ ಪ್ರದೇಶದ ಅಭಿವೃದ್ಧಿಗಾಗಿ ಹೆಚ್ಚಿನ ಹಣ ನೀಡಬೇಕೆಂದು ನಾವು ಯೋಜನಾ ಆಯೋಗವನ್ನು ಒತ್ತಾಯಿಸುತ್ತೇವೆ.

68. ಮಾದರಿ ಗ್ರಾಮ-ಮಾದರಿ ರೈತರು

ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಗ್ರಾಮವನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು, 1991-92 ನೇ ಸಾಲಿಗಾಗಿ ಒಟ್ಟು ಯೋಜನಾ ವೆಚ್ಚದಲ್ಲಿ 10 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ ಎಂದು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಈ ಕಾರ್ಯಕ್ರಮದ ಅಡಿ ಕಡಿಮೆ ವೆಚ್ಚದಲ್ಲಿ ನೈರ್ಮಲ್ಯ ವ್ಯವಸ್ಥೆ, ಬೀದಿಗಳಿಗೆ ಹಾಗೂ ಮನೆಗಳಿಗೆ ದೀಪದ ವ್ಯವಸ್ಥೆ, ಸಂಪರ್ಕ ರಸ್ತೆಗಳು, ಸಮಗ್ರ ಸಾಕ್ಷರತಾ ಕಾರ್ಯಕ್ರಮಗಳು, ಗೋಬರ್ ಅನಿಲ ಸ್ಥಾವರಗಳು ಹಾಗೂ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುವುದು. ಅಲ್ಲದೆ, ಈ ಪ್ರತಿಯೊಂದು ಗ್ರಾಮಗಳ ಇಬ್ಬರು ಸಣ್ಣ ಅತಿಸಣ್ಣ ರೈತರಿಗೆ ಈ ಗ್ರಾಮದ ಮಾದರಿ ರೈತರಾಗುವುದಕ್ಕೆ ನೆರವು ನೀಡಲಾಗುವುದು.

69. ಸಾರ್ವಜನಿಕ ಸಾರಿಗೆ ವ್ಯವಸ್ಥೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯು ಕಳೆದ ಕೆಲವು ವರ್ಷಗಳಿಂದಲೂ ಸುಧಾರಿಸುತ್ತಿದೆ. ಆದಾಗ್ಯೂ, ಎಲ್ಲಾ ಮಾರ್ಗಗಳಿಗೆ, ಮುಖ್ಯವಾಗಿ ರಾಜ್ಯದ ಎಲ್ಲ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಒದಗಿಸಲು ಸಂಸ್ಥೆಗೆ ಸಾಧ್ಯವಾಗುತ್ತಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಿಸದಿರುವ ಮಾರ್ಗವನ್ನು ಖಾಸಗಿ ವಲಯಗಳಿಗೆ ವಹಿಸಿಕೊಡುವ ವಿಷಯವನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತದೆ. ಈ ಬಗ್ಗೆ ವಿವರಗಳನ್ನು ಸಿದ್ಧಪಡಿಸಲಾಗುತ್ತಿದೆ.

70. ರಾಜ್ಯ ಹೆದ್ದಾರಿಗಳಲ್ಲಿ ಸಂಚಾರ ದಟ್ಟಣೆ ಮಿತಿಮೀರಿ ಹೆಚ್ಚುತ್ತಿದೆ. ಬೆಂಗಳೂರು-ಮೈಸೂರು ರಸ್ತೆ, ಮೈಸೂರು-ಹಾಸನ ರಸ್ತೆ ಇದಕ್ಕೆ ನಿದರ್ಶನ. ರಸ್ತೆಗಳನ್ನು ನಾಲ್ಕು ಸಂಚಾರ ಪಥ ವೇಗ ಮಾರ್ಗಗಳಾಗಿ (ಫೋರ್ ಲೇನ್ ಎಕ್ಸ್‌ಪ್ರೆಸ್) ಮಾಡದಿದ್ದರೆ ಪ್ರಯಾಣಿಕರ ಜೀವಕ್ಕೆ ಅಪಾಯ ತಪ್ಪಿದ್ದಲ್ಲ. ಸುಂಕ ಸಂಗ್ರಹಣೆ ಆಧಾರದ ಮೇಲೆ, ಕೊನೇ ಪಕ್ಷ ಕೆಲವಾರು ರಸ್ತೆಗಳನ್ನು ವಹಿಸಿಕೊಳ್ಳುವಂತೆ ಖಾಸಗೀ ವಲಯದವರನ್ನು ಕೇಳಲು ನಾನು ತೀರ್ಮಾನಿಸಿದ್ದೇನೆ. ಕಾರ್ಯ ವಿಧಾನಗಳನ್ನು ಸಿದ್ಧಪಡಿಸಲಾಗುತ್ತಿದೆ.

71. ಪೊಲೀಸ್

ಕಾನೂನು ಪಾಲನೆ ಮತ್ತು ಸುವ್ಯವಸ್ಥೆ ರಾಜ್ಯದ ಆದ್ಯ ಕರ್ತವ್ಯ. ಇತ್ತೀಚಿನ ಕೋಮು ಗಲಭೆಗಳು, ಪೊಲೀಸ್ ವ್ಯವಸ್ಥೆಯಲ್ಲಿನ ಕುಂದುಕೊರತೆಗಳನ್ನು ತೋರಿಸಿ ಕೊಟ್ಟಿವೆ. ಪೋಲಿಸ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವುದಕ್ಕಾಗಿ, ಪೊಲೀಸ್ ಇಲಾಖೆಗೆ 1990-91ರಲ್ಲಿ 167.55 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಇದನ್ನು 1991-92 ರಲ್ಲಿ 195.64 ಕೋಟಿ ರೂಪಾಯಿಗಳಿಗೇರಿಸಿದ್ದೇನೆ. ಕ್ಯಾನ್‌ಫಿನ್ ಹೋಮ್ಸ್ ಸಂಸ್ಥೆಯಿಂದ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮವು (ಕೆ.ಎಸ್.ಪಿ.ಎಚ್.ಸಿ) 10.00 ಕೋಟಿ ರೂಪಾಯಿಗಳ ಸಾಲ ಪಡೆಯುವುದಕ್ಕೆ ಸರ್ಕಾರವು ಒಪ್ಪಿಗೆ ನೀಡಿದೆ. ಇದರಿಂದಾಗಿ, ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮವು, ರಾಜ್ಯದ ಪೊಲೀಸರಿಗಾಗಿ ಬಹಳಷ್ಟು ಮನೆಗಳನ್ನು ಕಟ್ಟಲು ಸಾಧ್ಯವಾಗುತ್ತದೆ. ಅಗ್ನಿಶಾಮಕದಳಕ್ಕೆ ಹೆಚ್ಚಿನ ವ್ಯವಸ್ಥೆಯಾಗಿ, 1991-92 ನೇ ಸಾಲಿಗೆ 13.03 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

72. ಸರ್ಕಾರಿ ನೌಕರರು

ಸರ್ಕಾರಿ ನೌಕರಿಗೆ ಮನೆ ಕಟ್ಟಲು ಸಾಲ ನೀಡುವುದಕ್ಕಾಗಿ, ಸರ್ಕಾರವು ಬಡ್ಡಿ ಸಹಾಯಧನ ಕೊಡುವ ಹಾಗೂ ಎಚ್.ಡಿ.ಎಫ್.ಸಿ. ಯಿಂದ ಸಾಲ ದೊರಕಿಸಿಕೊಡುವ ಹೊಸ ಯೋಜನೆಯು ಕಳೆದ ಎರಡು ವರ್ಷಗಳಿಂದ ಜಾರಿಯಲ್ಲಿದೆ. ಈವರೆಗೆ ಈ ಉದ್ದೇಶಕ್ಕಾಗಿ ನಾವು 55.00 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದೇವೆ. ನೌಕರರ ಹೆಚ್ಚುವರಿ ಅಗತ್ಯತೆಗಳನ್ನು ಪೂರೈಸಲು ಇನ್ನೂ 10.00 ಕೋಟಿ ರೂಪಾಯಿಗಳ ಇನ್ನೊಂದು ಕಂತಿಗಾಗಿ ಬೇಡಿಕೆ ಸಲ್ಲಿಸಲಾಗಿದೆ. ಹಾಗೆಯೇ ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೆ 1 ಕೋಟಿ ರೂಪಾಯಿ ವೆಚ್ಚದಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಈ ಉದ್ದೇಶಕ್ಕಾಗಿ ಹುಡ್ಕೊ ಎಲ್.ಐ.ಸಿ.ಯಿಂದ ನೆರವನ್ನು ಪಡೆಯಲಾಗುವುದು.

73. ಸರ್ಕಾರಿ ನೌಕರರ ಮನೋಸ್ಥೈರ್ಯ. ಕುಂದದಂತೆ ನೋಡಿಕೊಂಡಲ್ಲಿ ಅವರು ರಾಜ್ಯದ ಆಡಳಿತಕ್ಕೆ ಉತ್ತಮ ಸೇವೆ ಸಲ್ಲಿಸಬಲ್ಲರು ಎಂದು ನಾನು ನಂಬಿದ್ದೇನೆ. ಬಡ್ತಿ ಅವಕಾಶಗಳು ಸಾಕಷ್ಟಿಲ್ಲದಿರುವುದರಿಂದಾಗಿ, ಕೆಳಗಿನ ಮತ್ತು ಮಧ್ಯಮ ಕೇಡರುಗಳ ಸರ್ಕಾರಿ ನೌಕರರಲ್ಲಿ ಅಸಮಾಧಾನದ ಭಾವನೆ ಉಂಟಾಗಿದೆ. ಅವರನ್ನು ಕ್ರಿಯಾಶೀಲರನ್ನಾಗಿ ಮಾಡುವ ಉದ್ದೇಶದಿಂದ, 15 ವರ್ಷಗಳಿಂದಲೂ ಯಾವುದೇ ಬಡ್ತಿ ಇಲ್ಲದೇ ಒಂದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ವಿಶೇಷ ತತ್ಕಾಲೀನ ಬಡ್ತಿ ಯೋಜನೆಯನ್ನು ಪ್ರಾರಂಭಿಸಲು ನಾನು ನಿರ್ಧರಿಸಿದ್ದೇನೆ. ಈ ಯೋಜನೆಯು ಈಗ ಇರುವ 20 ವೇತನ ಶ್ರೇಣಿಗಳ ಪೈಕಿ, ಮೊದಲಿನ 12 ವೇತನ ಶ್ರೇಣಿಗಳಲ್ಲಿ ಬರುವ ಯಾವುದೇ ಹುದ್ದೆಯನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತದೆ. ವಿವರಗಳನ್ನು ವಿಶೇಷ ಅಧಿಕಾರಿ ಸಮಿತಿಯೊಂದು ಸಿದ್ಧಪಡಿಸುತ್ತದೆ. ಸಮಿತಿಯನ್ನು ಕೂಡಲೇ ರಚಿಸಲಾಗುವುದು.

74. ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ನಿವೃತ್ತಿ ವಯಸ್ಸನ್ನು 58ಕ್ಕೆ ಇಟ್ಟುಕೊಳ್ಳಲು ನಿರ್ಧರಿಸಿದೆ. ವೇತನ ತಾರತಮ್ಯ ನಿವಾರಣೆಯ ಅಧಿಕೃತ ಸಮಿತಿಯ ವರದಿಯನ್ನು ಸಚಿವ ಸಂಪುಟದ ಉಪಸಮಿತಿಯ ಮುಂದೆ ಮಂಡಿಸಲಾಗುವುದು ಮತ್ತು ಈ ಕುರಿತು ಮೂರು ತಿಂಗಳ ಒಳಗಾಗಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಸರ್ಕಾರಿ ನೌಕರರು ಸರ್ಕಾರದೊಂದಿಗೆ ಸಹಕರಿಸುವರೆಂದು ಮತ್ತು ರಾಜ್ಯದ ಜನತೆಗೆ ಅತ್ಯುತ್ಸಾಹದಿಂದ ಸೇವೆ ಸಲ್ಲಿಸುವರೆಂದು ನಾನು ನಿರೀಕ್ಷಿಸುತ್ತೇನೆ.

75. ಪ್ರವಾಸೋದ್ಯಮ

ಕರ್ನಾಟಕದಲ್ಲಿ ಆಕರ್ಷಣೀಯ ಪ್ರವಾಸಿ ತಾಣಗಳು ಹೇರಳವಾಗಿದ್ದರೂ ಪ್ರವಾಸಿಗರ, ಅದರಲ್ಲೂ ವಿದೇಶಿ ಪ್ರವಾಸಿಗರ ಸಂಖ್ಯೆ ಹೇಳಿಕೊಳ್ಳುವಷ್ಟಿಲ್ಲ. ರಾಜ್ಯದಲ್ಲಿ ಪ್ರವಾಸೋದ್ಯಮದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ದಿಶೆಯಲ್ಲಿ, ಒ.ಇ.ಸಿ.ಎಫ್. ನೆರವಿನೊಂದಿಗೆ. 110.60 ಕೋಟಿ ರೂಪಾಯಿ ವೆಚ್ಚದ ಒಂದು ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡುವಂತೆ ಭಾರತ ಸರ್ಕಾರವನ್ನು ಕೋರಿದ್ದೇವೆ. ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಜಂಟಿ ಪ್ರಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದೊಡನೆ ನಾವು ಸಮಾಲೋಚನೆ ನಡೆಸುತ್ತಿದ್ದೇವೆ. 1991-92ನೇ ಸಾಲಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಯೋಜನೆಗೆ ನಾನು 620 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇನೆ. ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವ ಕಾರ್ಯದಲ್ಲಿ ನಮ್ಮ ರಾಜ್ಯವು ಉತ್ತೇಜಕ ಶಕ್ತಿಯಾಗಿ ಕೆಲಸ ಮಾಡುತ್ತದೆ. ಅಲ್ಲದೆ ಖಾಸಗಿ ವಲಯವು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

76. ಜೋಗಜಲಪಾತದಲ್ಲಿ ಜಲಧಾರೆ ಸಾಕಷ್ಟು ಇಲ್ಲದಿರುವ ಕಾಲದಲ್ಲೂ ಪ್ರವಾಸಿಗರನ್ನು ಜೋಗಿಗೆ ಆಕರ್ಷಿಸುವ ಉದ್ದೇಶಕ್ಕಾಗಿ ಜಲಪಾತದ ಸ್ವಲ್ಪ ಮೇಲುಗಡೆ ಶರಾವತಿ ನದಿಗೆ, ಒಂದು ಒಡ್ಡನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಒಡ್ಡಿನಿಂದ ಶನಿವಾರ ಮತ್ತು ಭಾನುವಾರಗಳಂದು ಜಲಪಾತಕ್ಕೆ ನೀರು ಹಾಯಿಸಿ ಜಲಪಾತದ ಪೂರ್ಣ ಸೊಬಗನ್ನು ಪ್ರವಾಸಿಗರು ವೀಕ್ಷಿಸುವಂತೆ ಮಾಡಲಾಗುವುದು. ವಿದ್ಯುಚ್ಛಕ್ತಿಯ ಉತ್ಪಾದನೆಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಈ ಒಡ್ಡನ್ನು ನಿರ್ಮಿಸಲಾಗುವುದೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ನೀಡಬಯಸುತ್ತೇನೆ.

77. ಯುವಜನ ಸೇವೆಗಳು

ರಾಜ್ಯ ಸರ್ಕಾರವು ಹಲವಾರು ಸ್ಥಳಗಳಲ್ಲಿ 19 ಕ್ರೀಡಾಂಗಣಗಳ ನಿರ್ಮಾಣ ಕಾರ್ಯಕ್ರಮವನ್ನು ಕೈಗೊಂಡಿದೆ. ಈ ಪೈಕಿ, 8 ಪೂರ್ಣಗೊಂಡಿದೆ. ಇನ್ನುಳಿದ ಕ್ರೀಡಾಂಗಣಗಳನ್ನು 1991-92ರಲ್ಲಿ ಸಾರ್ವಜನಿಕರ ಸಹಕಾರದಿಂದ ಪೂರ್ಣಗೊಳಿಸಲು ನಾನು ಉದ್ದೇಶಿಸಿದ್ದೇನೆ. ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯು, ಹೈದರಾಬಾದು-ಕರ್ನಾಟಕ ಪ್ರದೇಶದ 32 ತಾಲೂಕು ಕೇಂದ್ರಗಳಲ್ಲಿ, ಸಣ್ಣ ಕ್ರೀಡಾಂಗಣಗಳ ನಿರ್ಮಾಣಕ್ಕಾಗಿ ಯೋಜನೆಯೊಂದನ್ನು ಸಿದ್ಧಪಡಿಸಿದೆ. ಇದಕ್ಕೆ ಹೈದರಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ನಿಧಿಯಿಂದ ಹಣ ಒದಗಿಸಲಾಗುವುದು. ಇತರ ತಾಲೂಕೂಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ ಕಾರ್ಯವನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

78. ಕನ್ನಡ ಮತ್ತು ಸಂಸ್ಕೃತಿ

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಸರ್ಕಾರ ಹೆಚ್ಚು ಆದ್ಯತೆ ನೀಡುತ್ತದೆ. ಸರ್ಕಾರವು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ :

ಎ) ಸಂಕಷ್ಟದಲ್ಲಿರುವ ಲೇಖಕರಿಗೆ ಮತ್ತು ಕಲಾವಿದರಿಗೆ ಈಗಿರುವ ಮಾಸಾಶನವನ್ನು ಮುಂದುವರಿಸುವುದು.

ಬಿ) ಅಸಹಾಯಕ ಪರಿಸ್ಥಿತಿಯಲ್ಲಿರುವ ಜಾನಪದ ಕಲಾವಿದರಿಗೆ ಸಮೂಹ ವಿಮಾ ಯೋಜನೆಯನ್ನು ಜಾರಿಗೆ ತರುವುದು.

ಸಿ) ಹಲವಾರು ಸ್ಥಳಗಳಲ್ಲಿ ಈಗಾಗಲೇ ಕಾರ್ಯ ಆರಂಭವಾಗಿರುವ ರಂಗಮಂದಿರಗಳ ನಿರ್ಮಾಣ ಕಾರ್ಯವನ್ನು ಸಾರ್ವಜನಿಕರ ಸಹಕಾರದಿಂದ ಪೂರ್ಣಗೊಳಿಸುವುದು.

ಡಿ) ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪರಂಪರೆಗೆ ಸ್ಫೂರ್ತಿಯ ನೆಲೆಯಾಗಿರುವ ಪ್ರಾಚೀನ ಗ್ರಂಥಗಳು ಸಾರ್ವಜನಿಕರಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡಲು ಯೋಜನೆಯೊಂದನ್ನು ಪ್ರಾರಂಭಿಸಲಾಗುವುದು.

ಇ) ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಹಲವಾರು ವೃತ್ತಿ ನಾಟಕ ಕಂಪನಿಗಳು ಆರ್ಥಿಕ ತೊಂದರೆಗಳಿಂದ ಮುಚ್ಚುವ ಸ್ಥಿತಿಗೆ ಬಂದಿವೆ. ಅಂಥ ಕಂಪನಿಗಳ ಪುನರುಜ್ಜೀವನಕ್ಕೆ ಆರ್ಥಿಕ ನೆರವು ನೀಡುವ ಯೋಜನೆಯೊಂದನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ನಾಟಕ ಕಂಪನಿಗಳು, ನಾಟಕ ಪ್ರದರ್ಶನಗಳಿಗೆ ಲೈಸೆನ್ಸು ಪಡೆದುಕೊಳ್ಳುವುದಕ್ಕಾಗಿ ಅನೇಕ ಅಧಿಕಾರಿಗಳ ಬಳಿ ಅಲೆಯಬೇಕಾಗಿದೆ. ಸಿಂಗಲ್ ವಿಂಡೋ ಏಜೆನ್ಸಿ ವ್ಯವಸ್ಥೆಯಂತೆ ಒಂದೇ ಪ್ರಾಧಿಕಾರದಿಂದ ಲೈಸೆನ್ಸು ಪಡೆದುಕೊಳ್ಳುವುದು ಸಾಧ್ಯವಾಗುವಂತೆ ಈ ಪದ್ಧತಿಯನ್ನು ಸರಳಗೊಳಿಸಲು ನಾನು ನಿರ್ಧರಿಸಿದ್ದೇನೆ.

ಎಫ್) ಕನ್ನಡದ ಪ್ರಸಿದ್ಧ ಸಾಹಿತಿಗಳು ಭಾಷೆ ಮತ್ತು ಸಂಸ್ಕೃತಿಗೆ ನೀಡಿದ ಅಪೂರ್ವ ಕಾಣಿಕೆಗಳನ್ನು ಸಂರಕ್ಷಿಸುವುದಕ್ಕಾಗಿ "ಟ್ರಸ್ಟ್"ಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಮುಂದಿನ ಪೀಳಿಗೆಗೆ ಉಪಯುಕ್ತವಾಗುವಂಥ ಯೋಜನೆಗಳನ್ನು ಈ ಟ್ರಸ್ಟುಗಳು

ರೂಪಿಸುತ್ತವೆ. ಧಾರವಾಡದಲ್ಲಿ ಡಾ॥ದ.ರಾ. ಬೇಂದ್ರೆ ಅವರಿಗಾಗಿ ಸೂಕ್ತ ಸ್ಮಾರಕವೊಂದರ ನಿರ್ಮಾಣ ಮತ್ತು ಡಾ॥ ಕುವೆಂಪು ಮತ್ತು ಡಾ। ಪು.ತಿ.ನರಸಿಂಹಾಚಾರ್ ಅವರ ಜನ್ಮಸ್ಥಳಗಳನ್ನು ನಿರ್ವಹಿಸುವ ಕಾರ್ಯಗಳನ್ನು ಈ ಟ್ರಸ್ಟುಗಳು ನೋಡಿಕೊಳ್ಳುತ್ತವೆ.

(ಜಿ) ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಕಾರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ.

(ಹೆಚ್) ವಿಡಿಯೋ ಪಾರ್ಲರ್‌ಗಳು, ಕೇಬಲ್ ಟೆಲಿವಿಜನ್, ಡಿಶ್ ಆಂಟೆನಾಗಳು ಬಹಳ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತಿವೆ. ಇದು ಕನ್ನಡ ಚಲನ ಚಿತ್ರೋದ್ಯಮದ ಬೆಳವಣಿಗೆಗೆ ಪ್ರತಿಕೂಲ ಪರಿಣಾಮ ಬೀರಿದೆ ಮತ್ತು ಯುವಕರ ಮೇಲೆ ದುಷ್ಪರಿಣಾಮವುಂಟುಮಾಡುತ್ತಿದೆ. ಆದುದರಿಂದ ಈ ಚಟುವಟಿಕೆಗಳಿಗೆ ಲೈಸನ್ಸುಗಳನ್ನು ನೀಡದಿರಲು ಸರ್ಕಾರ ನಿರ್ಧರಿಸಿದೆ.

1991-92ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳಿಗಾಗಿ 50.00 ಲಕ್ಷ ರೂಪಾಯಿ ಒದಗಿಸಿದ್ದೇನೆ. ಇದನ್ನು ಅಗತ್ಯತೆಗೆ ಅನುಗುಣವಾಗಿ ಮುಂದೆ ಹೆಚ್ಚಿಸಲಾಗುವುದು.

79. 1990-91ರ ಸ್ವೀಕೃತಿಗಳು

ವಿವಿಧ ಸ್ವೀಕೃತಿಗಳ ಪರಿಷ್ಕೃತ ಅಂದಾಜುಗಳನ್ನು ಸದನದ ಮುಂದೆ ನಾನು ಮಂಡಿಸುತ್ತೇನೆ:

ಕ್ರ. ಸಂ.	ಸ್ವೀಕೃತಿ	ಬಜೆಟ್ ಅಂದಾಜು	ಮಾರ್ಪಡಿಸಿದ ಅಂದಾಜು	ಪರಿಷ್ಕೃತ ಅಂದಾಜು	ವ್ಯತ್ಯಾಸ
		(1)	(2)	(3)	(3) - (2)
1	2	3	4	5	6
ಎ)	1. ಮಾರಾಟ ತೆರಿಗೆ	1249.78	1327.78	1374.00	(+) 46.22
	2. ಕೃಷಿ ವರಮಾನದ ಮೇಲೆ ತೆರಿಗೆ	13.00	13.00	7.60	(-) 5.40
	3. ವೃತ್ತಿ ತೆರಿಗೆ	41.45	41.45	41.45	...
	4. ಪ್ರವೇಶ ತೆರಿಗೆ	57.80	57.80	63.00	(+) 5.20
	5. ಮನರಂಜನಾ ತೆರಿಗೆ	41.00	41.00	41.00	....
	6. ವಿಲಾಸಿ ವಸ್ತು ತೆರಿಗೆ	5.00	5.00	8.86	(+) 3.86
	7. ಜೂಜು ತೆರಿಗೆ	14.00	14.00	14.00	..
	ಒಟ್ಟು ವಾಣಿಜ್ಯ ತೆರಿಗೆಗಳು	1422.03	1500.03	1549.91	(+) 49.88
ಬಿ)	ರಾಜ್ಯ ಅಬ್ಕಾರಿ	426.10	555.00	469.00	(-) 86.00
ಸಿ)	ಮೋಟಾರು ವಾಹನ ತೆರಿಗೆ	176.37	189.65	190.00	(+) 0.35
ಡಿ)	ವಿದ್ಯುಚ್ಛಕ್ತಿ ಮೇಲಿನ ತೆರಿಗೆಗಳು ಮತ್ತು ಶುಲ್ಕಗಳು	63.10	63.10	60.54	(-) 2.56

ಇ)	ಸ್ಟಾಂಪು ಮತ್ತು ನೋಂದಣಿ	176.00	176.00	160.00	(-) 16.00
ಎಫ್)	ಭೂ ಕಂದಾಯ	16.00	16.00	16.00	....
ಜಿ)	ಸಣ್ಣ ಉಳಿತಾಯಗಳಿಂದ ಸಾಲಗಳು	270.00	270.00	245.00	(-) 25.00
ಹೆಚ್)	ಅರಣ್ಯ ಆದಾಯ	65.00	65.00	50.65	(-) 14.35
ಐ)	ಗಣಿ ಮತ್ತು ಖನಿಜಗಳು	19.28	19.28	16.00	(-) 3.28
ಜೆ)	ವಿದೇಶಿ ನೆರವಿನ ಯೋಜನೆಗಳಿಗೆ ಸೇರ್ಪಡೆಯಾದವುಗಳು	60.00	117.00	85.00	(-) 32.00
ಒಟ್ಟು ಜುಮ್ಲಾ		**2593.88**	**2971.06**	**2842.10**	**(-) 128.96**

128.96 ಕೋಟಿ ರೂಪಾಯಿ ಕೊರತೆಯು, ಕೆಲವು ಊಹೆಗಳ ಮೇರೆಗೆ ಮಾಡಿದ ಅಂದಾಜುಗಳು ನಿಜವಾಗದ ಕಾರಣದಿಂದ ಉಂಟಾದುದಾಗಿದೆ. ಆದರೂ, ವಾಣಿಜ್ಯ ತೆರಿಗೆಗಳಲ್ಲಿ ಆದ ಉತ್ತಮ ಸಂಗ್ರಹಣೆಯಿಂದ ಈ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲಾಗಿದೆ.

80. ಮೋಟಾರು ವಾಹನ ತೆರಿಗೆ

ಅನುಬಂಧ-VIIರಲ್ಲಿ ವಿವರಿಸಿರುವಂತೆ ತೆರಿಗೆ ಸ್ವರೂಪವನ್ನು ವ್ಯವಸ್ಥಿತಗೊಳಿಸಲು ನಾನು ಉದ್ದೇಶಿಸಿದ್ದೇನೆ.

1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಅಗತ್ಯವಿರುವ ತಿದ್ದುಪಡಿಯನ್ನು ಮಾಡಲು ಸಹ ಪ್ರಸ್ತಾವಿಸಲಾಗಿದೆ.

81. ಸ್ಟಾಂಪ್ ಮತ್ತು ನೋಂದಣಿ

ಆಸ್ತಿಯ ಕಡಿಮೆ ಮೌಲ್ಯನಿರ್ಣಯ ಸ್ಟಾಂಪ್ ಶುಲ್ಕವನ್ನು ಪಾವತಿ ಮಾಡದೆ ತಪ್ಪಿಸಿಕೊಳ್ಳುವುದು ಮತ್ತು ಈ ಹಿಂದೆ ನೀಡಿದ ಹೆಚ್ಚಿನ ವಿನಾಯಿತಿ ಇವುಗಳಿಂದಾಗಿ ರಾಜ್ಯ ಸರ್ಕಾರವು ಸ್ಟಾಂಪ್ ಮತ್ತು ನೋಂದಣಿಯ ಲೆಕ್ಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆದಾಯವನ್ನು ಕಳೆದುಕೊಳ್ಳುತ್ತಿದೆ. ಆದ್ದರಿಂದ, 1957ರ ಕರ್ನಾಟಕ ಸ್ಟಾಂಪ್ ಅಧಿನಿಯಮದ 45/ಎ ಪ್ರಕರಣದ ಉಪಬಂಧಗಳು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಮಾಡಲು ಉದ್ದೇಶಿಸಿದ್ದೇನೆ. 45.ಎ ಪ್ರಕರಣದ ಅಡಿಯ ಅಧಿಕಾರಗಳನ್ನು ಜಿಲ್ಲಾಧಿಕಾರಿಯವರಿಗೆ ವಹಿಸಿಕೊಡಲಾಗುವುದು.

82. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿಗಳ ಮೌಲ್ಯವನ್ನು ನಿರ್ಧರಿಸಲು, ಪ್ರತಿ ತಾಲೂಕಿನಲ್ಲೂ ಮೌಲ್ಯಮಾಪನ ಸಮಿತಿಗಳನ್ನು ರಾಜ್ಯ ಸರ್ಕಾರ ರಚಿಸುವುದು ಸಾಧ್ಯವಾಗುವಂತೆ ಮಾಡಲು ಕರ್ನಾಟಕ ಸ್ಟಾಂಪ್ ಅಧಿನಿಯಮದಲ್ಲಿ 45.ಬಿ ಪ್ರಕರಣವನ್ನು ಸೇರಿಸಲು ಉದ್ದೇಶಿಸಲಾಗಿದೆ.

83. ಶುಲ್ಕದ ಬಾಕಿಗಳನ್ನು ಆಸ್ತಿಯ ಮೇಲಣ ಹೊಣೆಯನ್ನಾಗಿ ಮಾಡಲಾಗುವುದು. ಎರಡನೆಯ ಸಲ ಅಪೀಲು ಹೋಗುವ ಅವಕಾಶವನ್ನು ರದ್ದುಗೊಳಿಸಲಾಗುವುದು. 45.ಎ ಪ್ರಕರಣವನ್ನು ಇನ್‌ಸ್ಟ್ರುಮೆಂಟ್ ಆಫ್ ಸೆಟಲ್‌ಮೆಂಟ್ಸ್ ಪಾಲುದಾರಿಕೆಗಳ ಪತ್ರಗಳು ಮತ್ತು ಬೇನಾಮಿ ಮಾರಾಟ ಪತ್ರಗಳಿಗೂ ಅನ್ವಯಿಸಲಾಗುವುದು.

84. ಇದುವರೆಗೆ ನೀಡಲಾದ ಎಲ್ಲ ವಿನಾಯಿತಿಗಳನ್ನು ಮರುಪರಿಶೀಲಿಸಲು ಮತ್ತು ಅವುಗಳನ್ನು ಪುನರ್‌ವ್ಯವಸ್ಥೆಗೊಳಿಸಲು ನಾನು ಉದ್ದೇಶಿಸಿದ್ದೇನೆ. ಈ ಬದಲಾವಣೆಗಳಿಂದಾಗಿ ರಾಜ್ಯ ಬೊಕ್ಕಸಕ್ಕೆ ಪ್ರತಿವರ್ಷಕ್ಕೆ 20.00 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಬರುವುದು.

85. ಗಣಿ ಮತ್ತು ಖನಿಜಗಳು

10 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಸಂಗ್ರಹಿಸುವುದಕ್ಕಾಗಿ, ರಾಜ್ಯದಲ್ಲಿ ಗ್ರಾನೈಟ್ ತೆಗೆಯುವ ಗಣಿಗೆ ಸಂಬಂಧಿಸಿದಂತೆ ಕಾರ್ಯನೀತಿಯನ್ನು ಸರ್ಕಾರವು ಸರಳಗೊಳಿಸಿದೆ. ಆದರೂ ಸರ್ಕಾರದ ಈ ಕಾರ್ಯನೀತಿಯನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಸರ್ಕಾರವು, ರಾಜ್ಯದಲ್ಲಿ ಗ್ರಾನೈಟ್ ಗಣಿಗೆ ಸಂಬಂಧಿಸಿದಂತೆ ತನ್ನ ಕಾರ್ಯನೀತಿಯನ್ನು ಕಾರ್ಯಗತಗೊಳಿಸುವುದು ಸಾಧ್ಯವಾಗುವುದಕ್ಕೆ ಅನುವು ಮಾಡಿಕೊಡುವಂತೆ ತಡೆಯಾಜ್ಞೆಯನ್ನು ತೆರವು ಮಾಡಬೇಕೆಂದು ಉಚ್ಚ ನ್ಯಾಯಾಲಯವನ್ನು ಕೋರಲು ಉದ್ದೇಶಿಸಿದೆ. ತಡೆಯಾಜ್ಞೆಯು ತೆರವಾದರೆ, 10 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಬರುತ್ತದೆ.

86. ಅರಣ್ಯ ಆದಾಯ

ಸರ್ಕಾರವು ಪಶ್ಚಿಮ ಘಟ್ಟಗಳಲ್ಲಿ ನಿತ್ಯಹರಿದ್ವರ್ಣ ಮತ್ತು ಅರೆ ನಿತ್ಯಹರಿದ್ವರ್ಣ ಅರಣ್ಯಗಳನ್ನು ಸಂರಕ್ಷಿಸುವ ನೀತಿಯೊಂದನ್ನು ಅನುಸರಿಸಿದೆ. ಈ ಕಾರ್ಯನೀತಿಯಿಂದಾಗಿ ಸರ್ಕಾರವು 1987-88 ರಿಂದ ವರ್ಷಕ್ಕೆ 85.00 ಕೋಟಿ ರೂಪಾಯಿ ಆದಾಯ ಕಳೆದುಕೊಂಡಿದೆ. ಪಶ್ಚಿಮಘಟ್ಟಗಳಲ್ಲಿರುವ ನಿತ್ಯಹರಿದ್ವರ್ಣ ಮತ್ತು ಅರೆ ನಿತ್ಯಹರಿದ್ವರ್ಣ ಅರಣ್ಯಗಳ ಸಂರಕ್ಷಣೆಯನ್ನು ವಿಶೇಷ ಸಮಸ್ಯಾ ಕ್ಷೇತ್ರ ಎಂಬುದಾಗಿ ಪರಿಗಣಿಸುವಂತೆ ಮತ್ತು ಈ ನಷ್ಟಕ್ಕೆ ಪರಿಹಾರ ನೀಡುವಂತೆ ಭಾರತ ಸರ್ಕಾರವನ್ನು ಕೋರುತ್ತೇನೆ.

87. ರಾಜ್ಯ ಸರ್ಕಾರದಲ್ಲಿ 3,300 ಟನ್‌ಗಳಷ್ಟು ಗಂಧದ ಮರದ ದಾಸ್ತಾನು ಇದೆ. ಇದಕ್ಕೆ ಸಾಧ್ಯವಾದಷ್ಟು ಉತ್ತಮ ಬೆಲೆ ಪಡೆಯಲು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ವಲ್ಪ ಭಾಗವನ್ನು ಮಾರಾಟ ಮಾಡಲಾಗುವುದು. ಈ ಕ್ರಮದಿಂದಾಗಿ, 1991-92ರಲ್ಲಿ 40.00ಕೋಟಿ ರೂಪಾಯಿ ಹೆಚ್ಚಿನ ಆದಾಯ ಬರುವ ನಿರೀಕ್ಷೆಯಿದೆ.

88. ರಾಜ್ಯ ಅಬ್ಕಾರಿ

1990-91ನೇ ವರ್ಷದ ಬಜೆಟ್ ಅಂದಾಜಿನಲ್ಲಿ ಅಬ್ಕಾರಿಯಿಂದ 365 ಕೋಟಿ ರೂಪಾಯಿ ಆದಾಯ ಬರುವುದೆಂದು ಅಂದಾಜು ಮಾಡಲಾಗಿತ್ತು ; 1990-91 ರ ಬಜೆಟ್ಟಿನಲ್ಲಿ ಪ್ರಕಟಿಸಿದ 61.10 ಕೋಟಿ ರೂಪಾಯಿ ಹೆಚ್ಚುವರಿ ಸಂಪನ್ಮೂಲದ ಸಂಗ್ರಹಣೆಯೊಂದಿಗೆ ಪ್ರಸಕ್ತ ವರ್ಷದಲ್ಲಿ 426.10 ಕೋಟಿ ರೂಪಾಯಿ ಬರುವುದೆಂದು ನಿರೀಕ್ಷಿಸಿದ್ದೇವೆ. 1990ರ ಮೇ-ಜೂನ್‌ನಲ್ಲಿ ನಡೆಸಿದ ಸಾರಾಯಿ ಹರಾಜುಗಳಿಂದಾಗಿ ಬಜೆಟ್ ಅಂದಾಜುಗಳಲ್ಲಿ ಲೆಕ್ಕ ಹಾಕಿದ್ದಕ್ಕಿಂತಲೂ ಬಾಡಿಗೆ ಮೊತ್ತ ಹೆಚ್ಚಿನ ಪ್ರಮಾಣದಲ್ಲಿ ಬಂದಿದೆ. ಹಣಕಾಸು ವರ್ಷಕ್ಕಾಗಿ, ಸಾರಾಯಿಯಿಂದ ಬರುವ ಬಾಡಿಗೆ ಮೊತ್ತ 320.08 ಕೋಟಿ ರೂಪಾಯಿ ಎಂದು ಪರಿಷ್ಕರಿಸಲಾಗಿದೆ. ಮೂಲ ಬಜೆಟ್ ಅಂದಾಜುಗಳಲ್ಲಿ ಸೇರಿಸಿದ್ದ ಮೊತ್ತ 193.6 ಕೋಟಿ ರೂಪಾಯಿಗಳು. ಈ ಹೆಚ್ಚುವರಿ ಆದಾಯದಿಂದಾಗಿ, 1990-91ರ ಅಬ್ಕಾರಿ ಆದಾಯದ ಅಂದಾಜುಗಳನ್ನು ವರ್ಷಾವಧಿಯಲ್ಲಿ 555 ಕೋಟಿ ರೂಪಾಯಿಗೆ ಹೆಚ್ಚಿಸಲಾಗಿತ್ತು.

89. ಐ.ಎಂ.ಎಲ್.ಗೆ ಸಂಬಂಧಿಸಿದಂತೆ ಸರ್ಕಾರದ ಧೋರಣೆ ಈ ರೀತಿ ಇತ್ತು:

ಎ) ನಾನ್‌ಡ್ಯೂಟಿ ಪೇಡ್ ಐಎಂಎಲ್ನ ಮಾರಾಟವನ್ನು ಸಂಪೂರ್ಣವಾಗಿ ತೆಗೆದುಹಾಕುವುದು;

ಬಿ) ಕಾಕಂಬಿ ಗುಣದ ಅಂಶವನ್ನು ಹೆಚ್ಚಿಸುವುದು ಹಾಗೂ ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟನ್ನು ಸಾರಾಯಿ ಮತ್ತು ಐಎಂಎಲ್‌ಗೆ ಪರಿವರ್ತಿಸಿ ರಫ್ತು ಮಾಡುವ ಮೂಲಕ ಅಬ್ಕಾರಿ ಆದಾಯ ಹೆಚ್ಚಿಸುವುದು.

90. ಐ.ಎಂ.ಎಲ್. ಮೇಲಿನ ರಫ್ತು ಶುಲ್ಕವನ್ನು ಪ್ರತಿ ಬಲ್ಕ್ ಲೀಟರಿಗೆ 1 ರೂಪಾಯಿಯಿಂದ 20ರೂಪಾಯಿಗಳಿಗೆ ಗಣನೀಯವಾಗಿ ಹೆಚ್ಚಿಸಲಾಗಿದೆ. ಈ ಕ್ರಮದಿಂದಾಗಿ ವರ್ಷದಲ್ಲಿ 38 ಕೋಟಿ ರೂಪಾಯಿ ಉತ್ಪತ್ತಿಯಾಗುವುದೆಂಬ ಮತ್ತು ನಾನ್-ಡ್ಯೂಟಿ ಪೇಡ್ ಲಿಕ್ಕರಿನ ಹೊಣೆಯನ್ನು ತಡೆಯುತ್ತದೆಂಬ ನಿರೀಕ್ಷೆಯಿತ್ತು. ಈಗ, 1990-91ರಲ್ಲಿ ಕೇವಲ 6.90 ಕೋಟಿ ರೂಪಾಯಿ ಉತ್ಪತ್ತಿಯನ್ನು ಮಾತ್ರ ನಿರೀಕ್ಷಿಸಲಾಗಿದೆ. ರಫ್ತು ಶುಲ್ಕದಿಂದ ಬರುವುದೆಂದು ನಿರೀಕ್ಷಿಸಿದ್ದ ಆದಾಯದ ಅಂದಾಜನ್ನು ವಾಸ್ತವಿಕ ಆಧಾರದ ಮೇಲೆ ಮಾಡಿರಲಿಲ್ಲ. ಕಳೆದ ವರ್ಷದಲ್ಲಿ ಬಂದಿದ್ದ ಮೊತ್ತಕ್ಕಿಂತ ಈಗ ಪ್ರಾಪ್ತವಾಗುವುದೆಂದು ನಿರೀಕ್ಷಿಸಿರುವ 6.90 ಕೋಟಿ ರೂಪಾಯಿ ಮೊತ್ತಕ್ಕೆ ರಫ್ತು ಶುಲ್ಕದ ದರದಲ್ಲಿ ಹೆಚ್ಚಳ ಮಾಡಿರುವುದೇ ಕಾರಣ. ಆದರೆ, ನಮ್ಮ ರಫ್ತುಗಳಿಗೆ ಸ್ಪರ್ಧಾತ್ಮಕ ಬೆಲೆ ಇರದ ಕಾರಣ ರಫ್ತಿನ ಪ್ರಮಾಣದಲ್ಲಿ ಇಳಿತ ಉಂಟಾಗಿದೆ. ಇದು ಮುಂದುವರಿದಲ್ಲಿ ಐಎಂಎಲ್ ಉತ್ಪಾದನೆಯು ಕುಂಠಿತಗೊಂಡು ಅದು ಉದ್ಯೋಗ ಮುಂತಾದವುಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತದೆ. ರಫ್ತು ಶುಲ್ಕದ ಬಗ್ಗೆ ಕಳೆದ ಅಧಿವೇಶನದಲ್ಲಿ ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸಿದ ಕಳಕಳಿಯನ್ನು ನಾನು ಗಮನಿಸಿದ್ದೇನೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಲಿಕ್ಕರಿನ ಚಲನವಲನಕ್ಕೆ ಸಂಬಂಧಿಸಿದಂತೆ ಕೆಲವು ಷರತ್ತುಗಳನ್ನು ವಿಧಿಸಿದನಂತರ ಮತ್ತು ನಿರ್ದಿಷ್ಟ ಘೋಷಣಾ ಪತ್ರ ತೆಗೆದುಕೊಂಡು ನಂತರ, ರಫ್ತು ಶುಲ್ಕವನ್ನು 2 ರೂಪಾಯಿಗೆ ನಿಗದಿಪಡಿಸಲು ನಾನು ನಿರ್ಧರಿಸಿದ್ದೇನೆ. ನಾನ್ ಡ್ಯೂಟಿ ಪೇಡ್ ಲಿಕ್ಕರ್ ವಿರುದ್ಧದ ಆಂದೋಲನವನ್ನು , ಅದು ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗಲು ಅಬ್ಕಾರಿ ಇಲಾಖೆಯ ಜಾರಿ ಯಂತ್ರಾಂಗವನ್ನು ಗಣನೀಯವಾಗಿ ಬಲಪಡಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಇದು ಪಾಪದ ಕೆಲಸ ಪಾಪದ ಕೆಲಸ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಆಡಳಿತ ಪಕ್ಷದವರು ವಿರೋಧಪಕ್ಷದ ಮುಖಕ್ಕೆ ಮಸಿ ಬಳಿಯುವಂತಹ ಕೆಲಸ.

ಶ್ರೀ ಸಿ. ಬೈರೇಗೌಡ : ಈ ರೀತಿ ಹೇಳತಕ್ಕಂಥಾದ್ದು ಅನ್ಯಾಯ. ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನೂ ಸೇರಿಸಿಕೊಂಡು ಹೇಳತಕ್ಕಂಥಾದ್ದು ಅನ್ಯಾಯ.

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದಲ್ಲಿ ನಾವು ಸೇರಿಲ್ಲ. ವಿರೋಧ ಪಕ್ಷ ಎಂದಾಗ ಯಾರು ಎಂಬುದನ್ನು ಹೇಳಬೇಕು. ನಾವು ಯಾರೂ ಇದನ್ನು ಹೇಳಿಲ್ಲ. ಈ ಅನ್ಯಾಯಕ್ಕೆ ನಾವು ಭಾಗಿಗಳಲ್ಲ. ಇದು ತಿದ್ದುಪಡಿಯಾಗಬೇಕು.

ಶ್ರೀ ಸಿ. ಬೈರೇಗೌಡ : ಕೆಲವು ವಿರೋಧ ಪಕ್ಷದ ಸದಸ್ಯರು ಎಂದು,ಬೇಕಾದರೆ ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಇದನ್ನು ವಿರೋಧ ಮಾಡಿ ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಇದನ್ನು ಬೇಕಾದರೆ ಕೆಲವು ವಿರೋಧ ಪಕ್ಷದ ಸದಸ್ಯರು ಎಂದು ಹೇಳಲಿ. ಎಲ್ಲರಿಗೂ ಹೇಳತಕ್ಕದ್ದು ಸರಿಯಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ ; ಇದನ್ನು ನಾವು ಹೇಳಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷ ಎನ್ನುವುದನ್ನು ಜನತಾದಳ ಎಂದು ತಿದ್ದಿಕೊಂಡರೆ ನಾನು ಇರುತ್ತೇನೆ; ಇಲ್ಲದಿದ್ದರೆ ವಾಕ್‌ಔಟ್ ಮಾಡುತ್ತೇನೆ.

(ಮಾನ್ಯ ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

91. ಏಪ್ರಿಲ್ 1990ರಿಂದ ಡಿಸೆಂಬರ್ 1990ರ ಅವಧಿಯಲ್ಲಿ ರಾಜ್ಯದಲ್ಲಿ ಐಎಂಎಲ್‌ಬಳಕೆ ಶೇಕಡಾ 35.48 ರಷ್ಟು ಆಗಿದ್ದು ಹಿಂದಿನ ವರ್ಷಕ್ಕೆ ಹೋಲಿಸಿ ನೋಡಿದರೆ ಇದು ದಾಖಲೆ ಪ್ರಮಾಣದ ಬಳಕೆ ಆಗಿದೆ.

92. ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟನ್ನು ಐಎಂಎಲ್‌ಗೆ ಮತ್ತು ಸಾರಾಯಿಗೆ ಮಾರ್ಪಾಡುಗೊಳಿಸುವುದರಿಂದ 1.50 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ. ಇದರ ಮೂಲ ಅಂದಾಜು 15 ಕೋಟಿ ರೂಪಾಯಿ ಆಗಿತ್ತು. 555 ಕೋಟಿ ರೂಪಾಯಿ ಆದಾಯದ ಅಂದಾಜುಗಳು, ಪ್ರತಿ ತಿಂಗಳಿಗೆ ಒಂದು ಕೋಟಿ ಲೀಟರ್ ಹಂತಕ್ಕೆ ತಲುಪುವ ಸಾರಾಯಿ ಬಳಕೆಯ ಆಧಾರದ ಮೇಲೆ ಆಧಾರಿತವಾಗಿದ್ದವು. ಈ ಊಹೆಗೆ, ಹರಾಜುಗಳಲ್ಲಿ ಬಂದ ಹೆಚ್ಚಿನ ಬಾಡಿಗೆ ಮೊತ್ತ ಆಧಾರವಾಗಿತ್ತು. ಆದರೂ, ಸಾರಾಯಿ ಬಳಕೆಯು ಪ್ರತಿ ತಿಂಗಳಿಗೆ ಸುಮಾರು 60 ಲಕ್ಷ ಲೀಟರ್‌ಗಳಷ್ಟಕ್ಕೆ ಸ್ಥಗಿತಗೊಂಡಿದೆಯೆಂದು ನಮ್ಮ ಅನುಭವದಿಂದ ಕಂಡುಬಂದಿದೆ. ಬಳಕೆಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿಲ್ಲವೆಂಬುದನ್ನೂ ಇದು ಸೂಚಿಸುತ್ತದೆ. ಇಲ್ಲೂ ಸಹ ನಿರೀಕ್ಷಿತತ ಆದಾಯವನ್ನು ಪ್ರತೀಕ್ಷೆಯ ಮೇಲೆಯೇ ಅಂದಾಜು ಮಾಡಲಾಗಿತ್ತು. ಪರಿಣಾಮವಾಗಿ,ಈ ಮೊದಲು ಸಾರಾಯಿ ಶುಲ್ಕದಿಂದ ಆದಾಯ ಬರುವುದೆಂದು ನಿರೀಕ್ಷಿಸಲಾಗಿದ್ದ 62.25 ಕೋಟಿ ರೂಪಾಯಿಗೆ ಬದಲು ಈಗ 41.25 ರೂಪಾಯಿ ಮಾತ್ರ ಆದಾಯ ಬರುವುದೆಂದು ನಿರೀಕ್ಷಿಸಲಾಗಿದೆ..

93. ಹೀಗಾಗಿ 1990-91ನೇ ವರ್ಷಕ್ಕಾಗಿ 555 ಕೋಟಿ ರೂಪಾಯಿ ಅಬ್ಕಾರಿ ಆದಾಯ ಬರುವುದೆಂದು ಅಂದಾಜುಮಾಡಿದ ಅನೇಕ ಊಹೆಗಳು ಪೂರ್ಣವಾಗಿ ಫಲಕಾರಿಯಾಗಿಲ್ಲ. ಆದ್ದರಿಂದ ಅಬ್ಕಾರಿ ಆದಾಯದ ಪರಿಷ್ಕೃತ ಅಂದಾಜುಗಳನ್ನು 469 ಕೋಟಿ ರೂಪಾಯಿಗೆ ನಿಗದಿಪಡಿಸಲಾಗಿದೆ. ಪ್ರಸಕ್ತ ವರ್ಷದ ಸಾರಾಯಿ ಬಾಡಿಗೆಯ 18 ಕೋಟಿ ರೂಪಾಯಿ ಮೊತ್ತಕ್ಕೆ ನ್ಯಾಯಾಲಯಗಳು ತಡೆಯಾಜ್ಞೆ ನೀಡಿವೆ. ಇದು ಬಗೆಹರಿದಲ್ಲಿ, ಈ ಮೊತ್ತಗಳನ್ನು ಪಡೆಯಲಾಗುವುದು. ಮತ್ತು ಆಗ ಪರಿಷ್ಕೃತ ಅಂದಾಜುಗಳ ಮೊತ್ತವು 487 ಕೋಟಿ ರೂಪಾಯಿ ಆಗುವುದು.

94. ಅಬ್ಕಾರಿ ನೀತಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ದುರುಪಯೋಗ ವಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಲೈಸನ್ಸ್‌ನೀಡಿಕೆಯ ಪದ್ಧತಿಯನ್ನು, ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ನ ನೀಡಿಕೆಯನ್ನು ಪುನರ್ ವ್ಯವಸ್ಥೆಗೊಳಿಸಬಯಸುತ್ತೇನೆ. ಈಗಿರುವ ಲೈಸೆನ್ಸ್ ನೀಡಿಕೆ ವ್ಯವಸ್ಥೆಯಲ್ಲಿಯ ಲೋಪದೋಷಗಳು ಬೇನಾಮಿ ವ್ಯವಹಾರಗಳಿಗೆ ಮತ್ತು ಮಾರಾಟ ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ಉತ್ತೇಜನ ನೀಡಬಹುದು. ಈ ಲೋಪದೋಷಗಳನ್ನು ಸರಿಪಡಿಸಲು ಒಬ್ಬ ವ್ಯಕ್ತಿಗೆ ಒಂದೇ ಲೈಸೆನ್ಸ್ ಎಂಬ ನೀತಿಯನ್ನು ತರಲು ಮತ್ತು ಲೈಸನ್ಸ್‌ಶುಲ್ಕವನ್ನು ಅನುಬಂಧ -VIIIರಲ್ಲಿ ಸೂಚಿಸಿರುವಂತೆ ಪರಿಷ್ಕರಿಸಲು ಉದ್ದೇಶಿಸಿದ್ದೇನೆ.

95. ಐಎಂಎಲ್ ಉತ್ಪನ್ನಗಳ ಮಾರಾಟವನ್ನು ಎಂಎಸ್‌ಐಎಲ್ ಮೂಲಕ ನಡೆಸುವ ವಿಷಯವು ಇನ್ನೂ ಸರ್ವೋಚ್ಚ ನ್ಯಾಯಾಲಯದ ಮುಂದಿದೆ. ಅನೇಕ ಡಿಸ್ಟಿಲರಿಗಳು ಸದ್ಯಕ್ಕೆ ಉತ್ಪನ್ನಗಳ ಮಾರಾಟಗಳನ್ನು ಎಂಎಸ್‌ಐಎಲ್ ಮೂಲಕ ನಡೆಸುತ್ತವೆ.

96. ಮಾರಾಟ ತೆರಿಗೆ

ಎ. ರಿಯಾಯಿತಿಗಳು

ಎ) ತೆರಿಗೆ ವಿನಾಯಿತಿಗಳು

i) ಆಧುನಿಕ ಉಪಕರಣಗಳ ಉಪಯೋಗವನ್ನು ಉತ್ತೇಜಿಸುವ ಉದ್ದೇಶದಿಂದ ಕೃಷಿವಲಯದಲ್ಲಿ ಉಪಯೋಗಿಸುವ ವಿದ್ಯುತ್ ಚಾಲಿತ ಡಸ್ಟರ್ ಮತ್ತು ಸ್ಪ್ರೇಯರ್‌ಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ನೀಡಲಾಗುವುದು.

ii) ಕೃಷಿಕರು ಪರಿಸರ ಸ್ನೇಹಪರ ಗೊಬ್ಬರಗಳನ್ನು ಉಪಯೋಗಿಸುವುದನ್ನು ಉತ್ತೇಜಿಸಲು ಜೈವಿಕ ಗೊಬ್ಬರ (Bio-fertilisers) ಗಳ ಮೇಲಿನ ಮಾರಾಟ ತೆರಿಗೆಯ ವಿನಾಯಿತಿ.

iii) ಕೈಗಾರಿಕೆಗಳು ಮಾಲಿನ್ಯ ತಡೆ ಅಥವಾ ಶುದ್ಧೀಕರಣದ ಸಾಧನಗಳನ್ನು ಸ್ಥಾಪಿಸುವುದನ್ನು ಉತ್ತೇಜಿಸಲು ಮಾಲಿನ್ಯ ತಡೆಯುವ ಅಥವಾ ಶುದ್ಧೀಕರಿಸುವ ಸಾಧನ(Effluent treatment and pollution control devices) ಗಳ ಮೇಲೆ ತೆರಿಗೆ ವಿನಾಯಿತಿ.

iv) ರೇಷ್ಮೆ ವ್ಯವಸಾಯದಲ್ಲಿ ಸಂಶೋಧನೆಯನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ರೇಷ್ಮೆ ವ್ಯವಸಾಯ ಅಭಿವೃದ್ಧಿ ಸಂಸ್ಥೆಯು ಖರೀದಿ ಮಾಡುವ ಪ್ರಯೋಗಶಾಲಾ ಉಪಕರಣಗಳು ಮತ್ತು ರಾಸಾಯನಿಕ ವಸ್ತುಗಳ ಮೇಲೆ ತೆರಿಗೆ ವಿನಾಯಿತಿ.

v) ರಾಜ್ಯದಲ್ಲಿ ಇದೀಗ ಬೆಳೆಯುತ್ತಿರುವ ಗಣಕ ಯಂತ್ರ ಸಾಫ್ಟ್ ವೇರ್ ಉದ್ಯಮವನ್ನು ಉತ್ತೇಜಿಸಲು ಗಣಕ ಯಂತ್ರ ಸಾಫ್ಟ್ ವೇರ್ ಮೇಲಿನ ತೆರಿಗೆ ವಿನಾಯಿತಿ.

vi) ದಳ್ಳಾಳಿಗಳಿಗೆ ನಿಗದಿಪಡಿಸಿರುವ ಕಡಿಮೆ ಕಮಿಷನ್ ದೃಷ್ಟಿಯಿಂದ ಅವರು ನಿಯಂತ್ರಿತ ಮಾರುಕಟ್ಟೆ ಪ್ರದೇಶಗಳಲ್ಲಿ ಮಾರುವ ಹುಣಸೆಹಣ್ಣು ಮತ್ತು ಸೀಗೆಕಾಯಿಗಳ ಮೇಲೆ ನೀಡಬೇಕಾದ ವಹಿವಾಟು ತೆರಿಗೆಯ ವಿನಾಯಿತಿ.

vii) 1-4-1986 ರಿಂದ ಜಾರಿಗೆ ಬಂದ ಮಾರಾಟ ತೆರಿಗೆಯ 'ಲೀಸಿಂಗ್'ಸುಂಕದಿಂದ ಚಲನಚಿತ್ರಗಳನ್ನು ಸಂಪೂರ್ಣ ವಿನಾಯಿತಿಗೊಳಿಸಲು ಸರ್ಕಾರ ಈ ಹಿಂದೆಯೆ ನಿರ್ಧರಿಸಿತ್ತು. ಆದರೆ ಈ ಬಗ್ಗೆ ನೀಡಲಾದ ಅಧಿಸೂಚನೆಯು ಅದನ್ನು ಹೊರಡಿಸಿದ ತಾರೀಖು ಅಂದರೆ 1-4-1987 ರಿಂದ ಮಾತ್ರ ಜಾರಿಗೆ ಬಂದಿತು. ಹೀಗಾಗಿ 1-4-1986 ಮತ್ತು 31-3-1987 ರ ಮಧ್ಯದ ಅವಧಿಗೆ ತೆರಿಗೆ ವಿನಾಯಿತಿ ಸಿಕ್ಕಿರಲಿಲ್ಲ. ಆದ್ದರಿಂದ, ಈ ಅವಧಿಗೆ ಉದ್ದೇಶಿತ ವಿನಾಯಿತಿಯನ್ನು ನೀಡಲಾಗುವುದು.

viii) 1990-91 ರ ಆಯವ್ಯಯ ಭಾಷಣದಲ್ಲಿ ಕಚ್ಚಾ ರೇಷ್ಮೆ ಮತ್ತು ರೇಷ್ಮೆ ನೂಲಿನ ಮೇಲೆ ಶೇಕಡಾ 4ರಂತೆ ತೆರಿಗೆ ವಿಧಿಸಲು ಪ್ರಸ್ತಾವಿಸಿದ್ದರೂ, ಈ ಸದನದಲ್ಲಿ ಹಾಗೂ ರೇಷ್ಮೆ ವ್ಯಾಪಾರಸ್ಥರಿಂದ ಬಂದ ವಿಚಾರ ವಿಮರ್ಶೆಯ ಹಿನ್ನಲೆಯಲ್ಲಿ, ತೆರಿಗೆ ದರವನ್ನು ಶೇಕಡಾ 2ಕ್ಕೆ ಇಳಿಸಲಾಗಿತ್ತು. ರಾಜ್ಯದ ರೇಷ್ಮೆ ಎಕ್ಸ್‌ಚೇಂಜ್‌ಗಳಲ್ಲಿ ಮಾರಾಟಕ್ಕೆ ಬಂದ ಕಚ್ಚಾ ರೇಷ್ಮೆಯ ಪ್ರಮಾಣದಲ್ಲಿ ಇಳಿಮುಖವಾಗಿದೆ ಹಾಗೂ ರೇಷ್ಮೆ ಎಕ್ಸ್‌ಚೇಂಜ್‌ಗೆ ಶುಲ್ಕ ಸಂಗ್ರಹಣೆ ಕ್ಷೀಣಿಸಿವೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆ. ಆದರೆ ಕಚ್ಚಾ ರೇಷ್ಮೆಯ ಮೇಲಿನ ಮಾರಾಟ ತೆರಿಗೆಯಿಂದಲೇ ಸರ್ಕಾರಕ್ಕೆ ಈವರೆಗೆ 2 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಸಂಗ್ರಹವಾಗಿದೆ. ನೆರೆ ರಾಜ್ಯಗಳಿಗೆ ವ್ಯಾಪಾರ ಪಲ್ಲಟವಾಗುತ್ತಿದೆಯೆಂದೂ, ಕಚ್ಚಾ ರೇಷ್ಮೆಯು ರೇಷ್ಮೆ ಎಕ್ಸ್‌ಚೇಂಜ್ ಮಾರುಕಟ್ಟೆ ಮೂಲಕ ಹಾದು ಹೋಗುತ್ತಿಲ್ಲವೆಂದೂ ಸರ್ಕಾರಕ್ಕೆ

ಮನವಿ ಸಲ್ಲಿಸಲಾಗಿದೆ. ರೇಷ್ಮೆಯ ಅಭಿವೃದ್ದಿಗಾಗಿ ರಾಜ್ಯ ಸರ್ಕಾರವು ಈ ಕೆಲ ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹಣ ತೊಡಗಿಸಿದೆ. ಈ ಹಣ ಹೂಡಿಕೆಗೆ ಪ್ರತಿಯಾಗಿ ಸರ್ಕಾರಕ್ಕೆ ತೆರಿಗೆ ರೂಪದ ಆದಾಯ ಬರಬೇಕೆಂಬ ಭಾವನೆ ರೇಷ್ಮೆ ಉದ್ದಿಮೆಯಲ್ಲಿ ಮೂಡಬೇಕಾಗಿದೆ. ರೇಷ್ಮೆ ಉದ್ಯಮಕ್ಕೆ ಉತ್ತೇಜನ ನೀಡಲು ಕಚ್ಚಾ ರೇಷ್ಮೆ ಹಾಗೂ ರೇಷ್ಮೆ ನೂಲಿನ ಮೇಲಿನ ಮಾರಾಟ ತೆರಿಗೆಯನ್ನು ಹಿಂತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ. ರೇಷ್ಮೆ ವಿನಿಮಯ ಕೇಂದ್ರದಲ್ಲಿ ವಿಧಿಸುತ್ತಿರುವ ಶೇ. 1ರ ಶುಲ್ಕವನ್ನು ಶೇ.2ಕ್ಕೆ ಏರಿಸಲಾಗುವುದು. ಹೀಗಿದ್ದರೂ, ಅಷ್ಟು ಆದಾಯವನ್ನು ಈ ಶುಲ್ಕದ ಮೂಲಕವೇ ಎತ್ತುವ ವಿಶ್ವಾಸವನ್ನು ಉದ್ಯಮವು ಹೊಂದಿರುವುದರಿಂದ, ಸರ್ಕಾರವು ಬೆಲೆ ಸ್ಥಿರೀಕರಣ ನಿಧಿಯಿಂದ ಆರು ಕೋಟಿ ರೂಪಾಯಿಗಳನ್ನು ಮುರಿದುಕೊಳ್ಳುತ್ತದೆ.

ಬಿ) ತೆರಿಗೆ ಇಳಿತಗಳು

i) ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸರಬರಾಜು, ಗೃಹನಿರ್ಮಾಣ, ರಸ್ತೆ ಸಂಪರ್ಕ ಕಾರ್ಯಗಳ ಯೋಜನಾ ಖರ್ಚನ್ನು ಕಡಿಮೆಗೊಳಿಸುವುದಕ್ಕಾಗಿ ರಾಜ್ಯದ ಸರ್ಕಾರಿ ಇಲಾಖೆಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ನಿಗಮ ಇವುಗಳು ಕಂಟ್ರಾಕ್ಟರ್‌ಗಳಿಗೆ ಸರಬರಾಜು ಮಾಡುವ ವಸ್ತುಗಳ ಮೇಲಿನ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಲಾಗುವುದು.

ii) ಗ್ರಾಮೀಣ ನೀರು ಸರಬರಾಜು ಯೋಜನೆಗಳ ಖರ್ಚನ್ನು ತಗ್ಗಿಸಲು ಮಂಡಲ ಮತ್ತು ಗ್ರಾಮ ಪಂಚಾಯಿತಿಗಳಿಗೆ ಮಾರಾಟ ಮಾಡುವ ಕೈ ಪಂಪುಗಳ ಮೇಲಿನ ತೆರಿಗೆಯನ್ನು ಶೇಕಡಾ 13ರಿಂದ 4ಕ್ಕೆ ಇಳಿಸಲಾಗುವುದು;

iii) ರಾಜ್ಯದ ಕೃಷಿಕರಿಗೆ ಸುಧಾರಿತ ನೀರಾವರಿ ಸೌಲಭ್ಯವನ್ನು ನೀಡಲು ನೀರು ಪೂರೈಕೆ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಖರೀದಿಗಳ ಮೇಲಿನ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಲಾಗುವುದು;

iv) ಗ್ರಾಮೀಣ ವಿದ್ಯುದ್ದೀಕರಣ ಕಾರ್ಯಕ್ರಮಗಳಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸುವುದಕ್ಕಾಗಿ ನವದೆಹಲಿಯ ಗ್ರಾಮೀಣ ವಿದ್ಯುದ್ದೀಕರಣ ನಿಗಮದಡಿಯಲ್ಲಿ ಸ್ಥಾಪಿತವಾದ ಗ್ರಾಮೀಣ ವಿದ್ಯುತ್ ಸಹಕಾರಿ ಸಂಸ್ಥೆಗಳು ಖರೀದಿಸಿದ ಸರಕುಗಳ ಮೇಲಿನ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಲಾಗುವುದು;

v) ಸಂಸ್ಕರಿಸಿದ ಪಶು ಆಹಾರದ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವುದಕ್ಕಾಗಿ ಪಶು ಆಹಾರ ತಯಾರಕರು ಖರೀದಿಸುವ ಕಾಕಂಬಿಯ ಮೇಲಿನ ತೆರಿಗೆಯನ್ನು ಶೇಕಡಾ 40 ರಿಂದ ಶೇಕಡಾ 20ಕ್ಕೆ ಇಳಿಸಲಾಗುವುದು;

vi) ಖಾದ್ಯ ತೈಲಗಳ ಬೆಲೆಗಳ ಏರಿಕೆ ತಡೆಯಲು ಸಂಸ್ಕರಿಸಿದ ಖಾದ್ಯ ತೈಲ (Non-refined edible oils)ಗಳ ಮೇಲಿನ ತೆರಿಗೆಯನ್ನು ಶೇಕಡಾ 4ರಿಂದ 3ಕ್ಕೆ ಇಳಿಸಲಾಗುವುದು;

vii) ಕರ್ನಾಟಕದಲ್ಲಿ ಕೈಮಗ್ಗ ವಲಯವನ್ನು ಉತ್ತೇಜಿಸಲು ಕೈಮಗ್ಗಗಳು, ಅವುಗಳ ಬಿಡಿ ಭಾಗಗಳು ಮತ್ತು ಉಪಸಾಧನಗಳ ಮೇಲಿನ ಮಾರಾಟ ತೆರಿಗೆಯನ್ನು ಶೇಕಡಾ 3ರಿಂದ 2ಕ್ಕೆ ಇಳಿಸಲಾಗುವುದು;

viii) ನೆರೆ ರಾಜ್ಯಗಳಿಗೆ ವ್ಯಾಪಾರ ಪಲ್ಲಟವನ್ನು ತಡೆಯಲು ಮತ್ತು ಅದರ ಅಕ್ರಮ ವ್ಯವಹಾರವನ್ನು ತಡೆಯಲು ವನಸ್ಪತಿಯ ಮೇಲಿನ ಮಾರಾಟ ತೆರಿಗೆಯನ್ನು ಶೇಕಡಾ 10ರಿಂದ 5ಕ್ಕೆ ಇಳಿಸಲಾಗುವುದು;

ix) ನಮ್ಮ ರಾಜ್ಯದಲ್ಲಿರುವ ಹೆಚ್ಚಿನ ತೆರಿಗೆಯ ಲಾಭವನ್ನು ಪಡೆದುಕೊಂಡು ಇತರ ರಾಜ್ಯಗಳು ತಮ್ಮಲ್ಲಿರುವ ಬಿಯರ್ ದಾಸ್ತಾನನ್ನು ನಮ್ಮಲ್ಲಿಗೆ ತಂದು ಮಾರುವುದನ್ನು ತಪ್ಪಿಸುವುದಕ್ಕಾಗಿ, ಬಿಯರ್ ಮೇಲೆ ಇರುವ ಬಹು ಹಂತಗಳ ಮಾರಾಟತೆರಿಗೆಯನ್ನು ತೆಗೆದುಹಾಕಿ ಒಂದೇ ಹಂತದ ಮಾರಾಟ ತೆರಿಗೆಯನ್ನು ವಿಧಿಸಲಾಗುವುದು. ಬಳಕೆದಾರನಿಗೆ ಮಾರಾಟ ಮಾಡುವ ಬಿಯರಿನ ಅಚ್ಚೈರು ಬೆಲೆಯನ್ನು ಕಡಿಮೆ ಮಾಡಲು ಈ ವ್ಯವಹಾರದದಲ್ಲಿ ತೊಡಗಿರುವ ಎಲ್ಲರೂ ಪ್ರಯತ್ನಿಸುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ.

ಸಿ) ಇದಲ್ಲದೆ, ಅನುಬಂಧ IX ರಲ್ಲಿ ವಿವರಿಸಿದಂತೆ ಇತರ ಕೆಲವು ಸರಕುಗಳ ಸಂಬಂಧವಲ್ಲಿ ತೆರಿಗೆಯ ದರವನ್ನು ಕಡಿಮೆ ಮಾಡಲು ಮತ್ತು ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ.

ಮೇಲ್ಕಂಡ ವಿನಾಯಿತಿ ಮತ್ತು ಇಳಿತದ ಪರಿಣಾಮವಾಗಿ ಸುಮಾರು 675 ಲಕ್ಷ ರೂಪಾಯಿಗಳ ನಿವ್ವಳ ನಷ್ಟ ಉಂಟಾಗುವುದೆಂದು ಅಂದಾಜು ಮಾಡಲಾಗಿದೆ.

ಬಿ) ತೆರಿಗೆ ವ್ಯವಸ್ಥೆಯ ಸುಧಾರಣಾ ಕ್ರಮಗಳು

ಎ) ರಾಜ್ಯದ ರಾಜ್ಯಸ್ವ ವರಮಾನಗಳನ್ನು ಹೆಚ್ಚಿಸಲು ಹಾಗೂ ತೆರಿಗೆ ವ್ಯವಸ್ಥೆಯನ್ನುಸುಧಾರಿಸಲು ಕೆಳಗಿನಂತೆ ಕೆಲವು ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದೇನೆ;

i) ಪೆಟ್ರೋಲಿಯಂ ಮೂಲದ ಸರಕುಗಳ ಮಿತ ಬಳಕೆಯ ಅರಿವು ಮೂಡಿಸಲು ಪೆಟ್ರೋಲ್ ಮತ್ತು ಡೀಸಲ್ ಮೇಲಿನ ತೆರಿಗೆಯನ್ನು ಶೇಕಡಾ 19 ರಿಂದ 20ಕ್ಕೆ ಏರಿಸಲಾಗುವುದು;

ii) ಎಲ್ಲಾ ಎಣ್ಣೆಕಾಳುಗಳ ಮೇಲೆ ಏಕರೂಪದ ತೆರಿಗೆಯನ್ನು ವಿಧಿಸುವ ಉದ್ದೇಶದಿಂದ ಕೆಲವು ಎಣ್ಣೆಕಾಳುಗಳ ಮೇಲಿನ ತೆರಿಗೆಯನ್ನು ಶೇಕಡಾ 3ರಿಂದ 4ಕ್ಕೆ ಏರಿಸಲಾಗುವುದು;

iii) ಕಾರ್ಯಗತಗೊಳಿಸುವುದರಲ್ಲಿಯ ಗೊಂದಲದಿಂದಾಗಿ ತೆರಿಗೆಗಳ್ಳತನಕ್ಕೆ ಅವಕಾಶ ನೀಡುತ್ತಿದ್ದ ಕೆಲವು ಎಣ್ಣೆಕಾಳು ಹಾಗೂ ಖಾದ್ಯ ತೈಲಗಳ ಮೇಲಿನ ತೆರಿಗೆ ವಜಾವಟ್ಟು ಮತ್ತು ವಿನಾಯಿತಿ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳಲಾಗುವುದು;

iv) ಮಹಾರಾಷ್ಟ್ರದಲ್ಲಿರುವಂತೆ ರಕ್ಷಣಾ ಕ್ಯಾಂಟೀನ್ ಸ್ಟೋರ್ಸ್‌ಗಳ ಮಾರಾಟದಲ್ಲಿ ವಿಲಾಸ ಹಾಗೂ ಅವಶ್ಯಕವಲ್ಲದ ವಸ್ತುಗಳ ಮೇಲೆ ಶೇಕಡಾ 4 ರ ಕಡಿಮೆ ದರದ ತೆರಿಗೆ ವಿಧಿಸಲಾಗುವುದು.

v) ತೆರಿಗೆ ವಿನಾಯಿತಿಯ ಲಾಭವನ್ನು ಹೊರರಾಜ್ಯದಲ್ಲಿನ ಖರೀದಿದಾರರಿಗೆ ನೀಡುವ ಅವಶ್ಯಕತೆಯಿಲ್ಲದಿರುವುದರಿಂದ ಡೀಸಲ್ ಕ್ಯಾಪ್ಟಿವ್ ಜನರೇಷನ್ ಘಟಕ (Diesel Captive Generation Unit) ಗಳ ಅಂತರ ರಾಜ್ಯ ಮಾರಾಟದ ಮೇಲೆ ಶೇಕಡಾ 4 ರಂತೆ ತೆರಿಗೆ ವಿಧಿಸಲಾಗುವುದು;

vi) ಶ್ರೀಮಂತರೇ ಹೆಚ್ಚು ಬಳಸುವ ಇಂಗಾಲಾಮ್ಲ ಮಿಶ್ರಿತ ನೀರಿನ ಪೇಯ (Aereated Waters) ಗಳ ಮೇಲಿನ ಪ್ರಥಮ ಹಂತದ ತೆರಿಗೆಯನ್ನು ಶೇಕಡಾ 10ರಿಂದ 13ಕ್ಕೆ ಏರಿಸಲು ಹಾಗೂ ಅಂತಿಮ ತೆರಿಗೆಯನ್ನು ಶೇಕಡಾ 3ರಿಂದ 5ಕ್ಕೆ ಏರಿಸಲು ಉದ್ದೇಶಿಸಲಾಗಿದೆ;

vii) ಸಮಾಜದ ಮೇಲುವರ್ಗದ ಜನರೇ ಬಳಸುವ ನಯಮಾಡಿದ ಗ್ರಾನೈಟ್ ಕಲ್ಲಿನ(Polished Granite Stones) ಮೇಲಿನ ತೆರಿಗೆಯನ್ನು ಶೇಕಡ 8 ರಿಂದ 15ಕ್ಕೆ ಏರಿಸಲಾಗುವುದು;

viii) ಬಳಕೆದಾರರಿಗೆ ತೆರಿಗೆ ಇಳಿತದ ಲಾಭ ಮುಟ್ಟದ ಕಾರಣ ಕ್ವಾರ್ಟ್ಜ್ ಗಡಿಯಾರಗಳ ಮೇಲಿನ ತೆರಿಗೆಯನ್ನು ಶೇಕಡಾ 4ರಿಂದ 10ಕ್ಕೆ ಏರಿಸಲಾಗುವುದು;

ix) ನೆರೆ ರಾಜ್ಯಗಳಲ್ಲಿರುವ ತೆರಿಗೆ ದರಗಳಿಗೆ ಸಮವಾಗುವಂತೆ ಮೆಣಸಿನ ಮೇಲೆ ತೆರಿಗೆಯನ್ನು ಶೇಕಡಾ 5ರಿಂದ 6ಕ್ಕೆ ಏರಿಸಲಾಗುವುದು;

x) ನೆರೆ ರಾಜ್ಯಗಳಲ್ಲಿರುವ ತೆರಿಗೆ ದರಗಳಿಗೆ ಸಮವಾಗುವಂತೆ ಸಿಮೆಂಟ್ ಮೇಲಿನ ತೆರಿಗೆಯನ್ನು ಶೇಕಡ 13ರಿಂದ 15ಕ್ಕೆ ಏರಿಸಲಾಗುವುದು.

(ಬಿ) ಮೇಲಿನ ಕ್ರಮಗಳನ್ನೊಳಗೊಂಡಂತೆ, ಅನುಸೂಚಿ Xರಲ್ಲಿ ವಿವರಿಸಿದ ಇನ್ನೂ ಬೇರೆ ಕೆಲವು ವಸ್ತುಗಳ ಮೇಲಿನ ತೆರಿಗೆಯನ್ನು ಏರಿಸಲು ಪ್ರಸ್ತಾವಿಸಲಾಗಿದೆ.

(ಸಿ) ಈ ಎಲ್ಲಾ ಕ್ರಮಗಳ ನಿವ್ವಳ ವಾರ್ಷಿಕ ಗಳಿಕೆ 1385 ಲಕ್ಷ ರೂಪಾಯಿಗಳಾಗುವುದೆಂದೂ ನಿರೀಕ್ಷಿಸಲಾಗಿದೆ.

97. ಪ್ರವೇಶ ತೆರಿಗೆ

ವಿನಾಯಿತಿಗಳು

i) ರೋಗಗ್ರಸ್ಥ ಘಟಕಗಳಿಗೆ ನೀಡಲು, ಹೆಚ್.ಡಿ.ಪಿ.ಇ. ವೂವನ್ ಫ್ಯಾಬ್ರಿಕ್ ತಯಾರಕರನ್ನು ಹೆಚ್.ಡಿ.ಪಿ.ಇ. ಎಲ್.ಡಿ.ಪಿ.ಇ. ಗ್ರಾನ್ಯೂಲ್ಸ್ ಮೇಲೆ ತೆರಬೇಕಾದ ಪ್ರವೇಶ ತೆರಿಗೆಯಿಂದ ವಿನಾಯಿತಿನೀಡಲು; ಮತ್ತು

ii) ಕೃಷಿವಸ್ತುಗಳ ಪ್ಯಾಕಿಂಗ್ ಸಾಮಗ್ರಿಯಾಗಿ ಹೆಚ್ಚಾಗಿ ಉಪಯೋಗಿಸಲ್ಪಡುವ 'ಬಟಾರ್' ಗಳನ್ನು ತೆರಿಗೆಯಿಂದ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ. ಮೇಲಿನ ಕ್ರಮಗಳಿಂದ ಸುಮಾರು 30 ಲಕ್ಷ ರೂಪಾಯಿ ರಾಜಸ್ವ ನಷ್ಟವಾಗುವುದೆಂದು ಅಂದಾಜು ಮಾಡಲಾಗಿದೆ.

98. ವೃತ್ತಿ ತೆರಿಗೆ

i) ರಾಜ್ಯ ಬೊಕ್ಕಸದ ಆದಾಯವನ್ನು ಹೆಚ್ಚಿಸಲು, ನಾನು ಕೆಲವು ಕ್ರಮಗಳನ್ನು ಪ್ರಕಟಿಸುತ್ತೇನೆ.

(ಎ) ಪೆಟ್ರೋಲ್ ಬಂಕ್ ಮತ್ತು ಸರ್ವೀಸ್ ಸ್ಟೇಷನ್ ಒಡೆಯರ ಹಾಗೂ

(ಬಿ) ಚಿಟ್ ಫಂಡ್ ನಡೆಸುವ ವ್ಯಕ್ತಿಗಳು ಸಂಸ್ಥೆಗಳ ಮೇಲಿನ ವೃತ್ತಿ ತೆರಿಗೆಯನ್ನು ವಾರ್ಷಿಕ 500 ರೂಪಾಯಿಗಳಿಂದ ಅನುಕ್ರಮವಾಗಿ ವಾರ್ಷಿಕ 1,000 ಮತ್ತು 2,500 ರೂಪಾಯಿಗಳಿಗೆ ಏರಿಸಲಾಗುವುದು;ಮತ್ತು

ii) ಕೆಳಗೆ ಸೂಚಿಸಿರುವ ವರ್ಗದ ವ್ಯಕ್ತಿಗಳನ್ನು ವೃತ್ತಿತೆರಿಗೆ ಕಾಯ್ದೆಯ ಅನುಸೂಚಿಗೆ ಸೇರಿಸಿ ಹೀಗೆ ತೆರಿಗೆಯನ್ನು ವಿಧಿಸಲಾಗುವುದು;

ವರ್ಗದ ವ್ಯಕ್ತಿಗಳು	ತೆರಿಗೆ ದರ
1. ವೀಡಿಯೋ ಕ್ಯಾಸೆಟ್ ಲೈಬ್ರರಿಗಳುವಾರ್ಷಿಕ	600 ರೂ. ಗಳು.
2. ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಬೋಧನಾ ಕಾಲೇಜುಗಳು /ಸಂಸ್ಥೆಗಳು ವಾರ್ಷಿಕ	2,500 ರೂ. ಗಳು.

ಈ ಪ್ರಸ್ತಾವನೆಗಳಿಂದ ಸುಮಾರು 110 ಲಕ್ಷ ರೂಪಾಯಿಗಳ ಆದಾಯ ಬರುವ ನಿರೀಕ್ಷೆ ಇದೆ.

99. ಜೂಜು ತೆರಿಗೆ

ಜೂಜು ತೆರಿಗೆ ದರಗಳನ್ನು ಪ್ರಸಕ್ತ ವರ್ಷದಲ್ಲಿ ಪರಿಷ್ಕರಿಸಲಾಗಿದೆ. ತೆರಿಗೆಯ ಹೆಚ್ಚಿನ ದರದಿಂದಾಗಿ ಕಾನೂನುಬಾಹಿರ ಜೂಜು ನಡೆಯುತ್ತಿದೆಯೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ರೇಸಿಂಗ್ ಪ್ರಾಧಿಕಾರವು ಕಂಪ್ಯೂಟರ್ ಮೂಲಕ ಟೋಟಲೈಸೇಟರನ್ನು ನಡೆಸಿದ್ದರೂ ಕಾನೂನುಬಾಹಿರ ಜೂಜನ್ನು ತಡೆಗಟ್ಟಲಾಗಲಿಲ್ಲ.

100. ಆದ್ದರಿಂದ ಟೋಟಲೈಸೇಟರ್ ತೆರಿಗೆ ಮತ್ತು ಜೂಜು ತೆರೆಗೆ ದರಗಳನ್ನು ಅನುಬಂಧ XI ರಲ್ಲಿ ನಿರ್ದಿಷ್ಟಪಡಿಸಿರುವಂತೆ ಇಳಿಸಲು ನಾನು ಉದ್ದೇಶಿಸಿದ್ದೇನೆ. ಇದರಿಂದ ರಾಜ್ಯಕ್ಕೆ ಒಟ್ಟು 12 ಕೋಟಿ ರೂಪಾಯಿ ಆದಾಯ ಬರುವುದು.

101. ಕರ್ನಾಟಕ ರೇಸಿಂಗ್ ಬೋರ್ಡನ್ನು ಅದು ಯಾವುದೇ ಉಪಯುಕ್ತ ಉದ್ದೇಶವನ್ನು ಈಡೇರಿಸದ ಕಾರಣ, ರದ್ದುಪಡಿಸಲು ಸಹ ನಾನು ಉದ್ದೇಶಿಸಿದ್ದೇನೆ.

102. ಕಡೆಯದಾಗಿ, ಸಂಧಿಗ್ಧತೆಗಳನ್ನು ತೆಗೆದುಹಾಕಲು, ಪ್ರಕ್ರಿಯೆಗಳನ್ನು ಸುಧಾರಿಸಲು ಹಾಗೂ ಆಡಳಿತವನ್ನು ಚುರುಕುಗೊಳಿಸುಲು ವಾಣಿಜ್ಯ ತೆರಿಗೆ ಅಧಿನಿಯಮಗಳಲ್ಲಿ ಕೆಲವು ಮಾರ್ಪಾಡುಗಳ ಅವಶ್ಯಕತೆಯಿದೆ. ಆ ಬಗ್ಗೆ ಅವಶ್ಯವಾದ ಕ್ರಮಗಳನ್ನು ಸಂಬಂಧಪಟ್ಟ ಮಸೂದೆಗಳಲ್ಲಿ ಅಳವಡಿಸಲಾಗುವುದು.

103. ಪರಿಷ್ಕೃತ ಅಂದಾಜುಗಳು 1990-91

ಈ ವರ್ಷದ ಮಧ್ಯಭಾಗದಲ್ಲಿ ಮಾರ್ಪಡಿಸಿದ್ದ ಅಂದಾಜುಗಳಿಗೆ ಹೋಲಿಕೆ ಮಾಡಿದ್ದ ಪರಿಷ್ಕೃತ ಅಂದಾಜುಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಬಜೆಟ್ ಅಂದಾಜುಗಳಿಗೆ ಹೋಲಿಕೆ ಮಾಡಿದರೆ 1990-91ರಲ್ಲಿ ರಾಜ್ಯ ತೆರಿಗೆ ಆದಾಯಗಳು ಬಜೆಟ್ ಅಂದಾಜುಗಳಿಗಿಂತಲೂ 303.60 ಕೋಟಿ ರೂಪಾಯಿಗಳಷ್ಟು ಹೆಚ್ಚಳ ತೋರಿಸುವುದೆಂದು ನಿರೀಕ್ಷಿಸಲಾಗಿದೆ. ಇದು, ಬಜೆಟ್‌ನಲ್ಲಿ ಪ್ರಕಟಿಸಿರುವ ತೆರಿಗೆ ಪ್ರಸ್ತಾವಗಳಿಂದ ಆದ ಪರಿಣಾಮ ಹಾಗೂ ಕಟ್ಟು ನಿಟ್ಟಿನ ಜಾರಿ-ಇವೆರಡನ್ನು ಪ್ರತಿಬಿಂಬಿಸುತ್ತದೆ. ಕೇಂದ್ರ ತೆರಿಗೆಗಳಲ್ಲಿನ ನಮ್ಮ ಪಾಲು ಬಜೆಟ್ ಅಂದಾಜಿಗೆ ಮೀರಿ 5.39ಕೋಟಿ ರೂಪಾಯಿ ಹೆಚ್ಚಳವನ್ನು ತೋರಿಸುತ್ತದೆ. ಭಾರತ ಸರ್ಕಾರವು ಅಳವಡಿಸಿಕೊಂಡ ಪರಿಷ್ಕೃತ ವಿಧಾನದಿಂದಾಗಿ ಅಂದರೆ ಜವಾಹರ್ ರೋಜಗಾರ್ ಯೋಜನೆ ನಿಧಿಗಳನ್ನು ಈಗ ರಾಜ್ಯ ಸರ್ಕಾರದ ಮೂಲಕ ನೀಡುವುದರಿಂದ ರೆವಿನ್ಯೂ ವೆಚ್ಚದಲ್ಲಿ 102.18 ಕೋಟಿ ರೂಪಾಯಿ ಹೆಚ್ಚಳ ತೋರಿ ಬರುತ್ತದೆ. ತೆರಿಗೆ ಆದಾಯಗಳಲ್ಲಿಯ ಹೆಚ್ಚಳದಿಂದಾಗಿ ರೆವಿನ್ಯೂ ಲೆಕ್ಕದ ಕೊರತೆಯನ್ನು 194.31 ಕೋಟಿ ರೂಪಾಯಿಗಳಿಂದ 27.98 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮಕ್ಕೆ ಕೊಟ್ಟಿರುವ 244 ಕೋಟಿ ರೂಪಾಯಿ ಸಾಲವನ್ನು ಈಕ್ವಿಟಿಯಾಗಿ ಮಾರ್ಪಡಿಸಿದ್ದರಿಂದಾಗಿ, ಸಾಲಗಳ ಮತ್ತು ಮುಂಗಡಗಳ ವಸೂಲಿ ಮತ್ತು ಬಂಡವಾಳ ವೆಚ್ಚ ಎರಡನ್ನೂ ಹೆಚ್ಚಿನ ಮಟ್ಟಗಳಲ್ಲಿ ತೋರಿಸಲಾಗಿದೆ. 4.30 ಕೋಟಿ ರೂಪಾಯಿ ಬಂಡವಾಳ ಲೆಕ್ಕದ ಮೇಲಿನ ನಿವ್ವಳ ಉಳಿತಾಯವು ಬಜೆಟ್ ಅಂದಾಜುಗಳ ಪ್ರಕಾರ ಲೆಕ್ಕ ಹಾಕಲಾಗಿದ್ದ ಉಳಿತಾಯಕ್ಕಿಂತಲೂ ಸ್ವಲ್ಪ ಕಡಿಮೆಯಾಗಿದೆ.

104. ವರ್ಷದ ಆರಂಭಶಿಲ್ಕು (+)12.54 ಕೋಟಿ ರೂಪಾಯಿ. 1990-91ನೇ ವರ್ಷಕ್ಕಾಗಿ ನಿರೀಕ್ಷಿಸಲಾದ 23.68 ಕೋಟಿ ರೂಪಾಯಿ ಕೊರತೆಯನ್ನು ಹೊಂದಾಣಿಕೆ ಮಾಡಿದ ನಂತರ, 1990-91ರ ಅಂತ್ಯದ ಶಿಲ್ಕು (-) 11.14 ಕೋಟಿ ರೂಪಾಯಿ ಆಗುವ ನಿರೀಕ್ಷೆಯಿದೆ.

105. ಬಜೆಟ್ ಅಂದಾಜುಗಳು 1991-92

ರಾಜ್ಯ ತೆರಿಗೆಗಳಿಂದ, 1990-91ರಲ್ಲಿ ಬಂದಿದ್ದಕ್ಕಿಂತಲೂ ಹೆಚ್ಚಿಗೆಯಾಗಿ 4115.37 ಕೋಟಿ ರೂಪಾಯಿಗಳು ದೊರಕುವ ನಿರೀಕ್ಷೆಯಿದೆ. ಅನೇಕ . ತೆರಿಗೆಗಳ ಪೈಕಿ ಮಾರಾಟ ತೆರಿಗೆಯಿಂದ ಅತ್ಯಂತ ಹೆಚ್ಚಿನ ಆದಾಯ ಬರಲಿದ್ದು ಇದರಿಂದ 231.00 ಕೋಟಿ ರೂಪಾಯಿ ಆದಾಯ ದೊರಕುವ ನಿರೀಕ್ಷೆಯಿದೆ. ಕೇಂದ್ರ ತೆರಿಗೆಗಳಲ್ಲಿಯ ನಮ್ಮ ಪಾಲು 61.43 ಕೋಟಿ ರೂಪಾಯಿಗೆ ಹೆಚ್ಚುವ ಸಂಭವವಿದೆ. 1991-92ರ ರಾಜಸ್ವ ಜಮೆ 4817.91 ಕೋಟಿ ರೂಪಾಯಿ ಆಗಬಹುದೆಂದು ನಿರೀಕ್ಷಿಸಲಾಗಿದೆ. ನಿವ್ವಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯನ್ನು ಅನುಬಂಧ-XIIರಲ್ಲಿ ಕೊಡಲಾಗಿದೆ. 1991-92ರ ರಾಜಸ್ವ ವೆಚ್ಚ 4815-46 ಕೋಟಿ ರೂಪಾಯಿಯಾಗಲಿದ್ದು ಇದು ಹೆಚ್ಚುವರಿ ಸಂಪನ್ಮೂಲ

ಸಂಗ್ರಹಣೆ ಕ್ರಮಗಳಿಂದ ಆದಾಯ ಬರುವುದಕ್ಕೂ ಮೊದಲು ರಾಜಸ್ವ ಲೆಕ್ಕದ ಮೇಲೆ 2.45 ಕೋಟಿ ರೂಪಾಯಿಗಳ ಸ್ವಲ್ಪ ಉಳಿತಾಯವನ್ನುಂಟು ಮಾಡುತ್ತದೆ. ಬಂಡವಾಳಲೆಕ್ಕದ ವ್ಯವಹಾರಗಳನ್ನು ಗಣನೆಗೆ ತೆಗೆದುಕೊಂಡರೆ ವರ್ಷದಲ್ಲಿ 54.53 ಕೋಟಿ ರೂಪಾಯಿಗಳ ಕೊರತೆ ಉಂಟಾಗಲಿದ್ದು ಅದು, 11.14 ಕೋಟಿ ರೂಪಾಯಿ ಆರಂಭದ ಕೊರತೆಯನ್ನು ಗಣನೆಗೆ ತೆಗೆದುಕೊಂಡರೆ (-) 63.22 ಕೋಟಿ ರೂಪಾಯಿ ಅಂತ್ಯದ ಶಿಲ್ಕು ಆಗುತ್ತದೆ. ಇದನ್ನು ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯಿಂದ ಸ್ವಲ್ಪ ಮಟ್ಟಿಗೆ ತುಂಬಿಕೊಳ್ಳಲಾಗುವುದು. ಉಳಿದ ಕೊರತೆಯನ್ನು ಸಹ ಬಹುಮಟ್ಟಿಗೆ, ವರ್ಷಾವಧಿಯಲ್ಲಿ ತೆರಿಗೆಗಳಿಂದ ನಿರೀಕ್ಷಿಸುವ ಸ್ವಾಭಾವಿಕ ಹೆಚ್ಚಳದಿಂದ ಮತ್ತು ಹೆಚ್ಚು ದಕ್ಷತೆಯಿಂದ ವಸೂಲಿ ಮಾಡುವ ಮೂಲಕ ತುಂಬಿಕೊಳ್ಳಲಾಗುವುದು.

106. 1991-92ರ ಬಜೆಟ್ ಅಂದಾಜುಗಳು

1991-92ನೇ ಸಾಲಿನ ಕೊರತೆಗಳನ್ನು ವರ್ಷಾವಧಿಯಲ್ಲಿ ತೆರಿಗೆಗಳಿಂದ ನಿರೀಕ್ಷಿಸಿರುವ ಮೊತ್ತದಿಂದ ಮತ್ತು ದಕ್ಷ ರೀತಿಯಲ್ಲಿ ತೆರಿಗೆ ಸಂಗ್ರಹಿಸುವ ಮೂಲಕ ಹಾಗೂ ಕೇಂದ್ರದ ನೆರವಿನ ನ್ಯಾಯೋಚಿತ ಹಂಚಿಕೆ ಮೂಲಕ ಸರಿದೂಗಿಸಲೂ ನಿರೀಕ್ಷಿಸುತ್ತೇನೆ. ನಾನು ಈಗ 1991-92ನೇ ಸಾಲಿನ ಬಜೆಟ್ ಅಂದಾಜುಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ ಹಾಗೂ ಸೆಪ್ಟೆಂಬರ್ 30, 1991ಕ್ಕೆ ಕೊನೆಗೊಳ್ಳುವ ಆರು ತಿಂಗಳ ಅವಧಿಗಾಗಿ ಲೇಖಾನುದಾನ ನೀಡಬೇಕಾಗಿ ವಿನಂತಿಸುತ್ತೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನೊಳಗೊಂಡಂತೆ ಇತರೆ ಬಿ.ಜೆ.ಪಿ. ಸದಸ್ಯರು ಈ ಬಜೆಟ್‌ನಲ್ಲಿ ರೈತರ ಸಾಲದ ಬಗ್ಗೆ ಆಗಲಿ, ರೈತರ ಸಮಸ್ಯೆಗಳ ಬಗ್ಗೆ ಆಗಲಿ ಏನನ್ನು ಪ್ರಸ್ತಾಪ ಮಾಡಿಲ್ಲ, ಆದ್ದರಿಂದ ಈ ಬಜೆಟ್‌ನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆಂದು ಹೇಳಿ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ ; ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಏನನ್ನೂ ಪ್ರಸ್ತಾಪ ಮಾಡದೆ ಇರುವುದರಿಂದ ನಾನು ಈ ಬಜೆಟ್ ಭಾಷಣವನ್ನು ಹರಿದು ಹಾಕುತ್ತೇನೆ.

(ಶ್ರೀ ಎಸ್.ಎಚ್. ಕೌಜಲಗಿಯವರು ಬಜೆಟ್ ಭಾಷಣದ ಪ್ರತಿಯನ್ನು ಹರಿದು ಬಿಸಾಕಿದರು)

(ಗೊಂದಲ)

ಅಧ್ಯಕ್ಷರು; ಒಂದು ಮುಖ್ಯವಾದ ಪ್ರಕಟಣೆ ಇದೆ; ತಾವೆಲ್ಲ ಕುಳಿತುಕೊಳ್ಳಿ.

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

		ಬಜೆಟ್ ಅಂದಾಜು 1990-91	ಪರಿಷ್ಕೃತ ಅಂದಾಜು 1990-91	ಬಜೆಟ್ ಅಂದಾಜು 1991-92
	ಪ್ರಾರಂಭದ ಶಿಲ್ಕು	(-)19.73	12.54	(-)11.14
	ಎ. ರಾಜಸ್ವ ಲೆಕ್ಕ			
I	**ಜಮೆ**			
	ರಾಜ್ಯತೆರಿಗೆ	2151.10	2454.70	2870.07
	ಕೇಂದ್ರತೆರಿಗೆಯಲ್ಲಿ ಪಾಲು	654.96	660.35	721.78
	ಕೇಂದ್ರಸರ್ಕಾರದ ಅನುದಾನಗಳು	315.79	458.28	584.51
	ತೆರಿಗೆಯೇತರ ರಾಜಸ್ವ	694.07	511.10	641.55
	ಒಟ್ಟು-ಎ. I	3815.92	4084.43	4817.91
II	**ವೆಚ್ಚ**			
	ಸಾಮಾಜಿಕ ಸೇವೆ	1596.38	1620.03	1863.68
	ಆರ್ಥಿಕ ಸೇವೆ	1066.67	1172.07	1384.52
	ಸಾಮಾನ್ಯ ಸೇವೆ	1246.13	1219.61	1455.66
	ಸಹಾಯಾನುದಾನ ಮತ್ತು ಅಂಶದಾನ	101.05	100.70	111.60
	ಒಟ್ಟು -ಎ II	4010.23	4112.41	4815.46
ಎ.	**ರಾಜಸ್ವಲೆಕ್ಕ**			
	ಹೆಚ್ಚುವರಿ	(+)(-)194.31	(-)27.98	(+)2.45
	ಕೊರತೆ (-)			

(ಕೋಟಿ ರೂಪಾಯಿಗಳಲ್ಲಿ)

	ಬಜೆಟ್ ಅಂದಾಜು 1990-91	ಪರಿಷ್ಕೃತ ಅಂದಾಜು 1990-91	ಬಜೆಟ್ ಅಂದಾಜು 1991-92
ಬಿ. ಬಂಡವಾಳ ಲೆಕ್ಕ			
I ಜಮೆ			
ಭಾರತ ಸರ್ಕಾರದಿಂದ ಸಾಲ	482.72	476.14	670. 71
ಬಹಿರಂಗ ಮಾ'ರುಕಟ್ಟೆ ಸಾಲ(ನಿವ್ವಳ)	123.50	136.57	150.23
ಎಲ್ಐಸಿ, ಆರ್ಬಿಐ, ಜಿಐಸಿ ಮತ್ತು ಎನ್ಸಿಡಿಸಿ ಇವುಗಳಿಂದ ಸಾಲ	23.34	23.24	27.54
ಸಾಲಗಳು ಮತ್ತು ಮುಂಗಡಗಳಿಂದ ವಸೂಲಿ	223.75	387.12	130.56
ಸರ್ಕಾರಿ ಲೆಕ್ಕ (ನಿವ್ವಳ)ಇತ್ಯಾದಿ	138.37	142.93	71.71
ಒಟ್ಟು ಬಿ. I	**991.68**	**1166.00**	**1050.75**
II ಬಟವಾಡೆ			
ಬಂಡವಾಳ ವೆಚ್ಚ (ನಿವ್ವಳ)	431.15	682.75	533.20
ಕೇಂದ್ರಸಾಲಗಳ ಮರುಸಂದಾಯ	155.02	150.65	172.10
ಎಲ್ಐ.ಸಿ, ಆರ್ಬಿಐ, ಜಿಐಸಿ ಮತ್ತು ಎನ್ಸಿಡಿಸಿ ಇವುಗಳಿಗೆ ಸಾಲಗಳ ಮರುಸಂದಾಯ	10.75	10.35	10.39
ಸಾಲಗಳ ಮತ್ತು ಮುಂಗಡಗಳ ಬಟವಾಡೆ	384.95	317.95	389.59
ಒಟ್ಟು- ಬಿ II.	**981.87**	**1161.70**	**1105.28**
ಬಿ. ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ	(+)9.81	(+) 4.30	(-)54.53
ಸಿ. ವರ್ಷದ ಒಟ್ಟು ಹೆಚ್ಚಳ/ಕೊರತೆ	(-) 184.50	(-) 23.68	(-) 52.08
ಡಿ. ಮುಕ್ತಾಯದ ಶಿಲ್ಕು	(-) 204.23	(-)11.14	(-)63.22
ವಜಾ			
ಎಆರ್ಎಮ್		147.50	
ಒಟ್ಟು ಹೆಚ್ಚುವರಿ ಕೊರತೆ	(-) 56.73	(-)11.14	(-)53.06

* ಪರಿಷ್ಕೃತ ತೆರಿಗೆ ಅಂದಾಜುಗಳಲ್ಲಿ ಸೇರಿಸಲಾಗಿದೆ.

ಅನುಬಂಧ - I

ಒಟ್ಟು ಮಾರುಕಟ್ಟೆ ಸಾಲಗಳಲ್ಲಿ ರಾಜ್ಯಗಳ ಪಾಲು

(ಕೋಟಿ ರೂಪಾಯಿಗಳಲ್ಲಿ)

ಅವಧಿ		ಒಟ್ಟು ಮಾರುಕಟ್ಟೆ ಸಾಲುಗಳು	ಎಲ್ಲ ರಾಜ್ಯಗಳ ಪಾಲು	(2) ರಲ್ಲಿ (3)ರ ಶೇಕಡಾ ಪ್ರಮಾಣ
(1)		(2)	(3)	(4)
ಮೊದಲನೆ ಪಂಚವಾರ್ಷಿಕ ಯೋಜನೆ		204.00	155.00	76.00
ಎರಡನೆ ಪಂಚವಾರ್ಷಿಕ ಯೋಜನೆ		772.00	356.00	46.10
ಮೂರನೆ ಪಂಚವಾರ್ಷಿಕ ಯೋಜನೆ		823.00	516.00	62.70
ವಾರ್ಷಿಕ ಯೋಜನೆಗಳು		725.00	335.00	46.20
ನಾಲ್ಕನೆ ಪಂಚವಾರ್ಷಿಕ ಯೋಜನೆ		2,135.00	568.00	26.60
ಐದನೆ ಪಂಚವಾರ್ಷಿಕ ಯೋಜನೆ		6,388.00	2,529.00	39.60
ವಾರ್ಷಿಕ ಯೋಜನೆ	1979-80	2,371.00	521.00	22.00
ಆರನೆ ಪಂಚವಾರ್ಷಿಕ ಯೋಜನೆ		22,120.00	4,719.00	21.30
ಏಳನೆ ಪಂಚವಾರ್ಷಿಕ ಯೋಜನೆ (ಮೂಲ)		30.562.00	9.942.00	32.50
ವಾರ್ಷಿಕ ಯೋಜನೆ	1985-86	6,700.00	1,600.00	23.90
	1986-87	6,463.15	1,163.10	17.99
	1987-88	8,506.01	1,505.60	17.70
	1988-89	9,252.72	2,002.08	21.64
	1989-90	9,654.00	2,249.00	23.29

ಅನುಬಂಧ - II

(ಪ್ಯಾರಾ 11)

1990 ಮತ್ತು 1991-92ನೇ ವರ್ಷಗಳಿಗಾಗಿ ಬಂಡವಾಳ ವೆಚ್ಚದ ತುಲನಾತ್ಮಕ ಪಟ್ಟಿ.

(ಕೋಟಿ ರೂ.ಗಳಲ್ಲಿ)

	ವಲಯ	*1990-91*	*1991-92*
ಎ.	**ಆರ್ಥಿಕ ಸೇವೆಗಳು.**		
	ಕೃಷಿ ಮತ್ತು ಸಂಬಂಧಿತ ಸೇವೆಗಳು	97.60	154.99
	ಗ್ರಾಮೀಣಾಭಿವೃದ್ಧಿ	85.99	110.91
	ವಿಶೇಷ ಪ್ರದೇಶ ಕಾರ್ಯಕ್ರಮ (ಹೈದರಾಬಾದು ಕರ್ನಾಟಕ ಮತ್ತು ಗಡಿ ಪ್ರದೇಶಾಭಿವೃದ್ಧಿ)	45.00	60.00
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	212.33	247.13
	ವಿದ್ಯುಚ್ಛಕ್ತಿ	276.00	372.12
	ಉದ್ಯಮ ಮತ್ತು ಖನಿಜಗಳು	76.44	96.67
	ಸಾರಿಗೆ	59.60	93.13
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	1.15	1.88
	ಸಾಮಾನ್ಯ ಆರ್ಥಿಕ ಸೇವೆಗಳು	5.74	12.86
ಬಿ	**ಸಾಮಾಜಿಕ ಸೇವೆಗಳು**		
	ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ	72.55	78.41
	ಆರೋಗ್ಯ	41.52	47.00
